ಸದನವು ಪನ: ಮದ್ಯಾಹ್ನ 3.40 ಗಂಟೆಗೆ ಸಮಾವೇಶಗೊಂಡಿತು
(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಪೀಠವನ್ನು ಅಲಂಕರಿಸಿದ್ದರು)

5. ಘನತೆವತ್ತ ರಾಷ್ಟ್ರಪತಿಗಳು ಮಾಡಿದ ಭಾಷಣದ ಮೇಲಿನ ಮುಂದುವರೆದ ಚರ್ಚೆ:-

ಅಧ್ಯಕ್ಷರು : ಮಾನ್ಯ ವಾಟಾಳ್‌ನಾಗರಾಜ್‌ರವರೇ ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ವಾಟಾಳ್‌ರವರೇ, ನೀವು ಯಾರಿಗೆ ಮಾತನಾಡುತ್ತೀರಿ? ಮಾನ್ಯ ಮುಖ್ಯಮಂತ್ರಿಗಳಾಗಲೀ, ಮಾನ್ಯ ಉಪ ಮುಖ್ಯಮಂತ್ರಿಗಳಾಗಲೀ ಇಲ್ಲ,

ಶ್ರೀ ವಾಟಾಳ್ ನಾಗರಾಜ್ : ನಮಗೆ ನಾವೇ ಮಾತನಾಡಿಕೊಳ್ಳುವುದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಗಂಬೀರವಾಗಿ ಚರ್ಚೆ ಮಾಡದಿದ್ದರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ : ನಿಮಗೆ ನೀವೇ ಮಾತನಾಡಿಕೊಂಡರೆ, ಅಲ್ಲಿಗೆ ಪ್ರಯೋಜನವೇನು? ರಾಷ್ಟ್ರಪತಿಯವರ ಭಾಷಣದ ಮೇಲೆ ಗಂಭೀರವಾಗಿ ಚರ್ಚೆ ನಡೆಯುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಇಲ್ಲ, ಉಪ ಮುಖ್ಯಮಂತ್ರಿಗಳೂ ಇಲ್ಲ ಎಂದರೆ ಹೇಗಾಗುತ್ತದೆ?

(ಗೊಂದಲ)

ಅಧ್ಯಕ್ಷರು : ಈಗ ನಮ್ಮ ಚೀಫ್ ವಿಪ್ ಎಲ್ಲಿದ್ದಾರೆ?

ಶ್ರೀ ವಾಟಾಳ್ ನಾಗರಾಜ್ : ತಾವೇನು ಹೇಳಿದ್ದೀರಿ? ರಾಷ್ಟ್ರಪತಿಯವರ ಭಾಷಣದ ಮೇಲೆ ಬಹಳ ಗಂಭೀರವಾಗಿ ಚರ್ಚೆ ನಡೆಯಬೇಕು, ಎಲ್ಲರೂ ಭಾಗವಹಿಸಬೇಕು ಎಂದು ಹೇಳಿದ್ದೀರಿ. ಅದೂ ಮೊದಲನೆಯ ದಿವಸವೇ ಹೀಗಾದರೆ ಹೇಗೆ?

ಅಧ್ಯಕ್ಷರು : ಮಾನ್ಯ ಸಚಿವರಾದ ಉದಾಸಿಯವರೇ, ಈಗ ನೀವು ಟ್ರೆಜರಿ ಬೆಂಚ್ ಹಿಂದೆ ಇದ್ದೀರಿ, ಈಗ ನೀವೇ ನೋಡಿ, ನಿಮ್ಮ ಕಡೆ ಮಂತ್ರಿಗಳೂ ಇಲ್ಲ, ಸದಸ್ಯರುಗಳೂ ಇಲ್ಲ, ರಾಷ್ಟ್ರಪತಿಯವರ ಭಾಷಣದ ಮೇಲಿನ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಗಂಭೀರತೆ ಇದೇಯೇ ಇಲ್ಲವೇ ಎನ್ನುವುದು ನನಗೆ ತಿಳಿಯುತ್ತಿಲ್ಲ, ಯಾವಾಗ ಬರುತ್ತಾರೆ?

ಡಾ: ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ನಾವು ಸದಸ್ಯರು ಸದನದಲ್ಲಿ ಇದ್ದೇವೆ.

ಅಧ್ಯಕ್ಷರು : ನೋಡಿ, ಈ ಹೌಸ್ ನಿಮಗೋಸ್ಕರ ಕಾಯ್ದುಕೊಂಡು ಕುಳಿತುಕೊಳ್ಳಲು ಆಗುವುದಿಲ್ಲ, ಈ ಕಡೆ ಮಂತ್ರಿಗಳೂ ಇಲ್ಲ, ಶಾಸಕರೂ ಇಲ್ಲ, ಯಾರೂ ಇಲ್ಲ, ನಿಮ್ಮ ಚೀಫ್ ವಿಪ್ ಎಲ್ಲಿಗೆ ಹೋಗಿದ್ದಾರೆ? ಅವರಿಗೆ

ಸರಿಯಾಗಿ ಹೇಳಿ. ಆಯಿತು ಮಾನ್ಯ ವಾಟಾಳ್‌ರವರೇ, ಮಂತ್ರಿಗಳು ಬರುತ್ತಾರೆ, ನೀವು ಮಾತನಾಡಿ. Let us not waste time. ನೀವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈಗ ಸದನದಲ್ಲಿ ಅವರೆಲ್ಲರೂ ಹಾಜರಿರಬೇಕೆಂದೂ ನನ್ನದೇನೂ ಒತ್ತಾಯವಿಲ್ಲ, ಇದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ, ಏಕೆಂದರೆ ತಾವು ಬೆಳಿಗ್ಗೆ 9.30 ಗಂಟೆಗೆ ಎಲ್ಲಾ ವಿರೋಧ ಪಕ್ಷದ ಮುಖಂಡರುಗಳನ್ನು ಕರೆಸಿ ಇದರ ಮಹತ್ವವೇನು? ಎಷ್ಟು ಗರಭೀರವಾಗಿ ಇದರ ಬಗ್ಗೆ ಚರ್ಚೆಯಾಗಬೇಕೆಂದು ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಎಲ್ಲರಿಗೂ ಹೇಳಿದಿರಿ. ಸದನದಲ್ಲಿ ಇವರಿಗೆ ಸಂಪೂರ್ಣವಾಗಿ ಇದರ ಬಗ್ಗೆ ಎಷ್ಟು ಕಾಳಜಿ ಇದೆ? ರಾಷ್ಟ್ರಪತಿಯವರು ಮಾಡಿದಂತಹ ಭಾಷಣದ ಬಗ್ಗೆ, ಈ ಸದನದಲ್ಲಿ ಚರ್ಚಿಸುವ ಸಂಧರ್ಭದಲ್ಲಿ ನಾವು ಎಷ್ಟು ಪರಿಣಾಮಕಾರಿಯಾಗಿ ಭಾಗವಹಿಸಬೇಕು ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು, ಯಾರು ಇಲ್ಲಿ ಇಲ್ಲ ಎಂದಾಗ, ನನಗೆ ಅನ್ನಿಸುವುದೇನೆಂದರೆ, ರಾಷ್ಟ್ರಪತಿಯವರ ಭಾಷಣಕ್ಕೆ ಬರೇ ಈ ರೀತಿಯಾದಂಥ ಆಷಾಡಭೂತಿಯಿಂಥ ಮಾತಿನಿಂದ ಏನೂ ಪ್ರಯೋಜನವಾಗುವುದಿಲ್ಲ. ಸುಮ್ಮನೆ ದೇಶದಲ್ಲಿ ಮಾತನಾಡುವುದು, ಇಂಥ ಮಾತನಾಡಿ ಅದು ಕಾರ್ಯರೂಪಕ್ಕೆ ಬರದೇ ಇರುವುದು ಒಳ್ಳೆಯದಲ್ಲ. ಒಬ್ಬರಾದರೂ ಮಾನ್ಯ ಮುಖ್ಯಮಂತ್ರಿಗಳೂ, ಉಪಮುಖ್ಯಮಂತ್ರಿಗಳು ಬರಬೇಕು.

ಅಧ್ಯಕ್ಷರು: ಆಯಿತು, ಅವರು ಹೇಳಿ ಬಂದಿದ್ದಾರೆ, ಅವರು ಬರುತ್ತಾರೆ, ನೀವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಆಯಿತು, ನನ್ನ ಒತ್ತಾಯವೇನಿಲ್ಲ, ನನ್ನದೇನೂ ಅಭ್ಯಂತರವಿಲ್ಲ, ಅವರು ಯಾವಾಗ ಬೇಕಾದರೂ ಬರಲಿ, ಅವರು ಎಷ್ಟೊತ್ತಿಗಾದರೂ ಬರಲಿ, ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಅವರ ಬೇಜವಾಬ್ದಾರಿತನ ಜನಗಳಿಗೆ ಗೊತ್ತಾಗಲಿ.

ಶ್ರೀ ವಾಟಾಳ್ ನಾಗರಾಜ್ : ಈಗ ಮಾನ್ಯ ರಾಷ್ಟ್ರಪತಿಗಳು ಕರ್ನಾಟಕದ ಧ್ಯೇಯೋದ್ದೇಶಗಳ ಬಗ್ಗೆ ಸಮಾರು 11 ಸೂತ್ರಗಳನ್ನು ಇಟ್ಟಿದ್ದಾರೆ. ಈಗ ಕರ್ನಾಟಕಕ್ಕೆ 50 ವರ್ಷವಾಗಿರುವುದರಿಂದ ಸುವರ್ಣ ಕರ್ನಾಟಕ ಎನ್ನಲಾಗಿದೆ ಯೆಂದು ನನಗನ್ನಿಸುತ್ತದೆ. ಈ ಐವತ್ತು ವರ್ಷದಲ್ಲಿ ನಮ್ಮ ಸಾಧನೆ ಏನು? ಯಾವ ಉದ್ದೇಶಕ್ಕಾಗಿ ಕರ್ನಾಟಕವಾಯಿತು? ಕರ್ನಾಟಕ ಏಕೀಕರಣವಾದ ಉದ್ದೇಶವೇನು? ಹಳೆಯ ಮೈಸೂರು ಇದ್ದಾಗ ಪ್ರಪ್ರಥಮವಾಗಿ ನಮ್ಮ ರಾಜ್ಯಕ್ಕೆ

ಬಳ್ಳಾರಿ ಜಿಲ್ಲೆ ಬಂದು ಸೇರಿತು. ಬಳ್ಳಾರಿ ಜಿಲ್ಲೆಯನ್ನು ಸೇರಿಸಬೇಕಾದರೆ ಶ್ರೀ ಕೆಂಗಲ್ ಹನುಮಂತಯ್ಯನವರು ಇದ್ದರು, ಅವರ ಇತಿಹಾಸ ಬಹಳ ದೊಡ್ಡದು, ಬಳ್ಳಾರಿ ಜಿಲ್ಲೆ ಕರ್ನಾಟಕ ರಾಜ್ಯಕ್ಕೆ ಸೇರಬಾರದೆಂದು ಬಳ್ಳಾರಿ ವಿರೋಧಿಗಳು ಪ್ರಯತ್ನಿಸಿದಾಗ, ನಾಳೆ ಬಳ್ಳಾರಿ ಜಿಲ್ಲೆ ಸೇರತಕ್ಕಂಥ ಸಮಾರಂಭವನ್ನು ಮುಚ್ಚಿ ಹಾಕಿದರು, ಗಲಾಟೆ ಮಾಡಿದರು. ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಭದ್ರವಾಗಿ ನಿಂತು, ಮತ್ತೆ ಎಲ್ಲಾ ವ್ಯವಸ್ಥೆಯನ್ನು ಮಾಡಿ ಅಲ್ಲಿನ ಸಮಾರಂಭವನ್ನು ನಡೆಸಿದರು, ಮತ್ತೆ ಅಲ್ಲಿ ಜನಮತವನ್ನು ಗಣನೆಗೆ ತೆಗೆದುಕೊಂಡರು. ಬಳ್ಳಾರಿ ಜಿಲ್ಲೆ ಕರ್ನಾಟಕಕ್ಕೆ ಸೇರಬೇಕೇ ಬಿಡಬೇಕೇ ಎಂದಾಗ, ಜನಮತ ಗಣನೆಯನ್ನು ತೆಗೆದುಕೊಂಡಾಗ ಒಬ್ಬ ಅಲ್ಪಸಂಖ್ಯಾತ ಮುಸ್ಲಿಂ ವ್ಯಕ್ತಿಯನ್ನು ಕರ್ನಾಟಕದ ಪರವಾಗಿ ಅಲ್ಲಿ ನಿಲ್ಲಿಸಿದ್ದೆವು. ಅತ್ಯಂತ ಹೆಚ್ಚಿನ ಬಹುಮತ ಗಳಿಸಿ ಬಳ್ಳಾರಿ ಕರ್ನಾಟಕಕ್ಕೆ ಸೇರಬೇಕೆಂದು ಅವತ್ತಿನ ದಿವಸ ತೀರ್ಮಾನವಾಯಿತು. ಕೆಂಗಲ್ ಹನುಮಂತಯ್ಯನವರು, ಈ ಕರ್ನಾಟಕದ ಇತಿಹಾಸ ಬಹಳ ದೊಡ್ಡದು, ತಮಗೆ ಹೇಳಲಿಕ್ಕೆ ಇಚ್ಛೆಪಡುವುದೇನೆಂದರೆ ಅಂದರೆ ಕರ್ನಾಟಕ ಏಕೀಕರಣವಾಗುವುದಕ್ಕೆ ಮುಂಚೆ ಕರ್ನಾಟಕದ ವಿರುದ್ಧವಾಗಿ ಮೂರು ನಾಲ್ಕು ಜನ ಮಾತನಾಡಿದರು, ಆದರೆ ಮತ ಹಾಕುವಾಗ ಮತ ಹಾಕದೇ ಇದ್ದವರೆಂದರೆ ಶ್ರೀ ಎ.ಜಿ.ರಾಮಚಂದ್ರರಾವ್‌ರವರು. ಅವರು ಬಹಳ ದಕ್ಷರಾಗಿದ್ದರು ಅದರಲ್ಲಿ ಬೇರೆ ಮಾತಿಲ್ಲ. ಶ್ರೀ ವೀರಣ್ಣಗೌಡರು, ಶ್ರೀ ಶಂಕರೇಗೌಡರು ಇದಕ್ಕೆ ವಿರೋಧಿಸಿದರೂ ಸಹ ನಿಜಲಿಂಗಪ್ಪನವರಿಗೆ ಅವರು ಎಡ ಬಲ ಇದ್ದ ಹಾಗೆ ಇದ್ದರು. ಅದೂ ಒಂದು ಇತಿಹಾಸ. ಅವರು ತಿಟ್ಟಮಾರನಹಳ್ಳಿ ವೆಂಕಟಪ್ಪನವರು ಇವರೆಲ್ಲರೂ ನಿಜಲಿಂಗಪ್ಪನವರಿಗೆ ಬೆಂಬಲ ಕೊಟ್ಟಿದ್ದರು. ಕರ್ನಾಟಕ ಏಕೀಕರಣದ ಸಮಯದಲ್ಲಿ ಬಹಳ ಬಹಿರಂಗವಾಗಿ ಬೆಂಬಲವನ್ನು ಕೊಟ್ಟವರು ಅಂದರೆ ಶ್ರೀ ಶಾಂತವೇರಿ ಗೋಪಾಲಗೌಡರು ಮತ್ತು ಆರ್. ಅನಂತರಾಮನ್‌ರವರು, ಅನಂತರಾಮನ್‌ರವರು ಮಾಜಿ ಮೇಯರ್ ಆಗಿದ್ದರು. ಆಗ ನನಗೆ ಅನ್ನಿಸಿದ್ದು ಕರ್ನಾಟಕ ಇತಿಹಾಸ ಆಗ ಅದೊಂದು ಬಹಳ ದೊಡ್ಡದು.

ಕರ್ನಾಟಕ ಏಕೀಕರಣಕ್ಕೆ ಎಂಥೆಂಥವರು ಅಂದರೆ ಅನ್ನದಾನಪ್ಪ ದೊಡ್ಡಮೇಟಿ, ವಾಲಿ ಚೆನ್ನಪ್ಪ, ಎಳಮಾಲಿ, ಆರ್.ಆರ್.ದಿವಾಕರ್, ಬೇಕಾದಷ್ಟು ದೊಡ್ಡ ಇತಿಹಾಸವಿದೆ, ಈ 50 ವರ್ಷಗಳ ಹಿಂದೆ ಕರ್ನಾಟಕವನ್ನು ಕಟ್ಟುವುದಕ್ಕೆ, ಹರಿದು ಹಂಚಿಹೋಗಿದ್ದ ಕರ್ನಾಟಕವನ್ನು ನಿರ್ಮಾಣ ಮಾಡುವುದಕ್ಕೆ ಒಂದು ದೊಡ್ಡ ಇತಿಹಾಸವೇ ಇದೆ. ಇವತ್ತು 50 ವರ್ಷ ಯಾವ ಉದ್ದೇಶಕ್ಕಾಗಿ,

ಭಾಷವಾರು ಪ್ರಾಂತ್ಯವಾಯಿತು, ಕನ್ನಡಿಗರು ಭಾಷೆಯಲ್ಲಿ ಮಾತನಾಡತಕ್ಕಂಥ ಎಲ್ಲಾ ಭಾಗಗಳು ಒಂದಾಗಿ ಇದು ಒಂದು ರಾಜ್ಯ ನಿರ್ಮಾಣವಾಗಬೇಕು. ಕನ್ನಡ ಭಾಷೆ ಇಷ್ಟಾದರೂ ತಮಗೆ ಹೇಳುತ್ತಿದ್ದೇನೆ, ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಇವತ್ತು ಕನ್ನಡಿಗರಿಗೆ, ರಾಜಕಾರಣಿಗಳಿಗೆ ಇರತಕ್ಕಂಥ ಎಚ್ಚರ ಅವತ್ತು ಇರಲಿಲ್ಲ, ತಾಂತ್ರಿಕವಾಗಿ ಹೊರಗಡೆ ಕನ್ನಡ ಭಾಗಗಳು ಉಳಿದು ಹೋಯಿತು ಸೊಲ್ಲಾಪುರ, ಅಕ್ಕಲಕೋಟೆ, ಗಡೇಂದ್ರಘಡ, ಈ ಕಡೆ ಕಾಸರಗೋಡು, ಮಡಕಶಿರಾ, ಹೊಸೂರು, ತಾಳವಾಡಿ ಈ ತರಹ ಸುಮಾರು ಎರಡು ಕೋಟಿ ಕನ್ನಡಿಗರು ಹೊರಗಡೆ ಉಳಿದರು. ಫಜಲ್ ಆಲಿ ಸಮಿತಿ ಯಾವುದು ಎಂದರೆ, ರಾಜ್ಯ ನಿರ್ಮಾಣ ಮಾಡಲಿಕ್ಕೆ ಎಸ್.ಆರ್.ಸಿ. ರಿಪೋರ್ಟ್, ಫಜಲ್ ಆಲಿ ಸಮಿತಿಯಲ್ಲಿ ಫಣಿಕ್ಕರ್ ಇದ್ದರು, ಫಣಿಕ್ಕರ್‌ಗೋಸ್ಕರ ಕಾಸರಗೋಡು ಕೇರಳಕ್ಕೆ ಹೋಯಿತು. ಕಾಮರಾಜರಿಗೋಸ್ಕರ ತಾಳವಾಡಿ ಅಲ್ಲಿಯೇ ಉಳಿಯಿತು. ಮಹಾರಾಷ್ಟ್ರದವರಿಗಾಗಿ ಸೊಲ್ಲಾಪುರ ಅಲ್ಲಿ ಉಳಿಯಿತು. ಇದರಿಂದ ನಮಗೆ ಎಷ್ಟು ನೋವಾಯಿತು ಎಂದರೆ, ಅಚ್ಚ ಕನ್ನಡ ಪ್ರದೇಶಗಳಿವು. ಇಲ್ಲೇನು ಬೇರೆ ಮಾತಿಲ್ಲವೇ ಇಲ್ಲ, ಈ ಐವತ್ತು ವರ್ಷದಲ್ಲಿ ಯಾವ ಒಬ್ಬ ಮುಖ್ಯಮಂತ್ರಿಗಳೂ ಹೊರಗಡೆ ಹೋಗಿರುವಂತಹ ಈ ಕನ್ನಡ ಪ್ರದೇಶಕ್ಕೆ ಹೋಗಲೇ ಇಲ್ಲ ತಾಂತ್ರಿವಾಗಿ ಆ ಪ್ರದೇಶಗಳು ನಮಗೆ ಸೇರಲಿಲ್ಲ, ನಿಜ ಆದರೆ ಅವರಿಗೆ ಆ ಪ್ರದೇಶದ ಕನ್ನಡಿಗರ ಪರಿಸ್ಥಿತಿಯ ಬಗ್ಗೆ ಕಾಳಜಿ ಇರಬೇಕಲ್ಲವೇ? ಅಲ್ಲಿ ಶಾಲೆಗಳಿಲ್ಲ, ಪಠ್ಯಪುಸ್ತಕಗಳಿಲ್ಲ, ಕನ್ನಡ ಉಪಾಧ್ಯಾಯರುಗಳಿಲ್ಲ, ಹೊರಗಡೆಯಿರತಕ್ಕಂಥ ಹೊರನಾಡ ಕನ್ನಡಿಗರು ನರಕದಲ್ಲಿ ಬದುಕುತ್ತಿದ್ದಾರೆ. ಗಡಿನಾಡ ಪರಿಸ್ಥಿತಿ, ಅದು ನಮಗೆ ಸೇರಿತು. 50 ವರ್ಷಗಳ ಹಿಂದೆ, 1956ರಲ್ಲಿ ಕರ್ನಾಟಕ ಏಕೀಕರಣವಾದ ಮೇಲೆ ಇದೇ ಸದನದಲ್ಲಿ ಎಂತಹ ದೊಡ್ಡ ಸೊಬಗು ಎನ್ನಿಸಿತ್ತು. ಅವತ್ತಿಗೆ ಆ ಆರಂಭದ ದಿನ ಅದು ಸುವರ್ಣ ಯುಗವಾಗಿತ್ತು. ಇವತ್ತೇನು ಕರ್ನಾಟಕವನ್ನು ಸುವರ್ಣ ಕರ್ನಾಟಕವೆಂದು ಹೇಳುತ್ತೇವೆ. ನಾವು ಸರಿಯಾದ ರೀತಿಯಲ್ಲಿ ಆಡಳಿತ ನಡೆಸಿದಾಗ ನಿಜಕ್ಕೂ ನಮ್ಮ ರಾಜ್ಯ ಸುವರ್ಣ ರಾಜ್ಯವೇ. ಮಾನ್ಯ ಬಿ.ಡಿ. ಜತ್ತಿಯವರು ಕೆಲವು ದಿನ ರಾಷ್ಟ್ರಪತಿಗಳಾಗಿದ್ದರು. ಅದು ಸಂತೋಷದ ಸಂಗತಿ. ನಮ್ಮ ರಾಜ್ಯದ ದೇವೇಗೌಡರು ದೇಶದ ಪ್ರಧಾನಮಂತ್ರಿಗಳಾಗಿದ್ದರು ಇದೂ ಸಹ ಸಂತೋಷಪಡುವಂಥಹುದೇ ಇದನ್ನು ಮೆಚ್ಚಬೇಕಾಗುತ್ತದೆ, ಈ ವಿಷಯ ನಮ್ಮ ರಾಜ್ಯದ ಚರಿತ್ರೆಯಲ್ಲಿ ದಾಖಲಾಗುತ್ತದೆ. ಇತಿಹಾಸದಲ್ಲಿ ಇದರ ಬಗ್ಗೆ ಓದುತ್ತಾರೆ. ಅದನ್ನು ಯಾರೂ ಬದಲಾವಣೆ ಮಾಡಲಿಕ್ಕೆ ಸಾಧ್ಯವಿಲ್ಲ, ಮಾನ್ಯ ಶಾಂತವೇರಿ

ಗೋಪಾಲಗೌಡರವರ ಭಾಷಣವನ್ನು ತಾವು ತರಿಸಿ ನೋಡಿದ್ದೀರಿ ಎಂದು ನನಗೆ ಅನ್ನಿಸುತ್ತದೆ, ಆ ಭಾಷಣಗಳನ್ನು ತಾವು ತರಿಸಿ ನೋಡಬೇಕು. ಅವರ ಭಾಷಣ ಮುತ್ತಿನಂತಹ ಭಾಷಣ, ಆ ಭಾಷಣವು ನಿಧಾನವಾಗಿ, ನಿರರ್ಗಳವಾಗಿ ಪ್ರತಿಯೊಂದನ್ನು ಇಲ್ಲಿ, ಶಿವಪ್ಪನವರನ್ನು ಕಂಡ್ಡದ್ದಾಯಿತು, ವಿರೋಧಪಕ್ಷದ ನಾಯಕರಾಗಿ ಮಾನ್ಯ ದೇವೇಗೌಡರನ್ನು ಕಂಡ್ಡದ್ದಾಯಿತು. ಶ್ರೀಸಿ.ಜೆ.ಮುಕ್ಕಣ್ಣಪ್ಪ ರವರಂಥ ಸ್ವತಂತ್ರ ಪಕ್ಷ ಒಬ್ಬರೇ ಒಬ್ಬರು, ಶ್ರೀ ಎಸ್.ಆರ್.ಕಂಠಿಯವರು ತಮ್ಮ ಸ್ಥಾನದಲ್ಲಿ ಕುಳಿತವರು ಅವರದ್ದು ಸಹ ಬಹಳ ದೊಡ್ಡ ಇತಿಹಾಸವೇ ಇದೆ. ಅವರೊಬ್ಬರೇ ಇದ್ದರೂ ಅವರ ಮಾತು ಛಾಟಿ ಹೊಡೆತದಂತೆ ಇಡೀ ರಾಜ್ಯದಲ್ಲಿ ಒಂದು ದೊಡ್ಡ ಜ್ವಾಲೆಯನ್ನು ಎಬ್ಬಿಸಿದರು. ಮಾನ್ಯ ಶಿವಪ್ಪನವರು ವಿರೋಧಪಕ್ಷದ ನಾಯಕರಾಗಿದ್ದರೂ ಸಹ ಅವರು ಮುಖ್ಯಮಂತ್ರಿಯಷ್ಟೇ ಪ್ರಭಾವೀಯುತವಾಗಿ ಇಲ್ಲಿ ಇದ್ದರು. ಶ್ರೀ ಸಾಹುಕಾರ್ ಚೆನ್ನಯ್ಯನವರು ಇಲ್ಲಿದ್ದರು. ತಮಗೆ ನಾನು ಹೇಳುತ್ತೇನೆ. 1967ನೇ ಇಸವಿಯಲ್ಲಿ, ಈ ತರಹ ಅನೇಕರು ಈ ಸದನವನ್ನು ಪ್ರತಿನಿಧಿಸತಕ್ಕಂಥ ಜನರು ಇದ್ದರು. ಮಾನ್ಯ ಹನುಮಂತಯ್ಯನವರ ಆದರ್ಶ, ಆದರ್ಶಕ್ಕೆ ಹನುಮಂತಯ್ಯನವರು, ಸತ್ಯಕ್ಕೆ ಹನುಮಂತಯ್ಯನವರು, ನನಗನ್ನಿಸುತ್ತದೆ, ಅಂತಹ ಒಬ್ಬ ವ್ಯಕ್ತಿ ಇದರ ಒಳಗಡೆ ಬರುವುದಕ್ಕೆ ಆಗಲಿಲ್ಲ ಮಾನ್ಯ ಅಧ್ಯಕ್ಷರೇ, ಶ್ರೀ ಅಬ್ದುಲ್ ಕಲಾಂ ಅವರು ಬಂದು ಸುವರ್ಣ ಕರ್ನಾಟಕದ ಬಗ್ಗೆ ಭಾಷಣ ಮಾಡಿದರು, ಆದರೆ ಶ್ರೀ ಹನುಮಂತಯ್ಯನವರು ಈ ಕಟ್ಟಡದ ಕಲ್ಲು ಕಲ್ಲನೂ ಕೆತ್ತಿಸಿ ಒಂದು ಸುಂದರವಾಗಿ ಈ ಒಂದು ಕಟ್ಟಡವನ್ನು ನಿರ್ಮಾಣ ಮಾಡಿ ವಿಶ್ವದ ಅಂಚಿನಲ್ಲಿ ವಿಶ್ವದಲ್ಲಿ ಜ್ಞಾಪಕಕ್ಕೆ ಬರತಕ್ಕಂಥ ರೀತಿಯಲ್ಲಿ ಮಾಡಿದರು. ಇಲ್ಲಿ ಕೃಶ್ಚೇನ್ ಅಂಡ್ ಬುಲ್ಗಾನಿಸ್ ಈ ಊರಿಗೆ ಬಂದಾಗ ವಿಧಾನಸೌಧದ ಅರ್ಧ ಕಟ್ಟಡ ಕಟ್ಟಿದ್ದರು, ಅದರ ಛಾಯಾಪ್ರತಿಯನ್ನು ತೋರಿಸುತ್ತೇನೆ, ನೋಡಿ ಇಲ್ಲಿದೆ, ಹನುಮಂತಯ್ಯನವರು ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಜೊತೆಯಲ್ಲಿ ಒಂದು ಕಾರಿನಲ್ಲಿ ವಿಧಾನಸೌಧದ ಮುಂದೆ ಮೆರವಣಿಗೆ ಅವರದ್ದು, ಹನುಮಂತಯ್ಯನವರ ಜೊತೆಯಲ್ಲಿ ಈ ಕಟ್ಟಡ ತೋರಿಸಿದರು ಆಗ. ಬಹುಶ: ಅದು ಹಳೆಯ ರೆಕಾರ್ಡ್‌ನಲ್ಲಿ ಕಡತದಲ್ಲಿ ಇರಬೇಕು ಅದರ ಫೋಟೋಗಳು ಇದೆ, ತಾವು ಅದನ್ನು ನೋಡಬೇಕು. ನಾನು ಏತಕ್ಕೆ ಈ ಮಾತು ಹೇಳುತ್ತೇನೆಂದರೆ ಭಾಷಾವಾರು ಪ್ರಾಂತ್ಯದ ಉದ್ದೇಶ ಏನು? ಹನುಮಂತಯ್ಯನವರು ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಗಡಿನಾಡಿಗಾಗಿ ಹೋರಾಟ ಮಾಡಿದಂತಹ ಶಿವಮುರ್ತಿ ಶಾಸ್ತ್ರಿಗಳು, ಆಗ ಕರ್ನಾಟಕ ಏಕೀಕರಣ

ಸಮಿತಿಯಲ್ಲಿ ಶ್ರೀ ಎನ್.ರುದ್ರಯ್ಯನವರು, ಧರ್ಮಪ್ರಕಾಶ್ ಎನ್.ರುದ್ರಯ್ಯ ಶ್ರೀ ಬಿ. ಬಸವ ಲಿಂಗಪ್ಪನವರು, ಏಕೀಕರಣ ಸಮಿತಿ ಕಾರ್ಯದರ್ಶಿ ಆಗ, ಕರ್ನಾಟಕ ಏಕೀಕರಣ ಸಮಿತಿಗೆ ಬಿ. ಬಸವಲಿಂಗಪ್ಪನವರು ಕಾರ್ಯದರ್ಶಿಗಳು, ನಾನು ತಮಗೆ ಹೇಳುತ್ತೇನೆ, ಆ ಸಂದರ್ಭದಲ್ಲಿ ಮಾನ್ಯ ಹನುಮಂತಯ್ಯನವರ ಮನೆಗೆ ಹೋಗುತ್ತಾರೆ. ಸ್ವಾಮಿ, ನಾಳೆ ಈ ನಿರ್ಣಯ ತಾವು ಮಂಡಿಸಿದಾಗ...

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಸಾಕಷ್ಟು ವಿವರವಾದ ವಿಚಾರಗಳನ್ನು ಸನ್ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ವಾಟಾಳ್ ನಾಗರಾಜ್‌ರವರು ಸಭೆಯ ಮುಂದೆ ಇಡುತ್ತಿದ್ದಾರೆ. ಇದು ಆಸಕ್ತಿ ಮತ್ತು ಕೇಳುವುದಕ್ಕೂ ಸಹ ಚೆನ್ನಾಗಿದೆ. ಆದರೆ ಇವತ್ತು ತಾವು ತಂದಿರತಕ್ಕಂಥ ಸಬ್ಜೆಕ್ಟ್, ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ರಾಷ್ಟ್ರಪತಿಗಳು ಮಾಡಿರತಕ್ಕಂಥ ಭಾಷಣದ ಮೇಲೆ ಚರ್ಚೆ ನಡೆಯಬೇಕು ಅಂತ ತಂದಿದ್ದೀರಿ. ಅದಕ್ಕೂ ಇದಕ್ಕೂ ಏನು ಸಂಬಂಧ ಅಂತ ನಾನು ಬಹಳ ಹೊತ್ತಿನಿಂದ ಯೋಚನೆ ಮಾಡುತ್ತಿದ್ದೇನೆ, ತಿಳಿಯಲಿಲ್ಲ. ಹಾಗಾಗಿ ಇದಕ್ಕೂ ಅದಕ್ಕೂ ಏನಾದರೂ ಸಂಬಂಧ ಇದ್ದರೆ, ಆ ಸಂಬಂಧ ಏನು ಅಂತ ತಿಳಿಸಿದರೆ, ನಾವು ಆ ಸಂಬಂಧ ತಿಳದುಕೊಂಡು ಅವರ ಜೊತೆಗೆ ಸೇರಿಕೊಂಡು ಚರ್ಚೆ ಮಾಡುತ್ತೇವೆ. ಇಲ್ಲಾ ಅಂದರೆ ಮಾನ್ಯ ವಾಟಾಳ್ ನಾಗರಾಜ್‌ರವರ ಹತ್ತಿರ ಸಾಕಷ್ಟು ವಿಚಾರಗಳು ಇವೆ, ಆ ವಿಚಾರಗಳಿಗೋಸ್ಕರವೇ ಒಂದು ದಿನ ಚರ್ಚೆಗೆ ನಿಗದಿ ಮಾಡಿ, ಅವರ ಅನುಭವದ ಬುತ್ತಿ ನಮಗೆ ಸಿಗಬೇಕು, ಆ ಅನುಭವದ ಬುತ್ತಿಯನ್ನು ನಾವೆಲ್ಲರೂ ಹಂಚಿಕೊಳ್ಳೋಣ. ಆದರೆ ಇವತ್ತಿನ ಸಬ್ಜೆಕ್ಟ್ ಏನು ಅಂತ ಸ್ವಲ್ಪ ಸ್ಪಷ್ಟಪಡಿಸಿದರೆ ನಾವೂ ಕೇಳುವುದಕ್ಕೆ ಚೆನ್ನಾಗಿರುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಸುವರ್ಣ ಕರ್ನಾಟಕವನ್ನಾಗಿ ಆಚರಿಸುವಂತಹ ವಿಶೇಷವಾಗಿ ಇರುವಂತಹ ವರ್ಷ ಇದು. ಅದಕ್ಕಾಗಿ ಕರ್ನಾಟಕದ ಏಕೀಕರಣಕ್ಕಾಗಿ ಮಾಡಿದಂತಹ ಮಹಾನುಭಾವರು ಗಳನ್ನು ಇಲ್ಲಿ ನೆನೆಸಬೇಕಾದುದು ನಮ್ಮೆಲ್ಲರ ಕರ್ತವ್ಯ. ಕರ್ತವ್ಯ ಇದೆ. ಆ ಹಿನ್ನೆಲೆಯಲ್ಲಿ ಅವರು ಏನು ಮಾತನಾಡುತ್ತಿದ್ದಾರೆ ಅದು ಬಹಳ ಪ್ರಸ್ತುತ ವಾಗಿದೆ. ಇನ್ನೂ ಕೆಲವರ ಹೆಸರುಗಳನ್ನು ನೀವು ಬಿಟ್ಟಿರಿ. ಹೈದರಾಬಾದ್ ಕರ್ನಾಟಕದಲ್ಲಿ ಏಕೀಕರಣಕ್ಕಾಗಿ ತ್ಯಾಗ ಮಾಡಿದಂತಹ ಬಹಳ ಜನರ ಹೆಸರುಗಳನ್ನು ಬಿಟ್ಟಿದ್ದೀರಿ. ಇದನ್ನೆಲ್ಲಾ ತಾವು ಹೇಳಬೇಕಾಗುತ್ತದೆ. ಕೇಳಿ ದಯವಿಟ್ಟು ಕೇಳಿ.

ಶ್ರೀ ಸಿ.ಟಿ.ರವಿ : ಖಂಡಿತ ಇನ್ನೂ ಸಾಕಷ್ಟು ವಿಚಾರ ಹೇಳಬೇಕು. ಈಗಲೇ ಹೇಳಬೇಕಾ ಅಂತ ನಾನು ಪ್ರಶ್ನೆ ಹಾಕಿದ್ದು. ನೋಡಿ ನಿಮಗೇನು ಅನಿಸಿದೆಯೋ ನನಗೆ ಗೊತ್ತಿಲ್ಲ. ನಾವು ಮಾನ್ಯ ಅಬ್ದುಲ್ ಕಲಾಂರವರ ಭಾಷಣದ ವಿಚಾರಗಳ ಬಗ್ಗೆ ಆಸಕ್ತಿ ಇರತಕ್ಕಂಥವರು ನಾವು ಒಂದಷ್ಟು ಕಿರಿಯ ಸದಸ್ಯರುಗಳು ಆ ಬಗ್ಗೆ ಒಂದಷ್ಟು ತಯಾರಿ ಮಾಡಿಕೊಂಡು ಬಂದಿದ್ದೇವೆ. ಆ ಹಿನ್ನೆಲೆಯಲ್ಲಿ ಹೇಳಿ.

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇರಲಿ, ಮಾನ್ಯ ರವಿಯವರು ಹೇಳಿದ್ದಾರೆ ಹೇಳಲಿ, ಅವರಿಗೆ ಬಾಬಾ ಬುಡನ್‌ಗಿರಿಯನ್ನು ಬಿಟ್ಟರೆ ಬೇರೇನೂ ಗೊತ್ತಾಗುವುದಿಲ್ಲ. ಇರಲಿ, ನಮ್ಮದು ಅವರು ಕೇಳುವುದಕ್ಕೆ ತಯಾರಾಗಿಲ್ಲ. ಆದರೂ ಚಿಂತೆ ಇಲ್ಲ, ಮಾನ್ಯ ಅಧ್ಯಕ್ಷರೆ, ತಮಗೆ ನಾನು ಹೇಳುತ್ತೇನೆ, ಹೈದ್ರಾಬಾದ್ ಕರ್ನಾಟಕ, ಕೊಲ್ಲೂರು ಮಲ್ಲಪ್ಪನವರು, ನನಗನಿಸುತ್ತದೆ ಅವರನ್ನು ನಾವು ನೆನೆಸಿಕೊಳ್ಳಬೇಕು. ಮಾನ್ಯ ಅಬ್ದುಲ್ ಕಲಾಂರವರು ಮಾಡಿದ ಭಾಷಣ ಅದಿರಲಿ, ಶ್ರೀ ಚಂದ್ರಶೇಖರ ಪಾಟೀಲ್ ಅಂದರೆ ಗುಲ್ಬರ್ಗಾ ಜಿಲ್ಲೆ, ಹೈದ್ರಬಾದ್ ಕರ್ನಾಟಕವನ್ನು ಕಟ್ಟಿದಂತಹ ಒಬ್ಬ ಅತ್ಯಂತ, ಎತ್ತರವಾದಂತಹ ವ್ಯಕ್ತಿತ್ವ ಅಳವಂಡಿ ಶಿವಮೂರ್ತಿ ಸ್ವಾಮಿ, ಅವರು ಸ್ವತಂತ್ರವಾಗಿ ಒಬ್ಬರೇ ಒಬ್ಬರು ಗೆದ್ದು ಲೋಕಸಭೆಯಲ್ಲಿದ್ದರು. ನಾನು ತಮಗೆ ಏನು ಹೇಳುತ್ತೇನೆಂದರೆ, ಮಾನ್ಯ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿರಿತ್ತಾರೆ. ಹಿಂದಿನ ದಿವಸ ಕುಮಾರ ಕೃಪಾದಲ್ಲಿ ಅವರು ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಹೋಗಿ, ನಾಳೆ ಈ ನಿರ್ಣಯವನ್ನು ನೀವು ಮಂಡಿಸಿದ ತಕ್ಷಣ ನಿಮ್ಮ ಅಧಿಕಾರ ಹೋಗುತ್ತೆ ಏನು ಮಾಡುವುದು ಎಂದು ಶಾಸ್ತ್ರಿಗಳು ಅಂದಾಗ, ಧೈರ್ಯವಾಗಿ ಹೇಳುತ್ತಾರೆ, ಅಧಿಕಾರ ಹೋದರೂ ಚಿಂತೆ ಇಲ್ಲ, ಇತಿಹಾಸದಲ್ಲಿ ಉಳಿಯುತ್ತೇನೆ ಅಂತ ಅವರ ಮಾತಿಗೆ ಒಪ್ಪುತ್ತಾರೆ, ಅವರೇ ಬಂದು ಇಲ್ಲಿ ನಿರ್ಣಯವನ್ನು ಮಂಡಿಸುತ್ತಾರೆ. ಅಂದರೆ ಈ ಸದನ ಅಲ್ಲ. ಅಲ್ಲಿ ನಮ್ಮ ಕೆಂಪು ಬಿಲ್ಡಿಂಗ್, ಅಠಾರ ಕಛೇರಿ, ಅವರದ್ದು, ಶ್ರೀ ನಾಗಪ್ಪ ಆಳ್ವರು ಹೆಗಡೆಯವರು ಮಲ್ಯ, ಈ ಕಡೆ ಪೂಣಚ್ಚ, ನಮ್ಮ ಕೊಡಗಿನವರು, ಇದಕ್ಕೆ ಬಹಳ ಇತಿಹಾಸ ಇದೆ. ಈ ಇತಿಹಾಸವನ್ನು ತಿರುಚುವುದಕ್ಕೆ ಆಗುವುದಿಲ್ಲ, ಮರೆಯುವುದಕ್ಕೆ ಆಗುವುದಿಲ್ಲ. ನಾನು ಏಕೆ ಹೇಳುತ್ತೇನೆಂದರೆ, ಶ್ರೀ ಕೆ.ಸಿ. ರೆಡ್ಡಿಯವರು ಅವರ ಕಾಲದಲ್ಲಿ ಕರ್ನಾಟಕಕ್ಕೆ ಜವಹರಲಾಲ್ ನೆಹರುರವರಿಗೂ ಕೆ.ಸಿ.ರೆಡ್ಡಿಯವರಿಗೂ ಬಹಳ ವಿಶ್ವಾಸ ಕೆ.ಸಿ.ರೆಡ್ಡಿಯವರು ಕೇಂದ್ರದ ಮಂತ್ರಿಗಳಾದರು, ರಾಜ್ಯದ ಮೊದಲನೇ ಮುಖ್ಯಮಂತ್ರಿಯಾದರು,

ಅವರು ಕೇಂದ್ರದ ಮಂತ್ರಿಗಳಾದ ಮೇಲೆ, ನಮ್ಮ ರಾಜ್ಯಕ್ಕೆ ಕೈಗಾರಿಕೆಗಳು ಎಚ್.ಎಂ.ಟಿ ಐ.ಟಿ.ಐ ಇವೆಲ್ಲಾ ಬಂದಿದ್ದು ಅವರ ಕಾಲದಲ್ಲಿಯೇ, ತಮಗೆ ನಾನು ಏಕೆ ಹೇಳುತ್ತೇನೆಂದರೆ ಭಾಷಾವಾರು ಪ್ರಾಂತ್ಯ ಆಯಿತು, ಯಾವ ಉದ್ದೇಶಕ್ಕಾಗಿ ಭಾಷಾವಾರು ಪ್ರಾಂತ್ಯವಾಯಿತು ಆ ಉದ್ದೇಶ ಇವತ್ತು ಈಡೇರಲಿಲ್ಲ. ಉತ್ತರ ಕರ್ನಾಟಕದ ಕೂಗು, ಬಹಳ. ಉತ್ತರ ಕರ್ನಾಟಕದ ಅನ್ಯಾಯ ಬಹಳ. ಬೆಂಗಳೂರು ರಾಜಧಾನಿಯಾಯಿತು, ಬೀದರ್ ಎಷ್ಟು ದೂರ ಇಲ್ಲಿಗೆ. 800 ಕಿಲೋಮೀಟರ್. ದಾವಣಗೆರೆ, ಹುಬ್ಬಳ್ಳಿ ಈ ತರಹ ನೋಡಿದಾಗ, ಅವರಿಗೆ ಬೆಂಗಳೂರು ಕರ್ನಾಟಕದ ರಾಜಧಾನಿಯಾಗಬೇಕಾದರೆ ವ್ಯವಸ್ಥೆ. ಈ ವ್ಯವಸ್ಥೆಯಿಂದ ರಾಜಧಾನಿ. ಅದು ಕೆಂಗಲ್ ಹನುಮಂತಯ್ಯನವರು, ಕರ್ನಾಟಕ ಏಕೀಕರಣ ಶ್ರೀ ನಿಜಲಿಂಗಪ್ಪನವರು, ಕರ್ನಾಟಕ ಏಕೀಕರಣದ ಹರಿಕಾರರು ಕೆಂಗಲ್ ಹನುಮಂತಯ್ಯನವರು, ಕರ್ನಾಟಕದ ನಾಮಕರಣ ಶ್ರೀ ದೇವರಾಜ ಅರಸುರವರು, ತಮಗೆ ಗೊತ್ತಿರಬೇಕು. ಸ್ವಾಮಿ ಅಧ್ಯಕ್ಷರೇ, ದೇವರಾಜ ಅರಸುರವರು ಏನು ಹೇಳುತ್ತಿದ್ದರು ಅಂದರೆ ಗಂಭೀರವಾಗಿ ನನ್ನ ಸಮಾಧಿಯ ಮೇಲೆ ಕರ್ನಾಟಕದ ನಾಮಕರಣ ಅಂತ ಅನ್ನುತ್ತಿದ್ದರು. ಅಂದರೆ ನಾಮಕರಣಕ್ಕೆ ಅವರು ವಿರೋಧ ಇದ್ದರು. ಮುಖ್ಯಮಂತ್ರಿಯಾದ ತಕ್ಷಣ ಶ್ರೀ ಕೆ.ಎಚ್. ಪಾಟೀಲ್ ಮತ್ತು ಅವರು ಇಲ್ಲೇ ಪಕ್ಕದಲ್ಲಿ ಕುಳಿತರು. ನಾವು ಈ ರಾಜ್ಯದ ಜನರ ಭಾವನೆಯನ್ನು ಅರ್ಥ ಮಾಡಿಕೊಂಡು ಈ ರಾಜ್ಯಕ್ಕೆ ಕರ್ನಾಟಕ ನಾಮಕರಣ ಮಾಡಬೇಕು ಅಂತ ಹೇಳಿ, 1973 ರಲ್ಲಿ ಇದೇ ರಾಜ್ಯದಲ್ಲಿ ಶ್ರೀದೇವರಾಜ ಅರಸುರವರು ನಿರ್ಣಯವನ್ನು ಮಂಡಿಸುತ್ತಾರೆ ಮೈಸೂರು ಎನ್ನುವುದು ಕರ್ನಾಟಕ ಎಂದು ಮಾಡಿದಂತಹ ಕೀರ್ತಿ ಇತಿಹಾಸದಲ್ಲಿ ಉಳಿಯುತ್ತದೆ. ಶ್ರೀಜೆ.ಹೆಚ್. ಪಟೇಲ್ ಹೊಸ ಜಿಲ್ಲೆಗಳ ನಿರ್ಮಾಣ ಮಾಡಿದ್ದಾರೆ. ಇತಿಹಾಸದಲ್ಲಿ ಉಳಿಯುತ್ತಾರೆ. ನಾನು ಏಕೆ ಹೇಳುತ್ತಿದ್ದೇನೆಂದರೆ ಈ ಅಬ್ದುಲ್ ಕಲಾಂರವರು ಕೊಟ್ಟಿರತಕ್ಕಂಥ ಈ ಒಂದು ಭಾಷಣದಲ್ಲಿ ಉತ್ತರ ಕರ್ನಾಟಕದ ಬೆಳವಣಿಗೆಯ ಬಗ್ಗೆ ಶ್ರೀ ಮಾಧುಸ್ವಾಮಿಯವರು ಮಧ್ಯಾಹ್ನ ಬಹಳ ಚೆನ್ನಾಗಿ ಹೇಳಿದರು. ಶ್ರೀ ನಂಜುಂಡಪ್ಪನವರ ವರದಿ. ನನಗನ್ನಿಸುತ್ತದೆ ಹಳ್ಳಿ ಹಳ್ಳಿಗೂ ಹೋಗಿ, ಬೀದಿ ಬೀದಿಗೂ ಹೋಗಿ ಎಲ್ಲಾ ವರ್ಗದ ಜನರನ್ನು, ಸಾಮಾನ್ಯ ಜನರು, ಪಂಡಿತರು ಮಹಾವ್ಯಕ್ತಿಗಳು, ಬಡವರು, ಎಲ್ಲಾ ಬರಹಗಾರರನ್ನು ಕೇಳಿ ಒಂದು ಸುಂದರವಾದಂತಹ ವರದಿಯನ್ನು ಕೊಟ್ಟಿದ್ದಾರೆ. ಅದು ಇತಿಹಾಸದಲ್ಲಿ ಉಳಿಯತಕ್ಕಂಥ ವರದಿ. ಆ ವರದಿಗೆ ನಾವೇನು ಬೆಲೆ ಕೊಟ್ಟಿದ್ದೇವೆ. ನಂಜುಂಡಪ್ಪನವರ ವರದಿಗೆ ಏನು ಬೆಲೆ ಕೊಟ್ಟಿದ್ದೇವೆ. ನಂಜುಂಡಪ್ಪ

ವರದಿಯನ್ನು ಸಮಗ್ರವಾಗಿ ಅನುಷ್ಠಾನ ಮಾಡುವುದಕ್ಕೆ ನಾವೇನು ಕಾರ್ಯಕ್ರಮ ಕೈಗೊಂಡಿದ್ದೇವೆ? ಮಾಧುಸ್ವಾಮಿಯವರು ಹೇಳಿದ ರೀತಿ ನಂಜುಂಡಪ್ಪ ವರದಿ ಈ ಸದನದ ಮುಂದೆ ಮಂಡಿಸಬೇಕಾಗಿತ್ತು. ನಮ್ಮೆಲ್ಲರಿಗೂ ಅದರ ಪ್ರತಿ ಕೊಡಬೇಕಾಗಿತ್ತು. ಸಮಗ್ರ ಚರ್ಚೆಯಾಗಬೇಕಾಗಿತ್ತು. ಕಾಲ ಮಿತಿ ಹಾಕಬೇಕಾಗಿತ್ತು. ಕಾಲಮಿತಿಯಲ್ಲಿ ಸಮಗ್ರ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಈ ವರ್ಷ ಇಷ್ಟು, ಮುಂದಿನ ವರ್ಷ ಇಷ್ಟು ಕನಿಷ್ಠ ಪಂಚವಾರ್ಷಿಕ ಯೋಜನೆ ನೀವು ಮಾಡಿದ್ದರೆ ಅದು ನಿಜಕ್ಕೂ ಒಳ್ಳೆಯದು. ನನಗನಿಸುತ್ತದೆ ಒಬ್ಬ ಅತ್ಯಂತ ಮೇಧಾವಿ ನಂಜುಂಡಪ್ಪನವರು, ಆ ವರದಿಯನ್ನು ನೋಡಿದರೆ ಬಹುಶಃ ನನಗನ್ನಿಸುತ್ತದೆ ಮತ್ತೊಬ್ಬರು ಅಂತಹ ವರದಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಅಂತಹ ಸುಂದರವಾದ ವರದಿಯನ್ನು ಕೊಟ್ಟಿದ್ದಾರೆ. ಹೈದ್ರಾಬಾದ್ ಕರ್ನಾಟಕ, ಕರ್ನಾಟಕ ಏಕೀಕರಣ ಆಯಿತು, ಏನು ಹೇಳುತ್ತೇವೆ ನಾವು? ಉತ್ತರ ಕರ್ನಾಟಕ ಅಂತ ಹೇಳುತ್ತೇವೆ ಹೈದ್ರಾಬಾದ್ ಕರ್ನಾಟಕ ಅಂತ ಹೇಳುತ್ತೇವೆ. ಕೊಡಗು ಅಂತ ಹೇಗುತ್ತೇವೆ, ಇನ್ನೂ ಕರಾವಳಿ ಅಂತ ಹೇಳುತ್ತೇವೆ. ಇನ್ನೂ ನಾವು ಭಾವನಾತ್ಮಕವಾಗಿ ಕರ್ನಾಟಕ ಒಂದಾಗಿಲ್ಲ. ಕಾರಣ ಏನು ನಮ್ಮಲ್ಲಿ ಆಳುವ ಜನ, ಸರ್ಕಾರಗಳು ಪ್ರಮಾಣಿಕತೆಯಿಂದ ನಡೆದುಕೊಂಡಿಲ್ಲ, ಪ್ರಾಮಾಣಿಕತೆ ಇಲ್ಲ, ಇದರಲ್ಲಿ ರಾಜಕೀಯ ಬೇಕಾಗಿಲ್ಲ, ಜಾತಿ ಬೇಕಾಗಿಲ್ಲ, ಬೇರೆ ಮಾತನಾಡುವುದು ಬೇಕಿಲ್ಲ, ಯಾವ ಯಾವ ಪ್ರದೇಶಕ್ಕೆ ಹಣವನ್ನು ಖರ್ಚು ಮಾಡಿ ಎಷ್ಟು ಮುಂದೆ ತರಬೇಕು ಎನ್ನತಕ್ಕಂಥದ್ದೇ ಪ್ರಾದೇಶಿಕ ಅಸಮತೋಲನವಾಗಿದೆ. ಆಂಧ್ರದಲ್ಲಿ ಅದೇ ಆಯಿತು, ಅದು ಆಗಿಯೇ ತೆಲಂಗಾಣ ಶುರುವಾಯಿತು ಆಂಧ್ರದಲ್ಲಿ. ಮತ್ತೆ ಕರ್ನಾಟಕದಲ್ಲೂ ಇದೇ ಪರಿಸ್ಥಿತಿಯಾದರೆ ತೆಲಂಗಾಣ ಮಾದರಿ ಚಳುವಳಿ ಒಂದಲ್ಲ ಒಂದು ದಿವಸ ಆರಂಭವಾಗತಕ್ಕಂಥ ವ್ಯವಸ್ಥೆ ಇದೆ. ಇವತ್ತು ನಾನು ಎಚ್ಚರಿಕೆ ಕೊಡುತ್ತಿದ್ದೇನೆ. ಆದ್ದರಿಂದ ಇವತ್ತು ಈ ಸರ್ಕಾರ ನಮ್ಮ ಆಳುವ ಸರ್ಕಾರದವರು ಏನಿದ್ದಾರೆ ಇವರು ಈ ಸರ್ಕಾರ ಅಬ್ದುಲ್ ಕಲಾಂ ಅವರ ಸದುದ್ದೇಶದ 11 ಸೂತ್ರಗಳು, ಈ 11 ಸೂತ್ರಗಳನ್ನು ಕಾರ್ಯಗತ ಮಾಡ ಬೇಕಾದರೆ ಸಮಗ್ರ ಕರ್ನಾಟಕ ಒಂದಾಗಿದ್ದೇವೆ ಎನ್ನುವ ಭಾವನೆ ಸಮಗ್ರ ಕನ್ನಡಿಗರಲ್ಲಿ ಬರತಕ್ಕಂಥ ವ್ಯವಸ್ಥೆ ಮಾಡಬೇಕು. ನಾನು ಇದನ್ನು ಓದಿದೆ. ಇದಕ್ಕೆ ಸುಮಾರು 25 ಸಾವಿರ ಕೋಟಿ ರೂ. ಇಡಬೇಕಾಗುತ್ತದೆ. ಸಾಮಾನ್ಯ ಹಣ ಬೇಕಾಗುತ್ತದೆ ಅಂತ ಅಲ್ಲ. ಇದು ಎಲ್ಲಾ ನೀವು ಒಂದರಿಂದ ಹೋಗಿ ನೋಡಿದರೆ ಕನಿಷ್ಠ 25 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ತಮಗೆ ಹೇಳುತ್ತಿದ್ದೇನೆ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ, ಇದಕ್ಕೆ ಯಾವ, ಎಲ್ಲಿಂದ

ಹಣ ತಾವು ಒದಗಿಸುತ್ತೀರಿ? ಹೇಗೆ ಒದಗಿಸುತ್ತೀರಿ? ಮಾನ್ಯ ಹಣಕಾಸಿನ ಸಚಿವರು ಇದೇ 20ನೇ ತಾರೀಖು ಆಯವ್ಯಯವನ್ನು ಮಂಡಿಸುತ್ತಿದ್ದಾರೆ. ಅದರಲ್ಲಿ ಒಂದು ನಿಮ್ಮ ತಲೆಯ ಮೇಲೆ ಇರತಕ್ಕಂಥಾದ್ದು ನಂಜುಂಡಪ್ಪ ವರದಿ. ಆ ವರದಿಗೆ ಎಷ್ಟು ಹಣ ಮತ್ತು ಹೈಕೋರ್ಟ್ ಪೀಠಕ್ಕೆ ಅದು ಎಲ್ಲೋ ಭಾಷಣದಲ್ಲಿ ಹೇಳಿದಿರಿ, 200 ಕೋಟಿ ರೂ. ಕೊಡುತ್ತೇವೆಂದು ಹೇಳಿದ್ದೀರಿ? ಹೈಕೋರ್ಟ್ ಪೀಠಕ್ಕೆ, ಮತ್ತು ಹಿಂದೆ ಸರ್ಕಾರದವರು ಜಿಲ್ಲಾ ಪ್ಯಾಕೇಜ್‌ಗಳನ್ನು ಮಾಡಿಕೊಂಡು ಬಂದರು. ತಮಗೆ ಗೊತ್ತಿರಬೇಕು. ಎಲ್ಲಾ ಜಿಲ್ಲಾ ಪ್ಯಾಕೇಜ್‌ಗಳು ಒಂದೊಂದು ಪ್ಯಾಕೇಜಿಗೆ ನೂರು, ಇನ್ನೂರು, ಸಾವಿರ ಕೋಟಿ ರೂ ಅಂತೆಲ್ಲಾ ಪ್ಯಾಕೇಜ್ ಮಾಡಿಕೊಂಡದ್ದೀರಿ. ಅದರ ಗತಿಯೇನಾಯ್ತು? ಮತು ಮುಂದೆ ಆಗುವಂಥಾದ್ದು. ಅದಲ್ಲದೆ ಮೊನ್ನೆ ನೌಕರರು ಚಳುವಳಿ ಮಾಡಿದರು. ಅವರಿಗೂ ತಾವು ಯುಗಾದಿಗೆ ಪಂಚಸೂತ್ರಗಳಡಿ ಪರಿಗಣಿಸುತ್ತೇವೆ ಎಂದಿದ್ದೀರಿ ಸಂತೋಷವೇ. ನಮ್ಮ ನೌಕರರನ್ನು ನಾವು ಕಡೆಗಣಿಸುವುದು ಬೇಡ. ನೌಕರರಲ್ಲೂ ತಾರತಮ್ಯ ಇರಬಾರದು. ಅವರ ಸಮಸ್ಯೆ ಬಗೆಹರಿಯಬೇಕು. ಅವರಿಗೆ ಅನುಕೂಲವಾಗಬೇಕು. ನಾವು ಸ್ವಾಗತ ಮಾಡುತ್ತೇವೆ, ಅದರಲ್ಲಿ ಬೇರೆ ಮಾತೇನಿಲ್ಲ. ನೀವದನ್ನು ಕಾರ್ಯಗತಗೊಳಿಸಿದರೆ ನಾವೆಲ್ಲರೂ ಸ್ವಾಗತ ಮಾಡುವುದರಲ್ಲಿ ಎರಡನೇ ಪ್ರಶ್ನೆ ಏನಿಲ್ಲ ನನಗನ್ನಿಸುತ್ತದೆ ಭಾವನಾತ್ಮಕವಾಗಿ ಒಂದಾಗಬೇಕು ಅಂದರೆ ಏನು? ಉತ್ತರ ಕರ್ನಾಟಕದ ಬಗ್ಗೆ ನಂಜುಂಡಪ್ಪ ವರದಿಯಡಿ ತಕ್ಷಣ ನೀವು ಎಷ್ಟು ಹಣ ಬಿಡುಗಡೆ ಮಾಡುತ್ತೇವೆ ಎಂಬುದನ್ನು ಹೇಳಬೇಕು, ಅದು ಒಂದು ವ್ಯವಸ್ಥೆ. ಹೈದರಾಬಾದ್ ಕರ್ನಾಟಕದ ಕೂಗು ವೈಜನಾಥ ಪಾಟೀಲರಂತೂ ನಿರಂತರವಾಗಿ ಕೂಗುತ್ತಿದ್ದಾರೆ. ತಮಗೆ ಹೇಳುತ್ತೇನೆ, ಬೀದರ್ ಎಷ್ಟು ಹಿಂದುಳಿದಿದೆ ಅಂತ, ತಾವು ಬೀದರ್‌ಗೆ ಹೋಗಬೇಕು ಅಧ್ಯಕ್ಷರೇ, ಬೆಳಗಾವಿ ಇವತ್ತು ಯಾಕೆ ಹಿಂದುಳಿದಿದೆ? ನಾವೆಲ್ಲ ಬೆಳಗಾವಿ ಬೇಕು ಅನ್ನುತ್ತೇವೆ. ಇಷ್ಟೆಲ್ಲಾ ಹೋರಾಟ ಮಾಡುತ್ತೇವೆ ಆದರೆ ಬೆಳಗಾವಿಯನ್ನು ಕಡೆಗಾಣಿಸಿದ್ದೇವೆ. ಬೆಳಗಾವಿ ಅಭಿವೃದ್ಧಿ ಬಗ್ಗೆ ನಮಗೆ ಪ್ರಾಮಾಣಿಕತೆ ಇಲ್ಲ. ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ರಸ್ತೆ ಇಲ್ಲ, ಪಕ್ಕದ ಮಹಾರಾಷ್ಟ್ರದಲ್ಲಿ ಅಷ್ಟೇ ಅನುಕೂಲ ಇದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ಜೆಬಿಎಸಿಯಲ್ಲಿ ಈ ಚರ್ಚೆಯ ಉಪಯುಕ್ತತೆಯೇನು, ಅದರ ಅಗತ್ಯವಿದೆಯೇ ಎಂದೆಲ್ಲಾ ಚರ್ಚೆ ಮಾಡಿದೆವು. ಚರ್ಚೆ ಪ್ರಾರಂಭ ಮಾಡಬೇಕು ಅಂತ ಒಪ್ಪಿಕೊಂಡೆವು ಅದಕ್ಕೊಂದು ಮೆಥೆಡನ್ನೂ ಕಂಡುಕೊಂಡೆವು. ಈಗ ಅವರ ಪರವಾಗಿ

ಯಾರಾದರೂ ನೋಟ್ಸ್ ತೆಗೆದುಕೊಳ್ಳುತ್ತಿದ್ದಾರಾ? ರಾಷ್ಟ್ರಪತಿಗಳೇನೋ ಕೆಲವು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅದರ ಮೇಲೆ ನಾವು ಎಷ್ಟು ಹೊತ್ತು ಚರ್ಚೆಯಲ್ಲಿ ಭಾಗವಹಿಸಿದರೂ ಕೂಡ ಆಡಳಿತದ ಸೂತ್ರ ಹಿಡಿದಿರತಕ್ಕಂತಹವರು ಅವರು ಕೊಟ್ಟಿರುವ ಸಲಹೆಗಳ ಪೈಕಿ ಸರ್ಕಾರ ಇಂಥದ್ದು ಅನುಷ್ಠಾನಕ್ಕೆ ತರಬಹುದು ಇಂಥಾದ್ದು ಸಾಧ್ಯವಿಲ್ಲ ಇಂಥದಕ್ಕೆ ಪ್ರಯತ್ನಪಡೋಣ ಎಂದು ಜವಾಬ್ದಾರಿ ಹೊತ್ತವರು ಉತ್ತರ ಹೇಳಬೇಕಾಗುತ್ತದೆ. ಮುಖ್ಯಮಂತ್ರಿಗಳು ಶ್ರದ್ಧೆಯಿಂದ ಕೂತಿದ್ದಾರೆ, ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಇಲ್ಲಿ ಯಾರಾದರೂ ಕೂತು ನೋಟ್ಸ್ ಬರೆದುಕೊಳ್ಳುತ್ತಿದ್ದಾರಾ ಅಂತ ನಮಗೇನೂ ಗೊತ್ತಾಗುತ್ತಿಲ್ಲ. ಮುಖ್ಯ ಕಾರ್ಯದರ್ಶಿ, ಮತ್ಯಾರೂ ಕಾಣುತ್ತಾ ಇಲ್ಲ. ನಾನು ಹೇಳುವುದೇನೆಂದರೆ ಇದೇ ತರಹ ಆಗುವುದಾದರೆ, ಅದಕ್ಕೇನೂ ಹೆಚ್ಚು ಮಹತ್ವ ಇಲ್ಲ ಅನ್ನುವುದಾದರೆ ಚರ್ಚೆಯೇನೂ ಬೇಕಾಗಿಲ್ಲ ಆಯಿತು ಅಂತ ಹೇಳಿ, ಅವರಿಗೆ ವಂದನೆ ಸಲ್ಲಿಸಿ ಮುಕ್ತಾಯ ಮಾಡೋಣ. ಕಾಟಾಚಾರಕ್ಕೆ ಮಾಡುವುದಾದರೆ ಬೇಡ. ಅವರು ಬಹಳ ಪರಿಶ್ರಮವಹಿಸಿ ಈ ಸ್ಪೀಚನ್ನು ತಯಾರಿಸಿದರು. ಬಹುಶಃ ನೀವೊಂದು ಇನ್ವಿಟೇಶನ್ ಕೊಟ್ಟಿದ್ದಕ್ಕೆ ಇದೇನು ರಾಷ್ಟ್ರಪತಿಗಳಿಂದ ಸ್ಪೀಚ್ ಪುಕ್ಕಟ್ಟೆ ತಯಾರಾಗಿಲ್ಲ. ಈ ಸ್ಪೀಚ್ ತಯಾರು ಮಾಡುವುದಕ್ಕೆ ತಯಾರು ಮಾಡುವುದಕ್ಕೆ ತುಂಬಾ ಅವರು ಶ್ರಮಪಟ್ಟಿರಲೇಬೇಕು. ಅವರ ಶ್ರದ್ಧೆ, ನಿಷ್ಠೆ, ಅವರಾಡಿರುವ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಅದಕ್ಕೆ ಸ್ಪಂದಿಸುವಾಗ ಅದರ ನೂರು ಭಾಗದಲ್ಲಿ ಒಂದು ಭಾಗಕ್ಕಾದರೂ ನಾವು ಬರಬೇಕಲ್ಲಾ. ನಾನು ಗಮನಿಸುತ್ತಿದ್ದೆ, ಯಾರೂ ನೋಟ್ಸ್ ತೆಗೆದು ಕೊಳ್ಳುತ್ತಿಲ್ಲ, ಹಾಗಾದರೆ ಹೇಗೆ ಉತ್ತರ ಕೊಡುತ್ತಾರೆ? ಇದಕ್ಕೆ ಸಮಂಜಸವಾಗಿ ಉತ್ತರ ಕೊಡುವವರು ಯಾರು?

ಶ್ರೀ ಬಸವರಾಜ ಹೊರಟ್ಟಿ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಕೆಲಕೆಲವು ಪಾಯಿಂಟ್ಸ್‌ನ್ನು ಮಾನ್ಯ ವಾಟಾಳ್ ನಾಗರಾಜರು ಹೇಳಿದ್ದನ್ನು ಬರೆದುಕೊಳ್ಳುತ್ತಿದ್ದೇನೆ. ಎಲ್ಲೆಲ್ಲಿ ಸಾಧ್ಯವಿದೆಯೋ ಅದನ್ನೆಲ್ಲಾ ಬರೆದಿಟ್ಟುಕೊಳ್ಳುತ್ತಿದ್ದೇನೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ನಾನು ಮಾಡಿದ್ದು ಆಪಾದನೆಯಲ್ಲ. ಈ ವಿಷಯದಲ್ಲಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ ಇದಕ್ಕೆ ಕಾರಣ? ಬೇಸಿಸ್ ಏನು? ರಾಷ್ಟ್ರಪತಿಗಳು ಮಾಡಿರುವ ಭಾಷಣ. ಅದಕ್ಕೆ ಸಂಬಂಧಸಿ ನೀವೇನಾದರೂ ಮಾತು ಹೇಳಬೇಕಾಗಿದ್ದರೆ ನಿಮ್ಮ ಹತ್ತಿರ ಮಾಹಿತಿ ಇರಬೇಕಾಗುತ್ತದೆ. ಈಗ ಹತ್ತಿ ಬೆಳೆಗಾರರಿಗೆ ಏನು ಮಾಡಬೇಕು ಅಂತ

ಹೇಳಿದ್ದಾರೆ. ರಫ್ತಿನ ವಿಚಾರ ಹೇಳಿದ್ದಾರೆ, ಬೆಳಿಗ್ಗೆ ತರಕಾರಿ ವಿಚಾರ ಹೇಳಿದರು, ಕೃಷಿ ಸಂಸ್ಕರಣದ ಬಗ್ಗೆ ಕೆಲವು ನೋಟ್ ಮಾಡಿಕೊಳ್ಳುತ್ತೇನೆ ಅಂದರೆ ಹಾಗೆ ಆಗುವುದಿಲ್ಲ. ಶ್ರದ್ದೆ ಅಗತ್ಯ. ನಾವೇನೂ ಕೇಳುತ್ತಿಲ್ಲ ಶ್ರದ್ಧೆವಹಿಸಿ ಅಂತ ಕೇಳಿಕೊಳ್ಳುತ್ತಿರುವುದು ಅಷ್ಟೇ. ಇದು ಪರಸ್ಪರ ಆಪಾದನೆ ಮಾಡಿಕೊಳ್ಳುವ ವಿಚಾರವಲ್ಲ. ಎಲ್ಲೋ ಒಂದು ಕಡೆ ಇದನ್ನು ನಾವು ತನ್ಮಯತೆ ಭಕ್ತಿಭಾವದಿಂದ ನೋಡದೆಹೋದರೆ ಗೌರವದಿಂದ ಇದರಲ್ಲಿ ನಾವು ಭಾಗವಹಿಸದೇ ನಾವು ಹೋದರೆ ರಾಷ್ಟ್ರಪತಿಗಳಿಗೆ ನಾವು ಗೌರವ ತೋರಿಸಿದಂತಾಗುವುದಿಲ್ಲ. ಕಾಟಾಚಾರವಾಗಿ ಬಿಡುತ್ತದೆ. ಆದ್ದರೀದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅನ್ಯಥಾ ಭಾವಿಸಬೇಡಿ. it is not an allegation.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇದನ್ನು ಚರ್ಚೆ ಮಾಡುವ ವಿಧಾನದ ಬಗ್ಗೆಯೇ ಹಲವಾರು ವಿಚಾರ ನಾವು ಹೇಳಿದೆವು, ಆದರೆ ನೀವು ಮೆಜಾರಿಟಿ ತೀರ್ಮಾನಕ್ಕೆ ನಾವು ಒಪ್ಪಿಕೊಂಡೆವು. ನೀವೇ ಹೇಳಿದಿರಿ, ಇದಕ್ಕೆ ಭಾರಿ ಪಾವಿತ್ರ್ಯತೆ ಗಾಂಭೀರ್ಯತೆ ಇದೆ, ನಮ್ಮ ಸದನಕ್ಕೆ ಇದು ಹೆಮ್ಮೆಯ ವಿಚಾರ. ರಾಷ್ಟ್ರಪತಿಗಳು ಕೊಟ್ಟಿರುವ ಸಲಹೆಗಳ ಬಗ್ಗೆ ಚರ್ಚೆಯಾಗಬೇಕು ಅಂತ. ಈಗ ಚರ್ಚೆ ನಡೀತಾ ಇದೆ. ಆ ಕಡೆಯವರು ಈ ಕಡೆಯವರು ಅಂತ ಪ್ರಶ್ನೆ ಅಲ್ಲ, ಈ ಕಡೇನೂ ಯಾರೂ ಜನರಿಲ್ಲ. ಎಲ್ಲ ಖಾಲೀನೇ ನಾವು ಗಂಭೀರವಾಗಿ ಚರ್ಚೆ ಮಾಡಿ ಸಲಹೆಗಳನ್ನು ಕೊಡಬೇಕು ಅಂತ ಹೇಳುವಾಗ – ಸಲಹೆ ಕೊಡುವವರು ಸಲಹೆ ಪಡೆಯುವವರು ಎಂಬ ಪ್ರಶ್ನೆ ಇದರಲ್ಲಿಲ್ಲ, ನಾವೆಲ್ಲಾ ಸೇರಿ ಅದನ್ನು ಪಾಲಿಸಬೇಕಾಗಿದೆ. ಆದರೆ ಇಲ್ಲಿ ನೋಡುತ್ತಾ ಇದ್ದರೆ ಯಾರಿಗೂ ಅದರ ಬಗ್ಗೆ ಗಾಂಭೀರ್ಯವಿಲ್ಲ. ಆಗ ರಾಷ್ಟ್ರಪತಿಗಳಿಗೆ ನಾವು ಗೌರವ ಕೊಟ್ಟಂತ್ತೆಯೇ? ಅಥವಾ ಅಗೌರವ ತೋರಿದಂತೆಯೇ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಚ್.ಡಿ.ಕುಮಾರಸ್ವಾಮಿ : (ಮುಖ್ಯಮಂತ್ರಿಗಳು) : ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ರಮೇಶ್‌ಕುಮಾರ್‌ರವರು ಬೆಳಿಗ್ಗೆಯಿಂದ ಪ್ರಾರಂಭವಾಗಿರುವ ಚರ್ಚೆಯ ವಿಷಯದಲ್ಲಿ ಸರ್ಕಾರಕ್ಕೆ ಗಂಭೀರತೆ ಇಲ್ಲವೆಂಬ ಮಾತು ಹೇಳಿದರು. ಸನ್ಮಾನ್ಯ ಧರಂಸಿಂಗ್‌ರವರು, ಮಾಧುಸ್ವಾಮಿಯವರು ಈಗ ವಾಟಾಳ್ ನಾಗರಾಜ್‌ರವರು ಏನು ಮಾತನಾಡುತ್ತಿದ್ದಾರೆ ಇದನ್ನೆಲ್ಲಾ ಗಮನಿಸುತ್ತ ದ್ದೇನೆ. ಮಧ್ಯದಲ್ಲಿ ನಮ್ಮ ಶಾಸಕರು ಕೆಲವು ಮನವಿ ಕೊಡುತ್ತಿದ್ದರು. ಅದನು ಗಮನಿಸಿಕೊಂಡಿದ್ದೇನೆ. ನಾಳೆ ನಾನು ಉತ್ತರ ಕೊಡುವಾಗ ಗೌರವಾನ್ವಿತ ರಾಷ್ಟ್ರಪತಿಯವರನ್ನು ಸುವರ್ಣ ಮಹೋತ್ಸವದ ಅಂಗವಾಗಿ ಹಿಂದಿನ ಸರ್ಕಾರ

ಮತ್ತು ತಮ್ಮ ತೀರ್ಮಾನದ ಪ್ರಕಾರ ಜಂಟಿ ಅಧಿವೇಶನಕ್ಕೆ ಅವರಿಗೆ ಆಹ್ವಾನ ಏನು ಕೊಟ್ಟೆವು, ಅವರ ಭಾವನೆಗಳನ್ನು ಇಲ್ಲೇನು ವ್ಯಕ್ತಪಡಿಸಿದ್ದಾರೆ, ಅದರ ಬಗ್ಗೆ ಇವತ್ತೇನು ಚರ್ಚೆ ಪ್ರಾರಂಭವಾಗಿದೆ, ನಾನು ಸನ್ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಲು ಬಯಸುತ್ತೇನೆ. ನಾಳೆ ಸದನದ ಎಲ್ಲಾ ಸದಸ್ಯರ ಭಾವನೆಗಳು ರಾಷ್ಟ್ರಪತಿಗಳ ವಿಚಾರಧಾರೆ ಬಗ್ಗೆ ಹಣಕಾಸಿನ ವಿಷಯದಲ್ಲೂ ಏನು ಚರ್ಚೆ ನಡೆದಿದೆ, ಇದಕ್ಕೆಲ್ಲಾ ನಾಳೆ ನಾನು ಉತ್ತರ ಕೊಡುವಾಗ, ಪ್ರತಿ ಸದಸ್ಯರ ಸಲಹೆಗಳನ್ನು ಈ ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳುವ ಮೂಲಕ ಸದನದಲ್ಲಿ ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಈ ಕಡೆ ಕುಳಿತುಕೊಳ್ಳುವ ಸದಸ್ಯರು, ಈ ವಿಷಯನವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಅಂತ ನೀವು ಏನು ಹೇಳಿದ್ದೀರಿ, ನಾವು ಗಂಭೀರವಾಗಿಯೇ ಗಮನಹರಿಸುತ್ತೇವೆ ಅಂತ ತಿಳಿಸಲು ಬಯಸುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರೆಲ್ಲಾ ಮಾತನಾಡುತ್ತಿದ್ದಾರೆ ಸಂತೋಷ. ತಮ್ಮಲ್ಲಿ ನಾವು ಮನವಿ ಮಾಡಿಕೊಳ್ಳುವುದೇನೆಂದರೆ ನಾವೂ ಸಾಕಷ್ಟು ಮಂದಿ ಕೆಲವೊಂದು ತಯಾರಿ ಮಾಡಿಕೊಂಡಿದ್ದೇವೆ. ಈ ಚರ್ಚೆ ನಾಳೆಗೆ ಮುಗಿಸಬೇಕು ಅಂತ ತೀರ್ಮಾನವಾಗಿದೆ. ಈ ಬಗ್ಗೆ ತಮ್ಮ ಜವಾಬ್ದಾರಿ ಇದೆ ಅಂತ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಬೈರೇಗೌಡರೇ, ನಾವು ಈಗಾಗಲೇ ಪಟ್ಟಿ ಕಳಿಸಿದ್ದೇವೆ ನಮ್ಮಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ನಮ್ಮಲ್ಲಿ ಯುವಕರೆಲ್ಲಾ ಮಾತನಾಡಿಯಾದ ಮೇಲೆ ಅವಕಾಶವಿದ್ದರೆ ಮಾತ್ರ ನಾವು ಭಾಗವಹಿಸಲು ಇಷ್ಟಪಡುತ್ತೇವೆ. ಫಸ್ಟ್ ಪ್ರಿಫರೆನ್ಸ್ ಹೊಸಬರಿಗೆ ಕೊಡಿಯೆಂದು ಬರೆದು ಕಳುಹಿಸಿದ್ದೇವೆ.

ಅಧ್ಯಕ್ಷರು : ಮಾನ್ಯ ವಾಟಾಳ್‌ನಾಗರಾಜ್‌ರವರೆ ಬೇಗ ಮುಗಿಸಿ.

ಶ್ರೀ **ವಾಟಾಳ್ ನಾಗರಾಜ್** : ಅಧ್ಯಕ್ಷರೆ, ತಮ್ಮ ಮೂಲಕ ಸರ್ಕಾರಕ್ಕೆ ನಾನು ಏನು ಹೇಳುತ್ತೇನೆ ಅಂದರೆ ಈ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಎಂಬ ಭೇದಭಾವ ಹೋಗುವುದಕ್ಕೆ ಏನು ಮಾಡಬೇಕು? 50ನೇ ವರ್ಷವಾದರೂ ನಾವೆಲ್ಲಾ ಒಟ್ಟಾಗಿದ್ದೇವೆಯೇ? ಒಂದೇ ಕರ್ನಾಟಕ ಎಂಬ ಭಾವನೆ ಬರುವ ರೀತಿಯಲ್ಲಿ ಸರ್ಕಾರ ಪರಿಣಾಮಕಾರಿಯಾಗಿ ಕೆಲಸ ಮಾಡ ಬೇಕಾಗುತ್ತದೆ. ಆಗಲೇ ತಮಗೆ ಹೇಳಿದಂತೆ ಬೆಳಗಾವಿ ತೀರಾ ಹಿಂದುಳಿದಿದೆ. ಅದಕ್ಕೇ ಅಲ್ಲಿ ನಮ್ಮ ಸಂಖ್ಯೆ ಕಡಿಮೆಯಾಗುತ್ತಿದೆ. ಅಲ್ಲಿ ಕೈಗಾರಿಕೆಗಳು

ಜಾಸ್ತಿಯಾಗಬೇಕು ಅಭಿವೃದ್ಧಿ ಕಾರ್ಯ ಜಾಸ್ತಿಯಾಗಬೇಕು. ನಿಮ್ಮ ಗಮನಕ್ಕೆ ತರುತ್ತಾ ಇದ್ದೇನೆ ಅಥಣಿಯ 20 ಹಳ್ಳಿ ಜನ ನಮಗೇನೂ ಪ್ರಯೋಜನವಿಲ್ಲ, ನಾವು ಹೊರಗಡೆ ಹೋಗಬೇಕಾಗುತ್ತದೆ ಎಂಬ ಭಾವನೆ ಕನ್ನಡಿಗರಿಗೆ ಬಂದಿದೆ. ಬೆಳಗಾವಿ ಅಭಿವೃದ್ಧಿ ಸಮಗ್ರವಾಗಿ ಆದಾಗ ಬೀದರ್ ಅಭಿವೃದ್ಧಿ ಸಮಗ್ರವಾಗಿ ಆದಾಗ ಜನ ನಿಜಕ್ಕೂ ಅಲ್ಲೇ ಉಳಿಯುತ್ತಾರೆ. ಗಡಿ ಸಮಸ್ಯೆ ಬಗೆಹರಿಯುವ ಪ್ರಶ್ನೆಯೇ ಇಲ್ಲ. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಗಡಿ ನಾಡಿನ ಸಮಗ್ರ ಅಭಿವೃದ್ಧಿ ಬಗ್ಗೆ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಾಗಿದೆ. ಹತ್ತು ವರ್ಷದಿಂದಲೂ ಆ ಗಡಿ ನಾನು ಅಭಿವೃದ್ಧಿ ವರದಿ ಸರ್ಕಾರದಲ್ಲೇ ಕುಳಿತಿದೆ. ಅದರ ಬಗ್ಗೆ ಇವತ್ತಿನವರೆಗೂ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆನ್ನುವ ಬಗ್ಗೆ ಒಂದು ಇಂಚೂ ಕೂಡ ಮುಂದೆ ಹೋಗಿಲ್ಲ. ಬಹಳ ಸಮಗ್ರವಾಗಿ ಅದನ್ನು ಕೊಟ್ಟಿದ್ದೇವೆ. ಗಡಿನಾಡಿನ ಬೆಳವಣಿಗೆ, ಗಡಿನಾಡಿನ ಹಿತವನ್ನು ಕಾಪಾಡತಕ್ಕ ಬಗ್ಗೆ, ಅಭಿವೃದ್ಧಿ ಬಗ್ಗೆ ವರದಿಯನ್ನು ಕೊಟ್ಟಿದ್ದೇವೆ. ಇದಲ್ಲದೇ ಸರೋಜಿನಿ ಮಹಿಷಿ ವರದಿ, ತಾವು ಕೇಳುತ್ತಿರಬಹುದು. ತಾವು ಅಧ್ಯಕ್ಷರಾಗುವುದಕ್ಕೆ ಮುಂಚೆ ತಾವು ಲೋಕಸಭೆಗೆ ಹೋಗುವುದಕ್ಕೆ ಮುಂಚೆ ಅನೇಕ ಕಡೆ ಸುಮಾರು ಇಪ್ಪತ್ತು ವರ್ಷದಿಂದ ಇಪ್ಪತ್ತೈದು ವರ್ಷದಿಂದ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಸರೋಜಿನಿ ಮಹಿಷಿ ವರದಿಯನ್ನು ಎಲ್ಲಿ ಯಾವಾಗ ನೀವು ಜಾರಿ ಮಾಡುತ್ತೀರಿ? ಯಾವ ಉದ್ದೇಶಕ್ಕೆ ಅದನ್ನು ಮೂಲೆಗುಂಪು ಮಾಡಿದ್ದೀರಿ? ನನಗೆ ಅರ್ಥವಾಗಲಿಲ್ಲ. ಗಡಿನಾಡಿನ ಬಗ್ಗೆ ನಿಮಗೆ ಸುಮಾರು ಆರು ವರ್ಷವಾಯಿತು. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇವೆ, ಗಡಿನಾಡು ಅಭಿವೃದ್ಧಿ ವರದಿ, ಅದರ ಬಗ್ಗೆ ಏನಾಯಿತು? ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾಳೆ ತಾವು ಅದರ ಬಗ್ಗೆ ಉತ್ತರವನ್ನು ಕೊಡುವಾಗ ಗಡಿನಾಡು ಅಭಿವೃದ್ಧಿ ವರದಿ, ನಾನು ಮತ್ತು ಬರಗೂರು ರಾಮಚಂದ್ರಪ್ಪ ಇಬ್ಬರೂ ಸೇರಿ ಕೊಟ್ಟಿದ್ದೇವೆ. ಅದೇನಾಯಿತು? ಸರೋಜಿಸಿ ಮಹಿಷಿ ವರದಿ ನಿಮ್ಮ ಕಾರ್ಯಕ್ರಮದಲ್ಲಿ ಏನು ಮಾಡುತ್ತೀರಿ? ಏಕೆಂದರೆ ಇವೆಲ್ಲಾ ಈ ವರದಿಗಳನ್ನು ಈ ನಾಡಿನ ಸರ್ವಾಂಗೀಣ ಅಭಿವೃದ್ಧಿ ಗಾಗಿ ಕೈಗೊಂಡಂಥ ಸಮಿತಿಗಳು ಕೊಟ್ಟಂಥ ವರದಿಗಳು ಮೂಲೆಗುಂಪಾಗ ಬಾರದು ಈ ವರದಿಗಳ ಬಗ್ಗೆ ಮತ್ತು ಕರ್ನಾಟಕ ಏಕೀಕರಣ ಒಂದೇ ಒಂದು ಏಕೀಕರಣ ಎನ್ನುವ ಭಾವನೆ ಬರುವುದಕ್ಕೆ ತಾವು ಎಷ್ಟರಮಟ್ಟಿಗೆ ಅದರ ಬಗ್ಗೆ ನೀವು ಕಾರ್ಯಕ್ರಮ ಹಾಕುತ್ತೀರಿ ಎನ್ನುವುದು ನಿಮಗೆ ಬಿಟ್ಟಿದ್ದು, ಆ ಕಾರ್ಯಕ್ರಮವಾಗಬೇಕು. ಬಹಳ ಪ್ರಾಮುಖ್ಯವಾಗಿ ತಮಗೆ ನಾನು

ಹೇಳುತ್ತಿದ್ದೇನೆ, 1956 ಕರ್ನಾಟಕ ಏಕೀಕರಣ ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. 56 ರಿಂದ ಇಲ್ಲಿಯವರೆಗೆ ವಲಸೆ ಬಂದಿದೆಯಲ್ಲಾ ಕರ್ನಾಟಕಕ್ಕೆ ಎಷ್ಟು ಬಂದಿರಬಹುದು ಎಂದು ಹೇಳುತ್ತೀರಿ? ಎರಡು ಕೋಟಿ ಜನರು ಬಂದಿದ್ದಾರೆ. ಇಡೀ ಕರ್ನಾಟಕದ ಸಂಪತ್ತು ಒಂದು ರೀತಿ ಲೂಟಿಯಾಗುತ್ತಿದೆ. ಎರಡು ಕೋಟಿ ಜನ ಸಾಂಸ್ಕೃತಿಕವಾಗಿ ರಾಜಕೀಯವಾಗಿ ಎಲ್ಲಾ ದೃಷ್ಟಿಯಿಂದ ನಾವು ಹಿಂದೆ ಬಿದ್ದಿದ್ದೇವೆ. ವಲಸೆ ನಿಲ್ಲಲಿಲ್ಲವೆಂದರೆ ಕರ್ನಾಟಕಕ್ಕೆ ಅಪಾಯ ತಪ್ಪಿದ್ದಲ್ಲ. ಇಷ್ಟು ವಲಸೆ ಈ ದೇಶದಲ್ಲಿ ಯಾವ ರಾಜ್ಯದಲ್ಲೂ ಕೂಡ ಇಲ್ಲ. ಇದು ಕರ್ನಾಟಕ ಒಂದರಲ್ಲೇ ಈ ಪರಿಸ್ಥಿತಿ. ಒಂದು, ವಲಸೆಯನ್ನು ನಿಲ್ಲಿಸಬೇಕು. ಎರಡು, ಗಡಿನಾಡಿನ ಬಗ್ಗೆ ಅವರಿಗಿರುವ ಚಿಂತನೆ, ಬೀದರ್, ರಾಯಚೂರು, ಗುಲ್ಬರ್ಗಾ, ಬೆಳಗಾವಿ ಎಲ್ಲಾ ಕಡೆ, ತಮಗೆ ನಾನು ಹೇಳುತ್ತೇನೆ, ನಾನು ಸೇರಿದಂತೆ ಅನೇಕರು ಒತ್ತಾಯವನ್ನು ಮಾಡಿದ್ದೇವೆ. ಮಹಾರಾಷ್ಟ್ರದಲ್ಲಿ ನಾಗಪುರದಲ್ಲಿ ಒಂದು ಅಧಿವೇಶನ ನಡೆಯುತ್ತದೆ. ಶಾಸನ ಸಭೆಯ ಅಧಿವೇಶನ ನಾವು ಒಂದು ಅಧಿವೇಶನ ನಿಮ್ಮ ಅವಧಿಯಲ್ಲಿ ಬೆಳಗಾವಿಯಲ್ಲಿ ಶಾಸನಸಭೆ ನಡೆಯಲಿ. ಇದಕ್ಕೆ ಬೇಕಾದ ವ್ಯವಸ್ಥೆಗೆ ನೀವು ತಕ್ಷಣವೇ ಒಂದು ಸಮಿತಿಯನ್ನು ರಚನೆ ಮಾಡಿ. ಈ ಸದನ ಸಮಿತಿಯೇ ಬೇಕಾದರೆ ತಾವು ರಚನೆ ಮಾಡಿ. ಅದು ತಮಗೆ ಸೇರಿದ್ದು, ಸದನ ಸಮಿತಿಯನ್ನು ರಚನೆ ಮಾಡಿ ಒಂದು ಅಧಿವೇಶನ ವರ್ಷದಲ್ಲಿ ಕನಿಷ್ಠ ಗಡಿಭಾಗದಲ್ಲಿ ನಡೆಯಿತು ಎಂದು ಹೇಳಿದರೆ ಆ ಜನರಿಗೇನಾಯಿತು, ಒಂದು ಭಾವನೆ ಹೊಸ ಚಿಂತನೆ, ಶುರುವಾಗುತ್ತದೆ. ಈ ಪಕ್ಕದಲ್ಲೇ ನಾವು ವಿಕಾಸಸೌಧವನ್ನು ಇಲ್ಲಿ ಕಟ್ಟುವ ಬದಲು ಗುಲ್ಬರ್ಗಾದಲ್ಲೋ ಬೆಳಗಾಂನಲ್ಲೋ, ಹುಬ್ಬಳ್ಳಿಯಲ್ಲೋ ಕಟ್ಟಿದ್ದರೆ ಆ ಜನರು ಎಷ್ಟೊಂದು ಪ್ರೀತಿಪಡುತ್ತಿದ್ದರು ಎಂದು ಹೇಳಿದರೆ ಬಹಳ ಸಂತೋಷಪಡುವರು. ಬೆಂಗಳೂರಿನಲ್ಲಿ ವಿಧಾನಸೌಧ, ಉತ್ತರ ಕರ್ನಾಟಕದಲ್ಲಿ ವಿಕಾಸಸೌಧ. ಎಲ್ಲರೂ ಚೆನ್ನಾಗಿದೆ ಎಂದು ಹೇಳುವರು. ಭಾವನಾತ್ಮಕವಾಗಿರುವುದು ಕೊಡಗಿನ ಬಗ್ಗೆ ತಮಗೆ ಹೇಳುತ್ತೇನೆ, ಕೊಡವರು, ಅವರ ಸಂಸ್ಕೃತಿ, ನಾವು ಬೆಳೆಸುತ್ತಿಲ್ಲ. ಅವರ ಸಂಸ್ಕೃತಿ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಇಲ್ಲ. ಕೊಡಗನ್ನು ಕಡೆಗಾಣಿಸಿದ್ದೇವೆ. ಒಂದು ಕಾಲದಲ್ಲಿ ಕೊಡಗು ಇವತ್ತೂ ಸಹಾ ಕರ್ನಾಟಕದ ಕಾಶ್ಮೀರ ಕೊಡಗು. ಆ ಕೊಡಗಿನ ಬಗ್ಗೆ ನಾವೆಲ್ಲೊ ಒಂದು ಕಡೆ ಕಡೆಯಾಗಿ ಕಾಣುತ್ತಿದ್ದೇವೆ. ಕೊಡಗಿನ ಜಿಲ್ಲೆಯ ಸಮಗ್ರ ಅಭಿವೃದ್ಧಿ ಬಗೆಗೆ ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. ಮಾನ್ಯ ರಾಯರೆಡ್ಡಿಯವರು ಪಕ್ಕದಲ್ಲಿ ಕೂತಿದ್ದೀರಿ. ನೀವೂ ಕೊಡಗಿನ ಬಗ್ಗೆ ಹೇಳಬೇಕು. ಕೊಡಗಿನ ಸಮಗ್ರ ಅಭಿವೃದ್ಧಿ ಬಗ್ಗೆ ಅದಕ್ಕೊಂದು

ಪ್ಯಾಕೇಜ್, ಒಂದು ಯೋಜನೆ ಆ ಜನರು ಬಹಳ ಸಂತೋಷಪಡುತ್ತಾರೆ. ಕೊಡಗು ಇರಬಹುದು. ಆದ್ದರಿಂದ ನಿಮ್ಮ ಕಾಲದಲ್ಲಿ ಈ ಸುವರ್ಣ ಕರ್ನಾಟಕದ ಕಾಲದಲ್ಲಿ ಸಮಗ್ರವಾಗಿ ಒಂದೇ ಕರ್ನಾಟಕ, ಅಖಂಡ ಕರ್ನಾಟಕವೆನ್ನುವ ರೀತಿಯಲ್ಲಿ ತಾವು ಈ ಕಾರ್ಯಕ್ರಮವನ್ನು ರೂಪಿಸಬೇಕು. ಮತ್ತೆ ಹೊರನಾಡು ಕನ್ನಡಿಗರ ಬಗ್ಗೆ ನೀವೆಲ್ಲರನ್ನೂ ಕರೆಯಿರಿ. ಹೊರನಾಡು ಕನ್ನಡಿಗರ ಮುಖಂಡರುಗಳನ್ನು ಕರೆಯಿರಿ. ಕಾಸರಗೋಡು, ಕಯ್ಯಾರ ಕಿಞ್ಞಣ್ಣರೈ ಅನೇಕರು ಇನ್ನೂ ಇದ್ದಾರೆ. ಪಾಪ, 85 ವರ್ಷ. ಈ ಇಳಿವಯಸ್ಸಿನಲ್ಲಿ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು ಎಂದು ಹೋರಾಟವನ್ನು ಮಾಡುತ್ತಿದ್ದಾರೆ. ಅವರೆಲ್ಲರನ್ನೂ ಕರೆದು ಹೊರನಾಡ ಕನ್ನಡಿಗರೆಲ್ಲರನ್ನೂ ಕರೆದು ವಿಧಾನಸೌಧದಲ್ಲಿ ಒಂದು ಸಭೆಯನ್ನು ನಡೆಸಿ ಅವರ ಪರಿಸ್ಥಿತಿಗಳ ಬಗ್ಗೆ ನೀವು ಬೇರೆ ರೂಪದಲ್ಲಿ ಕನ್ನಡ ಶಾಲೆಗಳ ಬಗ್ಗೆ, ಪಠ್ಯಪುಸ್ತಕದ ಬಗ್ಗೆ, ಉಪಾಧ್ಯಾಯರ ಬಗ್ಗೆ, ಏನೇನು ಅನುಕೂಲಗಳನ್ನು ಅವರಿಗೆ ಮಾಡಿಕೊಡಬಹುದು ಎನ್ನತಕ್ಕಂಥ ವಿಚಾರಗಳನ್ನು ತಾವು ಹೇಳಬೇಕು.

ಅಧ್ಯಕ್ಷರು: ತಾವು ಶುರುಮಾಡಿ 50 ನಿಮಿಷವಾಯಿತು. ಮುಗಿಸಿ. ಇನ್ನು ಅನೇಕರು ಮಾತನಾಡುವವರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ನೀವೇ ಹೇಳಿದಿರಿ ಸುದೀರ್ಘವಾಗಿ ಗಂಭೀರವಾಗಿ ಮಾತನಾಡಬೇಕು ಎಂದು. ನಾವು ಸುದೀರ್ಘವಾಗಿ, ಗಂಭೀರವಾಗಿ ಮಾತನಾಡುತ್ತಿದ್ದೇವೆ. ಬೇಡವೆಂದರೆ ನಾವೇನು ಮಾಡೋಣ?

ಅಧ್ಯಕ್ಷರು: ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್: ತಾವೇ ಹೇಳಿಬಿಟ್ಟಿರಿ. ಬೆಳಿಗ್ಗೆ ಒಂಭತ್ತೂವರೆ ಗಂಟೆಗೆ ನಮ್ಮನ್ನೆಲ್ಲಾ ಕರೆದು ತಿಂಡಿಯನ್ನು ಕೊಟ್ಟು ನೀವೆಲ್ಲರೂ ಸುದೀರ್ಘವಾಗಿ, ಗಂಭೀರವಾಗಿ ಮಾತನಾಡಬೇಕೆಂದು ಹೇಳಿದಿರಿ. ಇದರ ಅರ್ಥವೇನು? ನನಗೆ ಅರ್ಥವಾಗಲಿಲ್ಲ. ಗಂಭೀರವಾಗೂ ಮಾತನಾಡುತ್ತಿದ್ದೇವೆ.

ಅಧ್ಯಕ್ಷರು: ಬೇರೆಯವರಿಗೂ ಅವಕಾಶ ಕೊಡೋಣ.

ಶ್ರೀ ವಾಟಾಳ್ ನಾಗರಾಜ್: ಐವತ್ತು ವರ್ಷದ ಇತಿಹಾಸ ಸುಮ್ಮನೆ ಇಷ್ಟಕ್ಕೆ ನಿಲ್ಲಿಸಿ ಎಂದು ಹೇಳಿದರೆ ಅದು ಸರಿಯಲ್ಲ.

ಶ್ರೀ ಎಸ್.ರಾಜೇಂದ್ರನ್: ಗಂಭೀರವಾಗಿ ಊಟ ಮಾಡಿ ಎಂದರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ತಿಂದುಕೊಂಡು ಕೂರುವುದಲ್ಲ. ಒಂದು ಟೈಮ್.

ಶ್ರೀ ವಾಟಾಳ್ ನಾಗರಾಜ್: ನೋಡಿ, ನಮ್ಮ ಪಕ್ಕದಲ್ಲೇ ಶತ್ರುಗಳಿದ್ದಾರೆ. ನಿಮಗೆ ಹೇಳುವುದಾದರೆ ಎಷ್ಟು ಜನ ಶತ್ರುಗಳೆಂದರೆ ನೋಡಿ. ಅವರೊಬ್ಬರು ಮಹಾಶತ್ರು, ರಮೇಶ್‌ಕುಮಾರ್. ಮಹಾಶತ್ರು ಇವರೊಬ್ಬರು ಶ್ರೀರಾಮರೆಡ್ಡಿಯವರು. ನಮಗೆ ನೀವು ರಕ್ಷಣೆ ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ. ನಾನು ಒಂದನ್ನು ಬಹಳವಾಗಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯದ ಬಗ್ಗೆ, ಗ್ರಾಮೀಣ ಮಹಿಳೆಯರಿಗೆ ತಾವು ನಿಜಕ್ಕೂ ಇದರ ಬಗ್ಗೆ.

ಅಧ್ಯಕ್ಷರು: ಇದರ ಬಗ್ಗೆ ನೀವು ಬಜೆಟ್‌ನಲ್ಲಿ ಇವೆಲ್ಲಾ ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್: ಇದು ಇಲ್ಲಿ ಬರಬೇಕಲ್ಲಾ ಸಾರ್, ಬಹಳ ಪ್ರಾಮುಖ್ಯ ಗ್ರಾಮೀಣ ಮಹಿಳೆಯರ ಬಗ್ಗೆ, ಅವರ ಅಭಿವೃದ್ಧಿ ಕಾರ್ಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಡಾ: ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಮೇಲೆ 11 ಪಾಯಿಂಟ್‌ನಲ್ಲೇ ಹೇಳಿ. ಅವೇನು ಹನ್ನೊಂದು ಪಾಯಿಂಟ್‌ಗಳು ಇವೆ, ಅದರ ಮೇಲೆ ಹೇಳಿ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಅಪ್ಪಣೆ ಪಡೆದು ಒಂದು ಪಾಯಿಂಟನ್ನು ನಾನು ಜಾಸ್ತಿ ಅವರಿಗೆ ಹೇಳುತ್ತೇನೆ. ಈ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ 1947 ರಲ್ಲಿ ಸ್ವಾತಂತ್ರ್ಯ ಇಲ್ಲಿಯವರೆಗೂ ಶೌಚಾಲಯ ಇಲ್ಲ. ಅವರ ಶೌಚಾಲಯ ಬೇಲಿ. ಅವರಿಗೆ ಸ್ವಾತಂತ್ರ್ಯ ಶೌಚಾಲಯಕ್ಕೆ ಹೋಗಬೇಕಾದರೆ ಸಂಜೆ ಕತ್ತಲೆಯಾದ ಮೇಲೆ. ಈ ಕತ್ತಲೆಯಾದ ಮೇಲೆ ಮಾತ್ರ ಅವರಿಗೆ ಮುಕ್ತಿ. ಇದು ಅನಿಷ್ಟ ಪದ್ಧತಿ.

ಅಧ್ಯಕ್ಷರು: ಅವರಿಗೆ ಸ್ವಾತಂತ್ರ್ಯವೇ ಬಂದಿಲ್ಲವೆಂದಂತಾಯಿತು.

ಶ್ರೀ ವಾಟಾಳ್ ನಾಗರಾಜ್: ಇದು ಅನಿಷ್ಟ ಪದ್ಧತಿ. ಹಿಂದೆ ಮಲ ಹೊರುವುದನ್ನು ನಿಲ್ಲಿಸಿದಂಥ ಬಸವಲಿಂಗಪ್ಪನವರ ನೆನಪುಗಳು ನೆನಪಿನಲ್ಲಿ ಉಳಿಯುತ್ತವೆ.. ಅದೇ ರೀತಿ ಈ ಒಂದು ಅನಿಷ್ಟ ಪದ್ಧತಿ ಹೋಗುವುದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದೆ. ನಾನು ಕೊನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳಿಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ಮತ್ತೆ ಬೆಳಿಗ್ಗೆಯೂ ಒಂದು ಹೇಳಿದಿರಿ, ಸರ್ವಪಕ್ಷಗಳ ನಿಯೋಗ ಎಂದು. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸರ್ವಪಕ್ಷಗಳ ನಿಯೋಗ ನೀವು ದೆಹಲಿಗೆ ಹೋಗಿ ಹಣ ತರುವುದಕ್ಕೇನೂ ಆಗುವುದಿಲ್ಲ. ಈಗಾಗಲೇ ನೀವು ದೆಹಲಿಗೆ ಹೋದಾಗ ಎಷ್ಟು ಬೇಡಿಕೆಗಳ ಬಗ್ಗೆ ನೀವು ಮನವಿಯನ್ನು

ಕೊಟ್ಟಿದ್ದೀರಿ. ತಾವು ಮತ್ತು ಉಪ ಮುಖ್ಯಮಂತ್ರಿಗಳು. ರೈಲ್ವೆ ಬಗ್ಗೆ ಕೊಟ್ಟಿದ್ದೀರಿ. ಅನೇಕ ವಿಚಾರಗಳ ಬಗ್ಗೆ ಕೊಟ್ಟಿದ್ದೀರಿ. ರೈಲ್ವೆ ಬಗ್ಗೆ ಕರ್ನಾಟಕವನ್ನು ಭಾರತ ಭೂಪಟದಲ್ಲೇ ದೆಹಲಿ ದೊರೆಗಳು ಕರ್ನಾಟಕವನ್ನು ಕಡೆಗಾಣಿಸಿದ್ದಾರೆ. ಕರ್ನಾಟಕವನ್ನು ಗುಲಾಮರ ರೀತಿಯಲ್ಲಿ ನೋಡುತ್ತಾರೆ. ಕರ್ನಾಟಕದ ಪರಿಸ್ಥಿತಿಯನ್ನು ನೋಡಿದಾಗ ಬೇರೆ ರಾಜ್ಯಕ್ಕೂ, ಕರ್ನಾಟಕಕ್ಕೂ ರೈಲ್ವೆ ಬಗ್ಗೆ ಒಂದು ಶ್ವೇತಪತ್ರವನ್ನು ಕೇಂದ್ರ ಸರ್ಕಾರ ಹೊರಡಿಸಲಿ. ಯಾವ ಯಾವ ರಾಜ್ಯದ ರೈಲ್ವೆ ಮಂತ್ರಿಗಳು ಬಂದರೋ ಅವರವರ ರಾಜ್ಯಕ್ಕೆ ಅನುಕೂಲ. ನಿಮಗೆ ಹೇಳುವುದಾದರೆ ಹೆಚ್ಚಿನ ರೈಲ್ವೆ ಮಂತ್ರಿಗಳು ಬಂದಿದ್ದು ಕರ್ನಾಟಕ ರಾಜ್ಯಕ್ಕೆ ದಾಸಪ್ಪನವರು, ಪೂಣಚ್ಚ ಹನುಮಂತಯ್ಯನವರು, ಜಾಫರ್‌ಷರೀಫ್ ಇವರೆಲ್ಲಾ ಬಂದರು. ಜಾಫರ್‌ಷರೀಫ್ ಹನುಮಂತಯ್ಯನವರ ಕಾಲದಲ್ಲಿ ಸ್ವಲ್ಪ ಕೆಲಸವಾಯಿತು. ನಾವು ಸಂತೋಷಪಡತಕ್ಕದ್ದೇ. ಇವತ್ತು ಜಾಫರ್‌ಷರೀಫ್. ಅಂಥವರನ್ನು ರಾಜ್ಯಸಭೆಗೆ ಕಳುಹಿಸಬೇಕಾಗಿತ್ತು. ನಾನು ಸಂತೋಷಪಡುತ್ತಿದ್ದೆ. ಅಂಥವರು ಬೇಕಾಗಿತ್ತು. ಬೇಕು ಅಂಥ ವ್ಯಕ್ತಿಗಳು, ದಿಟ್ಟ ವ್ಯಕ್ತಿ ಬೇಕು ಎಂದು ನಾನು ಹೇಳುತ್ತೇನೆ. ಅಂಥವರು ಬೇಕಾಗಿತ್ತು. ಏಕೋ ಕಾಂಗ್ರೆಸ್‌ನವರು ಮನಸ್ಸು ಮಾಡಲಿಲ್ಲ. ಅದು ನನ್ನ ವಿಚಾರ ಅಲ್ಲ. ಕನಿಷ್ಠ ನಾಲ್ಕನೇ ಅಭ್ಯರ್ಥಿಯಾಗಿ ಯಾದರೂ ಜಾಫರ್‌ಷರೀಫ್ ಅವರನ್ನು ಹಾಕಿ. ನಾವು ನಿಜಕ್ಕೂ ಮತವನ್ನು ಕೊಡುತ್ತೇವೆ. ಪ್ರಾಮಾಣಿಕವಾಗಿ ಹೇಳುತ್ತೇನೆ. ನಿಜವಾಗಿಯೂ ರೈಲ್ವೆ ಮಂತ್ರಿಯಾಗಿದ್ದಾಗ ಅವರ ನಡೆಸಿದಂಥ ಕಾರ್ಯದ ಬಗ್ಗೆ ದಯವಿಟ್ಟು ನೀವು ಇವತ್ತು ಚಿಂತನೆಯನ್ನು ಮಾಡಿ. ನನ್ನದೇನೂ ಅಭ್ಯಂತರವಿಲ್ಲ. ನಾನು ಏಕೆ ಹೇಳುತ್ತೇನೆಂದರೆ ನಮಗೆ ರೈಲ್ವೆಯಲ್ಲಿ ಅನ್ಯಾಯವಾಗಿದೆ ಮತ್ತೆ ತಮಗೆ ಗೊತ್ತಿರಬೇಕು, ಖನಿಜಗಳು, ಗ್ರಾನೈಟ್‌ಗಳು ಎಷ್ಟು ಲೂಟಿಯಾಗುತ್ತಿದೆ ನೋಡಿ, ನೀವು ಏನಾದರೂ ಈ ನಮ್ಮ ಹಿನ್ನೆಲೆ, ಪರಂಪರೆ, ಇವೆಲ್ಲಾ ಹಾಳಾಗುತ್ತಿದೆ. ಅದರ ಬಗ್ಗೆ ವಿಚಾರ ಮಾಡಬೇಕು. ನಿನ್ನೆ ಬಳ್ಳಾರಿಯ ವಿಚಾರ ಟಿ.ವಿ.ಯಲ್ಲಿ ನೋಡುತ್ತಿದ್ದರೆ ಸಾವಿರಾರು ಲಾರಿಗಳಲ್ಲಿ ಒಂದು ತರಹ ಲೂಟಿ ಆಗುತ್ತಿತ್ತು. ಕಬ್ಬಿಣದ ಅದಿರು, ಈ ಗ್ರಾನೈಟ್‌ಗಳು ನಮ್ಮ ರಾಜ್ಯದ ಅರಣ್ಯ ಎಲ್ಲವೂ ಲೂಟಿ ಆಗುತ್ತಿದೆ. ನಾವು ಎಲ್ಲಿ ಬದುಕುವುದು? ಸುವರ್ಣ ಕರ್ನಾಟಕ ಎಂದು ನಾವು ಬರೇ ಮಾತನಾಡಿಕೊಂಡು ಕುಳಿತರೆ ಹೇಗೆ? ಒಂದು ಕಡೆ ಅರಣ್ಯ ನಾಶ ಅರಣ್ಯ ಲೂಟಿ, ಕಬ್ಬಿಣದ ಅದಿರಿನ ಲೂಟಿ, ಗ್ರಾನೈಟ್ ಲೂಟಿ. ಈ ತರಹ ಎಲ್ಲಾ ಹೋದರೆ ನಾವೆಲ್ಲಿ ಉಳಿಯಲು ಸಾಧ್ಯ? ಖನಿಜಗಳ ಲೂಟಿ, ಒಂದು ಎರಡು ಸಾವಿರ ಅಲ್ಲ. ಸಾವಿರಾರು ಕೋಟಿ ಲೂಟಿ ಆಗುತ್ತಿದೆ. ಆದ್ದರಿಂದ ಇದರ ಬಗ್ಗೆ

ಎಲ್ಲಾ ತಾವು ಗಮನ ಹರಿಸಿ ಈ ರಾಜ್ಯ ಸುಭದ್ರವಾದಂತಹ ರಾಜ್ಯ ಆಗುವುದಕ್ಕೆ ಡಾ: ಕಲಾಂ ಅವರನ್ನು ಏನು ಕರೆಸಿದಿರಿ, ಈ ಕರೆಸಿದಂತಹ ಸಂದರ್ಭ ನಮಗೇನೂ ಹಿಡಿಸಲಿಲ್ಲ. ಇಲ್ಲ ನವೆಂಬರ್ 1ನೇ ತಾರೀಖು, ಇಲ್ಲ 50ನೇ ವರ್ಷದ ದಿನ ನೀವು ಕರೆಸಬೇಕಾಗಿತ್ತು. ಅದು ಪ್ರಶ್ನೆ. ಆಮೇಲೆ ಈ ಸುವರ್ಣ ಕರ್ನಾಟಕದ ಇತಿಹಾಸ, ಶತ ಶತಮಾನಗಳ ಕಾಲ ಉಳಿಯುವುದಕ್ಕೆ ಅಂತಹದ್ದು ಏನಾದರೂ ಸ್ಮಾರಕ ಮಾಡಬೇಕು. ಅದರ ಬಗ್ಗೆ ಒಂದು ಸಮಿತಿ ಮಾಡಿ. ಏನು ಸ್ಮಾರಕ ಮಾಡಬಹುದು ಎಂದು ಬೇಕಾದರೆ ನಾವು ಸಲಹೆ ಕೊಡುತ್ತೇವೆ. ಅಂತಹ ಸ್ಮಾರಕ ನಿರ್ಮಾಣ ಇಡೀ ರಾಜ್ಯದಲ್ಲಿ ಉನ್ನತವಾಗಿ ಆಗಲಿ. ಆದ್ದರಿಂದ ಈ ಸುವರ್ಣ ಕರ್ನಾಟಕದ ಬಗ್ಗೆ ಡಾ: ಅಬ್ದುಲ್ ಕಲಾಂ ಅವರು ಸದುದ್ದೇಶದಿಂದ ಬಂದು ನಮ್ಮ ರಾಜ್ಯದ ಬಗ್ಗೆ ಕಳಕಳಿ ಇಟ್ಟು ಮಾತನಾಡಿದ್ದಾರೆ. ಅವರು ಎಲ್ಲಾ ಕಡೆಯೂ ಮಾತನಾಡಿದ್ದಾರೆ. ಲೋಕಸಭೆಯಲ್ಲೂ ಮಾತನಾಡಿದ್ದಾರೆ. ಇದು ಮಾತಾಗಿ ಉಳಿಯಬಾರದು. ನೀವು ಎಷ್ಟು ಕಾಳಜಿ ಇಟ್ಟುಕೊಂಡಿದ್ದೀರಿ, ಇದು ಮಾತಾಗಿ ಉಳಿಯದೇ ಕೃತಿಯಲ್ಲಿ ಬರುವುದಕ್ಕೆ ನೀವೇನು ಕ್ರಮ ತೆಗೆದುಕೊಂಡಿದ್ದೀರಿ? 20ನೇ ತಾರೀಖು ಮಾನ್ಯ ಉಪ ಮುಖ್ಯಮಂತ್ರಿಗಳು ಮಂಡಿಸತಕ್ಕಂಥ ಆಯವ್ಯಯದಲ್ಲಿ ಇದರ ಬಗ್ಗೆ ಎಷ್ಟು ಹಣವನ್ನು ಯಾವ್ಯಾವ ಕಾರ್ಯಕ್ರಮಗಳಿಗೆ ಇಟ್ಟಿದ್ದೀರಿ ಎನ್ನತಕ್ಕದ್ದು ಸ್ಪಷ್ಟವಾದ ಕರ್ತವ್ಯ ಎಂದು ಹೇಳಿ ಈ ಒಂದು ಸಂದರ್ಭದಲ್ಲಿ ಮಾತನಾಡಲು ಅವಕಾಶ ಸಿಕ್ಕಿದ್ದು ಒಂದು ಸುಯೋಗ ಎಂದು ಕೊಂಡು ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಸಿ. ಕೃಷ್ಣಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ಘನತೆವೆತ್ತ ರಾಷ್ಟ್ರಪತಿಯವರು ಕರ್ನಾಟಕದ ಏಕೀಕರಣ ಸುವರ್ಣ ವರ್ಷದ ಸಂದರ್ಭದಲ್ಲಿ ಏನೊಂದು ಸಂದೇಶವನ್ನು ಜಂಟಿ ಅಧಿವೇಶನದ ಮುಖಾಂತರ ರಾಜ್ಯಕ್ಕೆ ನೀಡಿದರು. ಅದರ ಮೇಲೆ ನಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಲಿಕ್ಕೆ ಏನೊಂದು ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ಪ್ರಥಮವಾಗಿ ಧನ್ಯವಾದಗಳನ್ನು ತಿಳಿಸಲಿಕ್ಕೆ ಬಯಸುತ್ತೇನೆ. ಈ ಚರ್ಚೆ ಪ್ರಾರಂಭ ಆದಾಗ ಮಾನ್ಯ ಮಾಧುಸ್ವಾಮಿಯವರು ಒಂದು ಪ್ರಶ್ನೆಯನ್ನು ಎತ್ತಿದರು. ಯಾವ ಒಂದು ಕಲಂ ಅಡಿಯಲ್ಲಿ ನಾವು ಈ ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇವೆಂದು ಪ್ರಶ್ನೆ ಎತ್ತಿದರು. ಅದು ಸ್ವಲ್ಪಮಟ್ಟಿಗೆ ಜಿಜ್ಞಾಸೆಗೆ ಎಡೆ ಮಾಡಿಕೊಡತಕ್ಕ ಅಂಶ ಎಂದು ಹೇಳುತ್ತೇನೆ. ನಾವು ಇಂತಹ ಕೆಲವು ವಿಷಯಗಳನ್ನು ತೆಗೆದುಕೊಂಡಾಗ ಮುಂದೆ ಅದರಿಂದ ಏನೊಂದು ಕಾನ್ಸಿಕ್ವೆನ್ಸಸ್ ಏನು ಎನ್ನುವುದರ ಬಗ್ಗೆ ಸಹ

ಸ್ವಲ್ಪಮಟ್ಟಿಗೆ ಗಮನದಲ್ಲಿಟ್ಟುಕೊಳ್ಳಬೇಕು ಎನ್ನುವುದನ್ನು ನಾನು ತಮ್ಮಲ್ಲಿ ಸವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳಲು ಬಯಸುತ್ತೇನೆ. ಮಾನ್ಯ ಮಾಧುಸ್ವಾಮಿಯವರು ಇನ್ನೊಂದು ಅಂಶವನ್ನು ಹೇಳಿದರು. ಇದರ ಅವಶ್ಯಕತೆ ಏನು ಇತ್ತು? ನಮ್ಮಲ್ಲಿ ಈ ರೀತಿಯ ಯೋಜನೆಗಳನ್ನು ಹಾಕಿಕೊಳ್ಳತಕ್ಕ ಶಕ್ತಿ ನಮಗಿಲ್ಲವಾ ಎಂದು ಕೇಳಿದರು. ಘನತೆವೆತ್ತ ರಾಷ್ಟ್ರಪತಿಗಳು ನಮ್ಮ ಭಾರತದಲ್ಲಿ ಅತ್ಯಂತ ಉನ್ನತ ವ್ಯಕ್ತಿಗಳು ಎನ್ನುವುದನ್ನು ಈ ಸದನದಲ್ಲಿ ನಾವೆಲ್ಲರೂ ಸಹ ಒಪ್ಪಬೇಕಾಗಿರತಕ್ಕಂಥ ಅಂಶ. ಅವರು ರಾಷ್ಟ್ರಪತಿಗಳಾದ ನಂತರ ನಮ್ಮ ದೇಶಕ್ಕೆ ಪ್ರಪಂಚದಲ್ಲಿಯೇ ಸಾಕಷ್ಟು ಗೌರವವನ್ನು ತಂದು ಕೊಟ್ಟಿದ್ದಾರೆ. ಅವರು ಏನು ಕೆಲವು ವಿಷಯಗಳನ್ನು ಇಲ್ಲಿ ನಮ್ಮ ಮುಂದೆ ಇಟ್ಟಿದ್ದಾರೆ? ಅದು ಅವರ ವ್ಯಕ್ತಿತ್ವಕ್ಕೆ ಪ್ರತಿ ಬಿಂಬಿಸುವ ರೀತಿಯಲ್ಲಿ ನಮ್ಮ ಮುಂದೆ ಕೆಲವು ವಿಷಯಗಳನ್ನು ಇಟ್ಟಿದ್ದಾರೆ. ಪ್ರಥಮವಾಗಿ ಈ ರಾಷ್ಟ್ರಪತಿಗಳ ಬಗ್ಗೆ ನಾವೆಲ್ಲರೂ ಸಹಿತ ಇಡೀ ದೇಶ ಸಂಪೂರ್ಣ ಹೆಮ್ಮೆಯಿಂದ ಕೂಡಿದ್ದೇವೆ ಎನ್ನುವ ಒಂದು ಅಂಶವನ್ನು ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ. ಒಂದು ಪ್ರಶ್ನೆ ಬೆಳಿಗ್ಗೆ ಬಂತು. ಏನು ನಾವು 'are we morally, intellectually bankrupt' ರಾಷ್ಟ್ರಪತಿಗಳು ಬಂದು ಈ ಅಂಶಗಳನ್ನು ಹೇಳಬೇಕಾದರೆ ನಮ್ಮಲ್ಲಿ ಆ ಶಕ್ತಿ ಇಲ್ಲವಾ ಎಂದು. ಬಹುಶಃ ಇತ್ತೀಚಿನ ವರ್ಷಗಳಲ್ಲಿ ಮುಖ್ಯವಾಗಿ ರಾಷ್ಟ್ರಪತಿಗಳ ಸಂದೇಶದಿಂದ ನಾವೇನು ತೆಗೆದುಕೊಳ್ಳಬೇಕಾಗಿದೆ ಎಂದರೆ ಆ ಒಂದು ದೂರದೃಷ್ಟಿಯನ್ನು ಇಟ್ಟುಕೊಂಡು ಯೋಚನೆ ಮಾಡತಕ್ಕಂಥ ಶಕ್ತಿಯನ್ನು ನಾವಂತೂ ಕಳೆದುಕೊಂಡಿದ್ದೇವೆ ಎನ್ನುವುದು ನನ್ನ ಭಾವನೆ. ಏನಿದ್ದರೂ ಸರ್ಕಾರ ದಿನದಿಂದ ದಿನಕ್ಕೆ ನಡೆಸಿಕೊಂಡು ಹೋಗುವ ಮಟ್ಟಕ್ಕೆ ತಂದಿದ್ದೇವೆಯೇ ಹೊರತು ಸ್ವಾತಂತ್ರ್ಯದ ನಂತರ ಏನೊಂದು ಕನಸುಗಳನ್ನು ಕಂಡು ನಾವು ಈ ರಾಷ್ಟ್ರವನ್ನು ಕಟ್ಟಲಿಕ್ಕೆ ಹೊರಟಿದ್ದೆವು, ಅಂದಿನ ಮಹಾನ್ ನಾಯಕರ ನೇತೃತ್ವದಲ್ಲಿ ಇಂದು ಆ ಕನಸುಗಳನ್ನು ಕಾಣತಕ್ಕ ಒಂದು ಶಕ್ತಿಯನ್ನು ನಾವು ಕಳೆದುಕೊಂಡಿದ್ದೇವೆಂದು ನಾನಂತೂ ಭಾವಿಸಿಕೊಂಡಿದ್ದೇನೆ. ಸರ್ಕಾರ ಏನು ಮಾಡುತ್ತದೆ? ದಿನದಿಂದು ದಿನಕ್ಕೆ ನಾವು ಸರ್ಕಾರವನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ಯಾವುದೋ ಒಂದು ಸಮಸ್ಯೆ ಸೃಷ್ಟಿ ಆದರೆ, ಸಮಸ್ಯೆ ಬಂದ ನಂತರ ಆ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬೇಕು ಎನ್ನುವುದರ ಬಗ್ಗೆ ನಾವು ಯೋಚನೆ ಮಾಡುತ್ತೇವೆಯೇ ಹೊರತು ಸಮಸ್ಯೆಗೆ ಮೊದಲೇ, ಸೃಷ್ಟಿ ಆಗುವ ಮೊದಲೇ ಅದಕ್ಕೆ ಉತ್ತರಗಳನ್ನು ಕಂಡುಹಿಡಿಯತಕ್ಕದ್ದು - ಆಗಲೀ ಅಥವಾ ನಮ್ಮ ಸಮಾಜವನ್ನು ಯಾವ ದಿಕ್ಕಿನಲ್ಲಿ ನಾವು ತೆಗೆದುಕೊಂಡು ಹೋಗಬೇಕು

ಎನ್ನುವುದರ ಬಗ್ಗೆ ಚಿಂತನೆ ಮಾಡುವುದಾಗಲೀ ನಾವು ಮಾಡುತ್ತಿಲ್ಲ. ಹಾಗಾಗಿ, ಇವತ್ತು ಏನಾಗುತ್ತಿದೆ? ಅಂದರೆ ಬೆಂಗಳೂರಿನ ಬಗ್ಗೆನೂ ಸಹ ಸಾಕಷ್ಟು ಇವತ್ತು ಚರ್ಚೆ ಆಯಿತು. ಬೆಂಗಳೂರು ತಾನಾಗೇ ತಾನು ಬೆಳೆದುಕೊಂಡು ಹೋಗುತ್ತಿದೆಯೇ ಹೊರತು, ಅದಕ್ಕೆ ಯಾರೂ ನಿರ್ದಿಷ್ಟವಾದಂತಹ ದಿಕ್ಕನ್ನಾಗಲೀ ಅಥವಾ ಗುರಿಯನ್ನಾಗಲೀ ನಿಗದಿ ಮಾಡುತ್ತಿಲ್ಲ. ಇವತ್ತು ನಮ್ಮ ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಸಾಕಷ್ಟು ಮುಂದುವರಿದ್ದೇವೆ ಎಂದರೆ ಅದು ಯಾವ ಸರ್ಕಾರದಿಂದಲೂ ಅಲ್ಲ. ಸರ್ಕಾರವನ್ನು ಹೊರತುಪಡಿಸಿ ಅದು ಮುಂದು ವರದಿರತಕ್ಕದ್ದು ಎಂಬುದು ನನ್ನ ಭಾವನೆ. ಹೀಗಾಗಿ ಏನಾಗಿದೆ ಎಂದರೆ ನಾವೊಂದು ದೂರದೃಷ್ಟಿಯನ್ನು ಇಟ್ಟುಕೊಂಡು ಕೆಲಸವನ್ನು ಮಾಡುವ ಆಲೋಚನೆಯನ್ನು ನಮ್ಮ ಸರ್ಕಾರದಲ್ಲಿ ಇಟ್ಟುಕೊಳ್ಳಬೇಕು, ನಾವು ಆ ಗುರಿಯನ್ನು ಕಳೆದುಕೊಂಡಿದ್ದೇವೆ ಎಂದು ನನ್ನ ಭಾವನೆ. visionary zeal ಎಂದೇನು ನಾವು ಕರೆಯುತ್ತೇವೆ, ಆ ವಿಷನರಿ zeal ನಮ್ಮಲ್ಲಿಲ್ಲ. ಅದರಿಂದಾಗಿ ನಾವು ಏನೋ ಒಂದು ದಿನದಿಂದ ದಿನಕ್ಕೆ ನಡೆದುಕೊಂಡು ಹೋಗತಕ್ಕಂಥ ಒಂದು ದಾರಿಗೆ ನಾವು ಬಿದ್ದಿದ್ದೇವೆ ಎಂದು ನಾನಂತೂ ಭಾವಿಸುತ್ತೇನೆ. ಹಾಗಾಗಿ ಘನತೆವೆತ್ತ ರಾಷ್ಟ್ರಪತಿಗಳು ಏನೊಂದು ಭಾಷಣವನ್ನು ಮಾಡಿದ್ದಾರೆ, ಈ ಒಂದು ಹಿನ್ನೆಲೆಯಲ್ಲಿ ಅವರ ಭಾಷಣವನ್ನು ಕಾಣಬೇಕು ಎನ್ನತಕ್ಕದ್ದು ನನ್ನ ಅಭಿಪ್ರಾಯ. ಏಕೆಂದರೆ ಅವರೇನು ಒಂದು ದೂರದೃಷ್ಟಿಯನ್ನು ಮುಂದಿಟ್ಟಿದ್ದಾರೆ, ಅದನ್ನು ನಾವು ಮುಖ್ಯವಾಗಿ ಗಮನದಲ್ಲಿ ತೆಗೆದುಕೊಳ್ಳಬೇಕಾಗಿದೆ. ಅವರ ಕೆಲವೊಂದು ಅಂಶಗಳನ್ನು ನಾವು ಒಪ್ಪಿಕೊಳ್ಳಬಹುದು ಅಥವಾ ಕೈಬಿಡಬಹುದು. ಆದರೆ ಏನೊಂದು ವಿಷನ್ ಇಟ್ಟುಕೊಂಡು ಕೆಲಸ ಮಾಡಬೇಕು ಎನ್ನತಕ್ಕಂಥ ಒಂದು ಸಂದೇಶವನ್ನು ಕೊಟ್ಟಿದ್ದಾರೆ, ಅದು ಮುಖ್ಯವಾಗಿ ನಾವು ರಾಷ್ಟ್ರಪತಿಗಳ ಭಾಷಣದಿಂದ ಅದನ್ನು ನಾವು ಪ್ರಥಮವಾಗಿ ಕಲಿಯಬೇಕು. ಆ ಒಂದು ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡತಕ್ಕದ್ದನ್ನು ನಾವು ಪ್ರಥಮವಾಗಿ ಅಳವಡಿಸಿಕೊಂಡರೆ ಅದರಿಂದ ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸುವ ದಿಕ್ಕಿನಲ್ಲಿ ಕೆಲಸ ಮಾಡಬಹುದು ಎನ್ನತಕ್ಕದ್ದು ನನ್ನ ಪ್ರಥಮ ಅಭಿಪ್ರಾಯ ಎಂದು ತಿಳಿಸುತ್ತೇನೆ. ಮುಖ್ಯವಾಗಿ ನನಗೆ ಇವರೇನು 11 ಅಂಶಗಳನ್ನು ನವೆಂಬರ್ 20ರಂದು ಪ್ರಸ್ತುತ ಪಡಿಸಿದರು. ಅದರಲ್ಲಿ ನನಗೆ ಭಾರೀ ಹತ್ತಿರವಾದಂತಹ ವಿಷಯ ಎಂದರೆ ತೋಟಗಾರಿಕೆ ಮತ್ತು ಹಣ್ಣು ಹಂಪಲುಗಳ ಸಂಸ್ಕರಣದ ಬಗ್ಗೆ ಅವರು ಕರ್ನಾಟಕದ ಶಕ್ತಿ ಏನು ಕರ್ನಾಟಕ ಯಾವ ದಿಕ್ಕಿನಲ್ಲಿ ಮುಂದುವರಿಯಬಹುದು ಎನ್ನತಕ್ಕ ಒಂದು

ಪಾಸಿಬಲಿಟಿ ಏನು ಇದೆ ಅದನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಒಂದೆರಡು ನಿಮಿಷ ಮಾತನಾಡಲು ಬಯಸುತ್ತೇನೆ. ಒಂದು ಸೂಚ್ಯವಾಗಿ ಅವರು ಹೇಳುತ್ತಾರೆ. ಸಧ್ಯಕ್ಕೆ ನಾವು ಸುಮಾರು ಆರು ಸಾವಿರ ಕೋಟಿ ರೂಪಾಯಿ ಫುಡ್ ಪ್ರೋಸೆಸಿಂಗ್‌ನಲ್ಲಿ ವಹಿವಾಟು ಮಾಡುತ್ತಿದ್ದೇವೆ, ವಹಿವಾಟು ಆಗುತ್ತಿದೆ. ಇದನ್ನು ಕನಿಷ್ಠ ತತ್‌ಕ್ಷಣ ಒಂಭತ್ತು ಸಾವಿರ ಕೋಟಿಗೆ ಏರಿಸಬೇಕು ಎನ್ನತಕ್ಕ ಒಂದು ಸಂದೇಶವನ್ನು ಕೊಟ್ಟಿದ್ದಾರೆ. ಉದಾಹರಣೆಗೆ ನಾನು ಇವತ್ತು ಕೋಲಾರ ಜಿಲ್ಲೆಯಿಂದ ಬಂದಂತಹವನು. ಕೋಲಾರ ಜಿಲ್ಲೆಯಲ್ಲಿ ನಮ್ಮಲ್ಲಿ ನೀರಿಗೆ ಭಾರಿ ಅಭಾವ. ಮಳೆ ಬಿದ್ದ ವರ್ಷನೂ ಸಹ ನಮಗೆ ನೀರಿಗೆ ಅಭಾವ. ಇಂತಹ ಹಿನ್ನೆಲೆಯಲ್ಲಿ ಸರ್ಕಾರ ನಮಗೆ ಅನೇಕ ವರ್ಷಗಳಿಂದ ನೀವು ಆದಷ್ಟು ತೋಟಗಾರಿಕೆಗೆ ಹೆಚ್ಚು ಒತ್ತು ಕೊಡಬೇಕೆಂದು ನಮ್ಮ ಜಿಲ್ಲೆಯ ಎಲ್ಲಾ ರೈತರಿಗೆ ಒತ್ತಾಯ ಮಾಡುತ್ತಲೇ ಬರುತ್ತಿದೆ. ಈ ಹಿನ್ನೆಲೆಯಲ್ಲಿ ನಾವು ಸುಮಾರು ವರ್ಷಗಳಿಂದ ಮಾವನ್ನು ಬೆಳೆಯುವುದನ್ನು ಹೆಚ್ಚಿಗೆ ಅವಲಂಬಿಸಿಕೊಂಡು ಬಂದಿದ್ದೇವೆ. ಪ್ರತಿವರ್ಷ ನೂರಾರು ಹೆಕ್ಟೇರ್, ಸಾವಿರಾರು ಹೆಕ್ಟೇರ್ ಮಾವನ್ನು ನಾವು ಅಳವಡಿಸಿಕೊಳ್ಳುತ್ತಿದ್ದೇವೆ. ಏಕೆಂದು ಹೇಳಿದರೆ ನೀರಿನ ಬವಣೆ ನಮಗೆ ಇದೆ. ಮಾವಿಗೆ ನೀರು ಕಡಿಮೆ ಬೇಕು ಎನ್ನುವ ಉದ್ದೇಶದಿಂದ ಮಾವು ಬೆಳೆಗೆ ನಾವು ಹೆಚ್ಚು ಒತ್ತುಕೊಟ್ಟುಕೊಂಡು ಬರುತ್ತಿದ್ದೇವೆ. ಮೊನ್ನೆ ನಮ್ಮ ಸ್ನೇಹಿತರು ಒಬ್ಬರು ಕೋಲಾರದಲ್ಲಿ ಚಿನ್ನದ ಗಣಿ ಬತ್ತಿ ಹೋದರೂ, ಸಹಿತ ನಿಮಗೆ ಬೇರೆ ಚಿನ್ನವೇ ಇದೆ, ಕೋಲಾರದಲ್ಲಿ ಸಿಗತಕ್ಕ ಮಾವಿನ ಹಣ್ಣು ಪ್ರಪಂಚದಲ್ಲಿ ಎಲ್ಲೂ ಸಿಗುವುದಿಲ್ಲ ಅಂತ ಹೇಳಿದರು. ನಾನೇ ಸ್ವತಃ 10–12 ದೇಶಗಳಲ್ಲಿ ಮಾವಿನ ಹಣ್ಣನ್ನು ತಿಂದಿದ್ದೇನೆ. ಆದರೆ ಎಲ್ಲಿಯೂ ಸಹ ರುಚಿ ಇರತಕ್ಕ ಮಾವಿನ ಹಣ್ಣ ನಮ್ಮ ರಾಜ್ಯದಲ್ಲಿ, ರತ್ನಗಿರಿ ಬಿಟ್ಟು ಇನ್ನೆಲ್ಲೂ ಅಷ್ಟು ರುಚಿಕರವಾದಂತಹ ಮಾವಿನ ಹಣ್ಣು ಪ್ರಪಂಚದಲ್ಲಿ ಸಿಗುವುದಿಲ್ಲ. ಆ ಮಾವಿನ ಹಣ್ಣು, ಒಂದನ್ನು ಮಾರುಕಟ್ಟೆ ಮಾಡುವುದಕ್ಕೆ ನಮ್ಮ ಹತ್ತಿರ ಏನಾದರೂ ವ್ಯವಸ್ಥೆ ಇದುವರೆಗೆ ಇದೆಯಾ? ಮಾವಿನ ಹಣ್ಣಿನ ಬಗ್ಗೆ ಕೋಲಾರ ಜಿಲ್ಲೆಯ ರೈತರಿಗೆಲ್ಲಾ ಹೇಳುತ್ತೀರಿ, ಕೋಲಾರ ಆಗಬಹುದು. ಬೆಂಗಳೂರು ಆಗಬಹುದು, ತುಮಕೂರಿನಲ್ಲಿ, ಮಾವಿನ ಗಿಡಗಳನ್ನು ನಾಟಿ ಮಾಡಿ ಎಂದು ಸರ್ಕಾರ 20 ವರ್ಷದಿಂದ ಹೇಳುತ್ತಿದೆ. ಆದರೆ ಬೆಳೆಯುತಿರುವ ಮಾವಿನ ಹಣ್ಣಿಗೆ ಏನಾದರೂ ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ನಾವು ಕಲ್ಪಿಸಿದ್ದೇವಾ? ನಮ್ಮನ್ನು ನಾವೇ ಪ್ರಶ್ನೆ ಮಾಡಿಕೊಳ್ಳಬೇಕಾದ ಸಂದರ್ಭ ಇದಾಗಿದೆ. ಬಿಜಾಪುರದಲ್ಲಿ ದಾಳಿಂಬೆ ಬೆಳೆಯುತ್ತಾರೆ. ಅದಕ್ಕೆ ಇವೊತ್ತು ರೋಗ ಬಂದಿರುವ ಪರಿಣಾಮ ಜನರು

ತತ್ತರಿಸುತ್ತಿದ್ದಾರೆ. ಆ ರೋಗಕ್ಕೆ ಏನಾದರೂ ನಾವು ಸೂಕ್ತ ನಿವಾರಣೆ ಒದಗಿಸಿ ಕೊಟ್ಟಿದ್ದೇವೆಯೇ? ಇರುವ ಒಂದೆರಡು ತೋಟಗಾರಿಕಾ ಬೆಳೆಗಳಿಗೆ ನಾವು ಸೂಕ್ತ ಮಾರುಕಟ್ಟೆ ಸೌಲಭ್ಯವಾಗಲಿ, ರೈತರಿಗೆ ಉತ್ತಮ ಮಾಹಿತಿ ಕೊಡುವುದಕ್ಕೆ ಆಗದೇ ಹೋದಾಗ ಸುಮ್ಮನೆ ತೊಟಗಾರಿಕಾ ದಿಕ್ಕಿನಲ್ಲಿ ಮುಂದುವರಿಯಬೇಕು, ನೀರನ್ನು ಸಂರಕ್ಷಿಸುವುದಕ್ಕೋಸ್ಕರ ತೋಟಗಾರಿಕೆಗೆ ಹೆಚ್ಚು ಪ್ರೋತ್ಸಾಹ ನೀಡಬೇಕೆಂದು ಬರೀ ಬಾಯಿ ಮಾತುಗಳಲ್ಲಿ ಹೇಳುತ್ತಿದ್ದೇವೆಯೇ ಹೊರತು ಆ ನಿಟ್ಟಿನಲ್ಲಿ ಕಾರ್ಯಗತಗೊಳಿಸಲು ಇದುವರೆಗೂ ಏನಾದರೂ ಮಾಡಿದ್ದೇವೆಯೇ? ಈ ವರ್ಷದಲ್ಲಿ ಇತ್ತೀಚೆಗೆ ಅಮೆರಿಕಾದ ರಾಷ್ಟ್ರಪತಿಗಳು ಭಾರತಕ್ಕೆ ಬಂದಾಗ ಅಮೆರಿಕಾ ಮತ್ತು ಭಾರತದ ಒಂದು ಎಂ.ಓ.ಯು.ಗೆ ಸಹಿ ಹಾಕಿವೆ. ಅದರಲ್ಲಿ 'ನಾವು ಮುಂದೆ ಭಾರತದ ಮಾವಿನಹಣ್ಣನ್ನು ಆಮದುಗೊಳಿಸಿಕೊಳ್ಳುವುದಕ್ಕೆ ಒಪ್ಪುತ್ತಿದ್ದೇವೆ' ಎಂಬ ಅಂಶ ಸೇರಿದೆ. ಬಹುಶಃ ನನ್ನ ಅನಿಸಿಕೆ ಏನೆಂದರೆ, ಈಗಲಾದರೂ ನಾವು ಎಚ್ಚೆತ್ತುಕೊಂಡರೆ ನಮ್ಮ ಮಾವಿನಹಣ್ಣನ್ನು ಸಂಸ್ಕರಿಸಿ ಬೇರೆ ದೇಶಗಳಿಗೆ, ಅಮೆರಿಕಾಕ್ಕೆ ಕಳುಹಿಸಿಕೊಡುವ ವ್ಯವಸ್ಥೆಯಾದರೆ ರೈತರಿಗೆ ಅದರಿಂದ ಎಷ್ಟೋ ಸುದಿನ ಒದಗಿಬರುತ್ತದೆ. ರಘು ಮುಕಾಂತರ ಏನು ಸಂಪಾದನೆ ಮಾಡಬಹುದು, ಆ ರೀತಿ ಸಂಪಾದನೆ ಮಾಡುವುದಕ್ಕೆ ಸಾಕಷ್ಟು ಅವಕಾಶವಿದೆ. ನಮ್ಮ ಮಾವಿನಹಣ್ಣನ್ನು ಯಾವುದೇ ದೇಶ ಚೈನಾಕ್ಕೆ ಕಳೆದ ಬಾರಿ ಸ್ವಲ್ಪ ಪ್ರಮಾಣದಲ್ಲಿ ಕಳುಹಿಸಿಕೊಟ್ಟಿದ್ದರು. ಆದರೆ, ಈ ವರ್ಷ ಏನು ಮಾಡುತ್ತಾರೋ ಗೊತ್ತಿಲ್ಲ. ಕಳೆದೆರಡು ವರ್ಷಗಳಿಂದ ಕಳುಹಿಸಿಕೊಡುತ್ತಿದ್ದಾಗ ತತ್‌ಕ್ಷಣ ಅಲ್ಲಿ ಮಾರಾಟವಾಯಿತು. ಅದೇ ರೀತಿ ಈ ಬಾರಿ ಅಮೆರಿಕಾದಲ್ಲೂ ನಮ್ಮ ಮಾವಿನಹಣ್ಣನ್ನು ಪರಿಚಯಿಸಿಕೊಟ್ಟರೆ ಇಲ್ಲಿರುವ ರೈತರಿಗೆ ಕರ್ನಾಟಕದಲ್ಲಾಗಬಹುದು, ಒಟ್ಟಾರೆ ನಮ್ಮ ದೇಶದ ರೈತರಿಗೆ ಎಷ್ಟೋ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇಂತಹ ಕೆಲವು ಸಣ್ಣ ವಿಷಯಗಳಲ್ಲೂ ಸಹ ನಾವು ರೈತರಿಗೆ ಅನುಕೂಲ ಮಾಡಿಕೊಡುವುದಕ್ಕಾಗುತ್ತಿಲ್ಲ. ಬರೀ ಸಬ್ಸಿಡಿ ಕೊಡುತ್ತೇವೆ. ಏತಕ್ಕೋಸ್ಕರ? ಒಂದು ಅಗ್ಗದ ಪ್ರಚಾರ ಸಿಕ್ಕಲೆಂದು ಬರೀ ಸಬ್ಸಿಡಿ ಕೊಟ್ಟು ರೈತರನ್ನು ಅಲ್ಲೇ ಇಟ್ಟಿದ್ದೇವೆಯೇ ಹೊರತು, ದೂರದೃಷ್ಟಿ ಇಟ್ಟುಕೊಂಡು ರೈತರು ತಮ್ಮ ಸ್ವಂತ ಕಾಲಮೇಲೆ ನಿಲ್ಲಬೇಕಾದರೆ ಮುಂದಿನ ದಿನಗಳಲ್ಲಿ ಏನು ಅವಶ್ಯಕತೆ ಇದೆಯೆಂಬುದರ ಕಡೆಗೆ ನಾವು ಖಂಡಿತವಾಗಿಯೂ ಯೋಚಿಸಿಲ್ಲ. ರೈತರು ತಮ್ಮ ಕಾಲಮೇಲೆ ನಿಂತುಕೊಳ್ಳಬೇಕಾದರೆ ಆ ಕುರಿತಂತೆ ಸೂಕ್ತ ಮಾಹಿತಿ ಕೊಡಬೇಕು, ಸೂಕ್ತ ಮಾರುಕಟ್ಟೆ ಸೌಲಭ್ಯ ಒದಗಿಸಿಕೊಡಬೇಕು. ಆ ದಿಕ್ಕಿನಲ್ಲಿ ಸರ್ಕಾರ ಡಾ:ಎ.ಪಿ.ಜೆ. ಅಬ್ದುಲ್ ಕಲಾಂರವರ ಒಂದು ಸಂದೇಶ

ಏನಿದೆ, ತೋಟಗಾರಿಕೆ ಕ್ಷೇತ್ರದಲ್ಲಿ ನಾವು ಸಾಕಷ್ಟು ಪ್ರಗತಿ ಸಾಧಿಸುವುದಕ್ಕೆ ಕರ್ನಾಟಕದಲ್ಲಿ ಉತ್ತಮ ಉಷ್ಣಾಂಶವಿದೆ. ರಾಜ್ಯದ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯ ವೈಶಿಷ್ಟತೆ ಇದೆ. ಬಿಜಾಪುರದಲ್ಲಿ ಬೆಳೆಯುವ ದ್ರಾಕ್ಷಿಯಾಗಲಿ, ದಾಳಿಂಬೆಯಾಗಲಿ, ಕೋಲಾರದಲ್ಲಿ ಬೆಳೆಯುವ ಮಾವು ಆಗಲಿ, ಟೊಮ್ಯಾಟೋ ಆಗಲಿ ಇವುಗಳಿಗೆ ತನ್ನದೇ ಆದಂಥ ವೈಶಿಷ್ಟತೆ ಇದೆ. ಕರ್ನಾಟಕದಲ್ಲಿ ಬೆಳೆಯುವ ಟೊಮ್ಯಾಟೋದಲ್ಲಿ ನೀರಿನ ಅಂಶ ಜಾಸ್ತಿ ಇದೆ. ನೀರಿನ ಅಂಶ ಜಾಸ್ತಿ ಇರುವುದರಿಂದ ನೀವು ಅದನ್ನು ಸಂಸ್ಕರಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆನ್ನುವ ವಿಷಯವನ್ನು ಅವರು ತಿಳಿದುಕೊಂಡಿದ್ದಾರೆ. ಅವರು ಆಳಕ್ಕೆ ಹೋಗಿ ಅಧ್ಯಯನ ಮಾಡಿದ್ದಾರೆ. ಇದರ ಬಗ್ಗೆ ನಮ್ಮಲ್ಲಿ ಎಷ್ಟು ಜನರಿಗೆ ಗೊತ್ತಿದೆ? ಟೊಮ್ಯಾಟೋ ಪ್ರೊಸೆಸಿಂಗ್ ಪ್ಲಾಂಟ್ ಹಾಕಿ ಎಂದು ನಾವು ಸುಮ್ಮನೆ ಬೊಬ್ಬೆ ಹೊಡೆಯುತ್ತೇವೆ. ನಮಗೇ ಗೊತ್ತಿಲ್ಲ. ನಾವು ಬೆಳೆಯುವ ಟೊಮ್ಯಾಟೋನಲ್ಲಿ ನೀರಿನ ಅಂಶ ಜಾಸ್ತಿ ಇದೆಯೆಂಬ ಕನಿಷ್ಠ ಅಂಶವನ್ನೂ ತಿಳಿದುಕೊಂಡಿಲ್ಲ. ಘನತೆವೆತ್ತ ರಾಷ್ಟ್ರಪತಿಯವರು ಎಂತಹ ಮಹಾನ್ ವ್ಯಕ್ತಿ ಎಂದರೆ, ಅವರು ಅಷ್ಟನ್ನೂ ಓದಿ ತಿಳಿದುಕೊಂಡಿದ್ದನ್ನು ಇವೊತ್ತು ನಾವು ಅವರ ಮುಖಾಂತರ ನಾವು ತಿಳಿದುಕೊಳ್ಳಬೇಕಾಗಿದೆ! ನಮ್ಮ ಅಧಿಕಾರಿಗಳಿಗೆ ಇದರ ಬಗ್ಗೆ ಎಷ್ಟರಮಟ್ಟಿಗೆ ಗೊತ್ತಿದೆ? ಈ ತರಹ ಹೋದರೆ ಯಾವ ರೀತಿ ಮುಂದೆ ರೈತರ ಬವಣೆ ನೀಗಿಸುವುದಕ್ಕೆ ಸಾಧ್ಯವಾಗುತ್ತದೆಂದು ನನಗಂತೂ ಅರ್ಥವಾಗುವುದಿಲ್ಲ. ಹಾಗೆಯೇ, ವಾಟರ್ ಮ್ಯಾನೇಜ್‌ಮೆಂಟ್ ಬಗ್ಗೆಯೂ ಸಹ ಘನತೆವೆತ್ತ ಮಾನ್ಯ ರಾಷ್ಟ್ರಪತಿಗಳು ಸಂದೇಶ ನೀಡಿದ್ದಾರೆ. ಇವೊತ್ತು ನೀರಿನ ಬಗ್ಗೆ ಹೇಳುವುದಾದರೆ, ನಾವು ಕೆಲವೊಂದು ವಿಷಯಗಳಲ್ಲಿ ಸಾಕಷ್ಟು ಮುಂದುವರೆದಿದ್ದೇವೆ. ಹಿಂದೆ ಸುಮಾರು 10-12 ವರ್ಷಗಳಲ್ಲಿ ಇರತಕ್ಕಂಥ ಅಲ್ಪಸ್ವಲ್ಪ ನೀರನ್ನು ಯಾವ ರೀತಿ ಸದುಪಯೋಗಪಡಿಸಿಕೊಳ್ಳಬೇಕೆಂಬ ಬಗ್ಗೆ ನಮ್ಮ ರಾಜ್ಯದಲ್ಲಿ ಸಾಕಷ್ಟು ಚಿಂತನೆ ನಡೆದು ಇಸ್ರೇಲ್‌ನಲ್ಲಿರುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರ ಲ್ಲಾಗಲಿ, ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವುದರಲ್ಲಾಗಲಿ ನಾವು ಸಾಕಷ್ಟು ಮುಂದುವರೆದಿದ್ದೇವೆ. ಇವೊತ್ತು ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಆ ಸಮಸ್ಯೆಯನ್ನು ನಿವಾರಿಸಿಕೊಂಡು ಹೋಗುತ್ತಿದ್ದೇವೆ. ನಾನು ಬರೀ ಕೋಲಾರದ ಬಗ್ಗೆ ಮಾತ್ರ ಮಾತನಾಡಲು ಇಚ್ಛಿಸುವುದಿಲ್ಲ. ಆದರೆ, ಕೋಲಾರ, ನೀರಿನ ವಿಚಾರದಲ್ಲಂತೂ ಎಷ್ಟು ಬವಣೆ ಅನುಭವಿಸುತ್ತಿದೆ ಎಂಬುದು ನಮಗೆ ಗೊತ್ತಿದೆ. ಅಂತಹ ಪರಿಸ್ಥಿತಿಯಲ್ಲಿ ಇರುವ ನೀರನ್ನು ನಾವು ಸದುಪಯೋಗಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ಎಷ್ಟು ದಿನ ಹೀಗೆಯೇ ಮುಂದು

ವರೆಯುವುದಕ್ಕೆ ಆಗುತ್ತದೆ? ಈಗಾಗಲೇ ನಾವು ಸುಮಾರು 900 ರಿಂದ 1200 ಅಡಿಗಳಷ್ಟು ಆಳದಿಂದ ನೀರನ್ನು ತೆಗೆಯುತ್ತಿದ್ದೇವೆ. ಇನ್ನು ಎಷ್ಟು ದಿನ ಅಷ್ಟು ಆಳದಿಂದ ನೀರನ್ನು ತೆಗೆಯುವುದಕ್ಕಾಗುತ್ತದೆ? ಇನ್ನು 5–10 ವರ್ಷ ಕಳೆದರೆ ಕೋಲಾರ, ತುಮಕೂರು ಮತ್ತು ಬೆಂಗಳೂರು(ಗ್ರಾಮಾಂತರ) ಜಿಲ್ಲೆಗಳ ಪರಿಸ್ಥಿತಿ ಏನು ಆಗುತ್ತದೆನ್ನುವುದನ್ನು ನಾವು ಯೋಚಿಸಿದ್ದೇವೆಯೇ? ಮುಂದಿನ 5–10 ವರ್ಷಗಳಲ್ಲಿ ಈ ಜಿಲ್ಲೆಗಳಲ್ಲಿರುವ ಜನರು ಆ ಜಿಲ್ಲೆಗಳಲ್ಲಿ ಇರಬೇಕೇ? ಬೇಡವೇ ಎನ್ನುವ ಬೇಸಿಕ್ ಪ್ರಶ್ನೆ ಬಗ್ಗೆ ನಾವು ಯೋಚಿಸಿದ್ದೇವೆಯೇ? ಇದೇ ರೀತಿ ಮುಂದುವರೆದರೆ ಇನ್ನು ಐದು ವರ್ಷಗಳಲ್ಲಿ ಆ ಜಿಲ್ಲೆಗಳಲ್ಲಿರುವ ಜನರು ಏನಾಗಬೇಕು? ಮುಂದಿನ 10–15 ವರ್ಷಗಳಲ್ಲಿ ಇದಕ್ಕೆ ನಮ್ಮಲ್ಲಿ ಉತ್ತರ ಇದೆಯೇ ಎಂದು ತಮ್ಮ ಮುಖಾಂತರ ನಾನು ಕೇಳಬಯಸುತ್ತೇನೆ. ನಮಗಂತೂ ಗೊತ್ತಿಲ್ಲ. ಇನ್ನು ಹತ್ತು ವರ್ಷಗಳ ಕಾಲ ಹೀಗೇ ಹೋದರೆ ಈ ಜಿಲ್ಲೆಗಳಲ್ಲಿರುವ ಜನರಿಗೆ ಕುಡಿಯುವ ನೀರನ್ನು ಹೇಗೆ ಕೊಡುತ್ತೀರಿ ಅಥವಾ ವ್ಯವಸಾಯ ಮಾಡಲು ರೈತರಿಗೆ ನೀರನ್ನು ಯಾವ ರೀತಿ ಒದಗಿಸಿಕೊಡುತ್ತೀರಿ ಎನ್ನುವ ಕನಿಷ್ಠ ಯೋಚನೆಯನ್ನು ನಾವು ಇದುವರೆಗೂ ಮಾಡಿದ್ದೇವೆಯೇ? ಇಲ್ಲ. ನನಗಂತೂ ಗೊತ್ತಿಲ್ಲ. ಅದನ್ನು ಮಾಡದೇ ಹೋದ ಸಂದರ್ಭದಲ್ಲಿ ಕನಿಷ್ಠ ಇವೊತ್ತು ತುಮಕೂರು, ಕೋಲಾರ, ಬೆಂಗಳೂರು(ಗ್ರಾಮಾಂತರ) ಹಾಗೂ ಮಂಡ್ಯ ಜಿಲ್ಲೆಯ ಕೆಲವು ಭಾಗ ನಾಗಮಂಗಲ ಇರಬಹುದು. ಈ ಭಾಗಗಳಲ್ಲಿ ಸಾಕಷ್ಟು ಕೆರೆಗಳಿವೆ. ಹಿಂದೆ ಕೆರೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಒಂದು ಯೋಜನೆ ಬಂತು. ಅದರಲ್ಲಿ ಸ್ವಲ್ಪಮಟ್ಟಿಗೆ ಒಳ್ಳೆಯ ಕೆಲಸ ನಮ್ಮ ಭಾಗಗಳಲ್ಲಿ ಆಗುತ್ತಿದೆ, ಇಲ್ಲವೆಂದು ಹೇಳುವುದಿಲ್ಲ. ಆದರೆ, ಕಳೆದ ಐದು ವರ್ಷಗಳಿಂದ ನಮ್ಮ ಭಾಗದ ಕೆರೆಗಳು ತುಂಬಿರಲಿಲ್ಲ. ಈ ಬಾರಿ ಮಳೆ ಬಂದು ಸುಮಾರು ಅರ್ಧ ಕೆರೆಗಳು ತುಂಬಿವೆ. ಇನ್ನು ಐದು ವರ್ಷ ಇದೇ ರೀತಿ ನಾವು ಕಾಯಬೇಕಾಗಿ ಬಂದರೆ, ನಮ್ಮ ಪರಿಸ್ಥಿತಿ ಏನಾಗುತ್ತದೆ? ಅದೇ ಸಂದರ್ಭದಲ್ಲಿ ಕೆಲವು ಭಾಗಗಳಲ್ಲಿ ನಮ್ಮ ರಾಜ್ಯದಲ್ಲಿ ಮಳೆ ಯಥೇಚ್ಛವಾಗಿ ಬಿದ್ದು ತತ್‌ಕ್ಷಣ ಸಮುದ್ರಕ್ಕೆ ಹರಿದು ಹೋಗುತ್ತಿದೆ. ಅದನ್ನು ಯಾವ ರೀತಿ ಸದುಪಯೋಗಪಡಿಸಿಕೊಳ್ಳಬಹುದು ಎನ್ನುವುದರ ಬಗ್ಗೆ ಯೋಚನೆ ಮಾಡಿದ್ದೇವೆಯೇ? ಇದು ಇವೊತ್ತಿಗೆ ಆಗುವಂತಿಲ್ಲ. ತತ್‌ಕ್ಷಣಕ್ಕೆ ನೀರನ್ನು ಸದುಪಯೋಗಪಡಿಸಿ ಕೊಳ್ಳುವುದ ಕ್ಕಾಗುವುದಿಲ್ಲ. ಎಲ್ಲಿ ಯಥೇಚ್ಛವಾಗಿ ಮಳೆ ಬಿದ್ದು ನೀರು ಸಮುದ್ರಕ್ಕೆ ಹರಿದುಹೋಗುತ್ತಿದೆಯೋ ಆ ಭಾಗಗಳಲ್ಲಿ ಬೇಸಿಗೆಯಲ್ಲಿ ಕುಡಿಯುವುದಕ್ಕೆ ನೀರು ಇರುವುದಿಲ್ಲ ಆ ಭಾಗಗಳಲ್ಲಿ ಬೇಸಿಗೆಯಲ್ಲಿ ಕುಡಿಯುವುದಕ್ಕೆ ನೀರನ್ನು

ಕೊಡಬೇಕೇ ಬೇಡವೇ? ಉಳಿದಂತಹ ನೀರನ್ನು ಬೇರೆ ಜಿಲ್ಲೆಗಳಿಗೆ ಬಳಸಿ ಕೊಳ್ಳುವುದಕ್ಕೆ ಏನಾದರೊಂದು ಯೋಜನೆ ಹಾಕಿಕೊಳ್ಳದೆ ಹೋದರೆ, ಮುಂದೆ ಏನಾಗುತ್ತದೆ? ಈ ಜಿಲ್ಲೆಗಳಲ್ಲಿರುವ ಜನರು ಏನಾಗುತ್ತಾರೆ? ಅದನ್ನಾದರೂ ನಾವು ಯೋಚನೆ ಮಾಡಬೇಕೆ? ಬೇಡವೇ? ಇದು ಯಾವ ಸರ್ಕಾರದ ಬಗ್ಗೆಯಲ್ಲ. ಸರ್ಕಾರ ನಮ್ಮದೂ ಬರುತ್ತದೆ, ಹೋಗುತ್ತದೆ. ಇವೊತ್ತು ಒಂದು ಸರ್ಕಾರ, ಇದ್ದರೆ ನಾಳೆ ಇನ್ನೊಂದು ಸರ್ಕಾರ ಇರುತ್ತದೆ. ಆದರೆ, ಈ ಸದನದ ಜವಾಬ್ದಾರಿಯುತ ಸದಸ್ಯರಾಗಿ ನಾವೆಲ್ಲರೂ ಚಿಂತನೆ ಮಾಡಬೇಕಾಗಿರುವ ಅಂಶವೆನ್ನತಕ್ಕಂಥಾದ್ದು ನನ್ನ ಅಭಿಪ್ರಾಯವಾಗಿದೆ. ಪಶ್ಚಿಮಘಟ್ಟಗಳಲ್ಲಿ ಸಾಕಷ್ಟು ಮಳೆ ಬಿದ್ದು ತತ್‌ಕ್ಷಣ ಸಮುದ್ರಕ್ಕೆ ಹರಿದುಹೋಗುತ್ತಿದೆ, ಆ ನೀರನ್ನಾದರೂ ಸಹ ನಾವು ಈ ಕೆರೆಗಳಿಗೆ ಬಿಡುವುದಕ್ಕೆ ಇರಿಗೇಶನ್‌ಗೆಂದು ಅಲ್ಲ ಕುಡಿಯುವ ನೀರಿಗಾಗಿ ಕೊಡುವುದಕ್ಕೆ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ? ಈ ಕೆರೆಗಳಿಗೆ ಬಿಟ್ಟಾಗ ಏನಾಗುತ್ತದೆಂದರೆ, ಗ್ರೌಂಡ್ ವಾಟರ್ ರೀಚಾರ್ಜ್ ಆಗುತ್ತದೆ. ದಿವಂಗತ ಅಬ್ದುಲ್ ನಜೀರ್‌ಸಾಬ್‌ರವರ ಕಾಲದಿಂದ ಬೋರ್‌ವೆಲ್‌ಗಳನ್ನು ಕೊರೆದು ಕುಡಿಯುವ ನೀರನ್ನು ಪಡೆದುಕೊಳ್ಳುತ್ತಿದ್ದೇವೆ. ಕುಡಿಯುವ ನೀರನ್ನಾದರೂ ಪಡೆದುಕೊಳ್ಳುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ಈ ರೀತಿಯಾಗಿ ನಾವು ನೀರನ್ನು ಮ್ಯಾನೇಜ್ ಮಾಡುವುದು, ಕೇವಲ ಇರುವ ನೀರನ್ನು ಸದುಪಯೋಗ ಪಡಿಸಿಕೊಳ್ಳುವುದು ಮಾತ್ರವಲ್ಲ, ಅದರ ಜೊತೆಗೆ ಮುಂದಿನ ದಿನಗಳಲ್ಲಿ ಬರತಕ್ಕಂಥ ಸಮಸ್ಯೆಗಳನ್ನು ಯಾವ ರೀತಿಯಾಗಿ ಎದುರಿಸುತ್ತೇವೆ, ಯಾವ ರೀತಿ ಅದನ್ನು ಬಗೆಹರಿಸುತ್ತೇವೆ ಎನ್ನುವುದರ ಬಗ್ಗೆಯೂ ಸಹ ಯೋಚನೆ ಮಾಡಬೇಕೆಂಬುದು ನನ್ನ ಅಭಿಪ್ರಾಯವೆಂದು ಹೇಳುತ್ತೇನೆ.

ಘನತೆವೆತ್ತ ರಾಷ್ಟ್ರಪತಿಗಳು PURA ಎಂಬ ಯೋಜನೆ ಬಗ್ಗೆ ಅವರು ರಾಷ್ಟ್ರಪತಿಗಳಾದ ತತ್‌ಕ್ಷಣ ಘೋಷಣೆ ಹೊರಡಿಸಿದರು. PURA ಎಂದರೆ,

Providing Urban Amenities in Rural Areas surrounding major cities
ಅವರ ಭಾರಿ ಉದ್ದೇಶವೇನು? ನಗರ ಪ್ರದೇಶಗಳಲ್ಲಿ ಏನು ಮೂಲಭೂತ ಸೌಲಭ್ಯಗಳು ಸಿಗುತ್ತಿದೆ, ನಗರ ಪ್ರದೇಶಗಳ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಗೂ ಆ ಸೌಲಭ್ಯಗಳು ಸಿಗಬೇಕೆಂಬುದು ಅವರ ಉದ್ದೇಶ. ಇವೊತ್ತು ಬೆಂಗಳೂರು ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಬೆಂಗಳೂರು ಅಭಿವೃದ್ಧಿಗೆ ನಾವ್ಯಾರೂ ಮಾರಕವಾಗಿಲ್ಲ. ಬೆಂಗಳೂರು ಅಭಿವೃದ್ಧಿಯಾಗಬೇಕು. ಬೆಂಗಳೂರು ಕನ್ನಡಿಗರಿಗೆ ಸೇರಿದ್ದು, ಬೆಂಗಳೂರು ಅಭಿವೃದ್ಧಿಯಾದರೆ ನಾವು ಹೆಮ್ಮೆ

ಪಡಬೇಕಾದ ವಿಷಯ. ಆದರೆ, ಅಭಿವೃದ್ಧಿ ಬೆಂಗಳೂರಿಗೆ ಮಾತ್ರ ಸೀಮಿತವಾಗ ಬಾರದು. ಇವೊತ್ತು ಬೆಂಗಳೂರಿನಲ್ಲಿ ಅನೇಕ ಸಮಸ್ಯೆಗಳು ಉದ್ಭವವಾಗಿವೆ. ತುಮಕೂರಿನಲ್ಲಿ ಒಂದೂವರೆ ಸಾವಿರದಿಂದ ಎರಡು ಸಾವಿರ ಮನೆಗಳು ಖಾಲಿ ಬಿದ್ದಿವೆ ಎಂದು ಈಗ ತಾನೇ ಸದಸ್ಯರಾದ ಮಾಧುಸ್ವಾಮಿಯವರು ಹೇಳುತ್ತಿದ್ದರು. ಒಂದು, ಒಂದೂವರೆ ಸಾವಿರ ರೂಪಾಯಿಗಳಿಗೆ ತುಮಕೂರಿನಲ್ಲಿ ಒಳ್ಳೆಯ ಮನೆ ಬಾಡಿಗೆಗೆ ಸಿಗುತ್ತದೆ ಎಂದು ಎಲ್ಲರೂ ಬಂದು ಬೆಂಗಳೂರಿನಲ್ಲೇ ಸೇರಿಕೊಂಡರೆ ಇನ್ನೇನಾಗುತ್ತದೆ? ಬೆಂಗಳೂರಿನಲ್ಲಿ ಇರುವ ಸಮಸ್ಯೆಯನ್ನೇ ಬಗೆಹರಿಸುವುದ ಕ್ಕಾಗುತ್ತಿಲ್ಲ. ನಮ್ಮ ಹಳ್ಳಿ ಕಡೆ ಏನು ಹೇಳುತ್ತಾರೆಂದರೆ, ಬೆಂಗಳೂರು ಅಭಿವೃದ್ಧಿಯಾದರೆ ನಮಗೇನು ಅನುಕೂಲ? ತಮಿಳುನಾಡಿನವರೆಗೆ, ಆಂಧ್ರಪ್ರದೇಶದವರಿಗೆ ಅನುಕೂಲವಾಗುತ್ತದೆಯೇ ಹೊರತು ಕನ್ನಡಿಗರಿಗೆ ಏನೂ ಅನುಕೂಲವಾಗುವುದಿಲ್ಲವೆಂದು ಹಳ್ಳಿಯ ಜನರು ಮಾತನಾಡುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ದೇಶದಲ್ಲಿರುವವರೆಲ್ಲರೂ ಬಂದು ಬೆಂಗಳೂರಿಗೆ ವರ್ಷೇ ವರ್ಷೇ ಸೇರಿಕೊಳ್ಳುತ್ತಾ ಹೋದರೆ, ಯಾವ ರೀತಿ ಬೆಂಗಳೂರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುತ್ತದೆ? ಹಾಗಾಗಿ, ಬೆಂಗಳೂರಿನ ರೀತಿಯಲ್ಲಿ ಬೇರೆ ನಗರಗಳೇನಿವೆ, ಅವುಗಳನ್ನೂ ಸಾಕಷ್ಟು ಅಭಿವೃದ್ಧಿಪಡಿಸಬೇಕು. ಮುಖಾಂತರ ನಾನು ಕೇಳಬಯಸುತ್ತೇನೆ. ನಮಗಂತೂ ಗೊತ್ತಿಲ್ಲ. ಇನ್ನು ಹತ್ತು ವರ್ಷಗಳ ಕಾಲ ಹೀಗೇ ಹೋದರೆ ಈ ಜಿಲ್ಲೆಗಳಲ್ಲಿರುವ ಜನರಿಗೆ ಕುಡಿಯುವ ನೀರನ್ನು ಹೇಗೆ ಕೊಡುತ್ತೀರಿ ಅಥವಾ ವ್ಯವಸಾಯ ಮಾಡಲು ರೈತರಿಗೆ ನೀರನ್ನು ಯಾವ ರೀತಿ ಒದಗಿಸಿಕೊಡುತ್ತೀರಿ ಎನ್ನುವ ಕನಿಷ್ಠ ಯೋಚನೆಯನ್ನು ನಾವು ಇದುವರೆಗೂ ಮಾಡಿದ್ದೇವೆಯೇ? ಇಲ್ಲ. ನನಗಂತೂ ಗೊತ್ತಿಲ್ಲ. ಅದನ್ನು ಮಾಡದೇ ಹೋದ ಸಂದರ್ಭದಲ್ಲಿ ಕನಿಷ್ಠ ಇವೊತ್ತು ತುಮಕೂರು, ಕೋಲಾರ, ಬೆಂಗಳೂರು(ಗ್ರಾಮಾಂತರ) ಹಾಗೂ ಮಂಡ್ಯ ಜಿಲ್ಲೆಯ ಕೆಲವು ಭಾಗ ನಾಗಮಂಗಲ ಇರಬಹುದು. ಈ ಭಾಗಗಳಲ್ಲಿ ಸಾಕಷ್ಟು ಕೆರೆಗಳಿವೆ. ಹಿಂದೆ ಕೆರೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಒಂದು ಯೋಜನೆ ಬಂತು. ಅದರಲ್ಲಿ ಸ್ವಲ್ಪಮಟ್ಟಿಗೆ ಒಳ್ಳೆಯ ಕೆಲಸ ನಮ್ಮ ಭಾಗಗಳಲ್ಲಿ ಆಗುತ್ತಿದೆ. ಇಲ್ಲವೆಂದು ಹೇಳುವುದಿಲ್ಲ. ಆದರೆ, ಕಳೆದ ಐದು ವರ್ಷಗಳಿಂದ ನಮ್ಮ ಭಾಗದ ಕೆರೆಗಳು ತುಂಬಿರಲಿಲ್ಲ. ಈ ಬಾರಿ ಮಳೆ ಬಂದು ಸುಮಾರು ಅರ್ಧ ಕೆರೆಗಳು ತುಂಬಿವೆ. ಇನ್ನು ಐದು ವರ್ಷ ಇದೇ ರೀತಿ ನಾವು ಕಾಯಬೇಕಾಗಿ ಬಂದೆ, ನಮ್ಮ ಪರಿಸ್ಥಿತಿ ಏನಾಗುತ್ತದೆ? ಅದೇ ಸಂದರ್ಭದಲ್ಲಿ ಕೆಲವು ಭಾಗಗಳಲ್ಲಿ ನಮ್ಮ ರಾಜ್ಯದಲ್ಲಿ ಮಳೆ ಯಥೇಚ್ಛವಾಗಿ ಬಿದ್ದು ತತ್‌ಕ್ಷಣ ಸಮುದ್ರಕ್ಕೆ ಹರಿದು ಹೋಗುತ್ತಿದೆ. ಅದನ್ನು

ಯಾವ ರೀತಿ ಸದುಪಯೋಗಪಡಿಸಿಕೊಳ್ಳಬಹುದು ಎನ್ನುವುದರ ಬಗ್ಗೆ ಯೋಚನೆ ಮಾಡಿದ್ದೇವೆಯೇ? ಇದು ಇವೊತ್ತಿಗೆ ಆಗುವಂತಿಲ್ಲ. ತತ್‌ಕ್ಷಣಕ್ಕೆ ನೀರನ್ನು ಸದುಪಯೋಗಪಡಿಸಿಕೊಳ್ಳುವುದಕ್ಕಾಗುವುದಿಲ್ಲ. ಎಲ್ಲಿ ಯಥೇಚ್ಛವಾಗಿ ಮಳೆಬಿದ್ದು ನೀರು ಸಮುದ್ರಕ್ಕೆ ಹರಿದುಹೋಗುತ್ತಿದೆಯೋ ಆ ಭಾಗಗಳಲ್ಲಿ ಬೇಸಿಗೆಯಲ್ಲಿ ಕುಡಿಯುವುದಕ್ಕೆ ನೀರು ಇರುವುದಿಲ್ಲ ಆ ಭಾಗಗಳಲ್ಲಿ ಬೇಸಿಗೆಯಲ್ಲಿ ಕುಡಿಯುವುದಕ್ಕೆ ನೀರನ್ನು ಕೊಡಬೇಕೇ ಬೇಡವೇ? ಉಳಿದಂತಹ ನೀರನ್ನು ಬೇರೆ ಜಿಲ್ಲೆಗಳಿಗೆ ಬಳಿಸಿಕೊಳ್ಳುವುದಕ್ಕೆ ಏನಾದರೊಂದು ಯೋಜನೆ ಹಾಕಿಕೊಳ್ಳದೆ ಹೋದರೆ, ಮುಂದೆ ಏನಾಗುತ್ತದೆ? ಈ ಜಿಲ್ಲೆಗಳಲ್ಲಿರುವ ಜನರು ಏನಾಗುತ್ತಾರೆ? ಅದನ್ನಾದರೂ ನಾವು ಯೋಚನೆ ಮಾಡಬೇಕೆ? ಬೇಡವೇ? ಇದು ಯಾವ ಸರ್ಕಾರದ ಬಗ್ಗೆಯಲ್ಲ. ಸರ್ಕಾರ ನಮ್ಮದೂ ಬರುತ್ತದೆ, ಹೋಗುತ್ತದೆ. ಇವೊತ್ತು ಒಂದು ಸರ್ಕಾರ, ಇದ್ದರೆ ನಾಳೆ ಇನ್ನೊಂದು ಸರ್ಕಾರ ಇರುತ್ತದೆ. ಆದರೆ, ಈ ಸದನದ ಜವಾಬ್ದಾರಿಯುತ ಸದಸ್ಯರಾಗಿ ನಾವೆಲ್ಲರೂ ಚಿಂತನೆ ಮಾಡಬೇಕಾಗಿರುವ ಅಂಶವೆನ್ನತಕ್ಕಂಥಾದ್ದು ನನ್ನ ಅಭಿಪ್ರಾಯವಾಗಿದೆ. ಪಶ್ಚಿಮಘಟ್ಟಗಳಲ್ಲಿ ಸಾಕಷ್ಟು ಮಳೆ ಬಿದ್ದು ತತ್‌ಕ್ಷಣ ಸಮುದ್ರಕ್ಕೆ ಹರಿದುಹೋಗುತ್ತಿದೆ. ಅದನ್ನು ಇವೊತ್ತಲ್ಲ ಇನ್ನು ಐದು ವರ್ಷಗಳದಲ್ಲಾರೂ ನೀರು ಸಮುದ್ರಕ್ಕೆ ಏನು ಹರಿದುಹೋಗುತ್ತಿದೆ. ಆ ನೀರನ್ನಾದರು ಸಹ ನಾವು ಈ ಕೆರೆಗಳಿಗೆ ಬಿಡುವುದಕ್ಕೆ ಇರಿಗೇಶನ್‌ಗೆಂದು ಅಲ್ಲ ಕುಡಿಯುವ ನೀರಿಗಾಗಿ ಕೊಡುವುದಕ್ಕೆ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ? ಈ ಕೆರೆಗಳಿಗೆ ಬಿಟ್ಟಾಗ ಏನಾಗುತ್ತದೆಂದರೆ, ಗ್ರೌಂಡ್ ವಾಟರ್ ರೀಚಾರ್ಜ್ ಆಗುತ್ತದೆ. ದಿವಂಗತ ಅಬ್ದುಲ್ ನಜೀರ್‌ಸಾಬ್‌ರವರ ಕಾಲದಿಂದ ಬೋರ್‌ವೆಲ್‌ಗಳನ್ನು ಕೊರೆದು ಕುಡಿಯುವ ನೀರನ್ನು ಪಡೆದುಕೊಳ್ಳುತ್ತಿದ್ದೇವೆ. ಕುಡಿಯುವ ನೀರನ್ನಾದರೂ ಪಡೆದುಕೊಳ್ಳುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ಈ ರೀತಿಯಾಗಿ ನಾವು ನೀರನ್ನು ಮ್ಯಾನೇಜ್ ಮಾಡುವುದು, ಕೇವಲ ಇರುವ ನೀರನ್ನು ಅಭಿವೃದ್ಧಿ ಪಡಿಸಬೇಕಾದರೆ, ಮಾನ್ಯ ರಾಷ್ಟ್ರಪತಿಗಳು "ಪುರ" ಯೋಜನೆ ಎಂದು ಅವರು ರಾಷ್ಟ್ರಪತಿಗಳಾದ ತತ್‌ಕ್ಷಣ "ಪುರ" ಯೋಜನೆಯನ್ನು ಅನುಷ್ಠಾನ ಮಾಡಬೇಕೆಂದು ಕೇಂದ್ರ ಸರ್ಕಾರದ ಮುಖಾಂತರ ಹೊರಡಿಸಿದರು. ಪುರ ಯೋಜನೆಗೆ ನಮ್ಮ ಜಿಲ್ಲೆಯಲ್ಲೂ ಒಂದೋ, ಎರಡೋ ನಗರ ಸೇರಿದೆ. ಆದರೆ, ಇವತ್ತಿನವರೆಗೂ ಕಾರ್ಯಗತವಾಗಿಲ್ಲ. ಇಷ್ಟು ಒಂದು ದೂರದೃಷ್ಟಿ ಇಟ್ಟುಕೊಂಡು ಒಂದು ಕಾರ್ಯಕ್ರಮವನ್ನು ಅವರು ಮಾಡಿದ್ದಾರೆ. ಅದಕ್ಕೆ ಕನಿಷ್ಠ ಸೌಜನ್ಯ ತೋರಿಸಬೇಕಾದರೆ ನಮ್ಮ ರಾಜ್ಯದಲ್ಲಿ ಅಥವಾ ಜಿಲ್ಲೆಯಲ್ಲಿ ಒಂದೆರಡು

ಕಡೆಯಾದರೂ ನಾವು ಆ ಯೋಜನೆಯನ್ನು ಅನುಷ್ಠಾನ ಮಾಡದೇ ಹೋದರೆ ಅಲ್ಲಿಗೆ ಯಾವ ರೀತಿ ನಾವು ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ? ಹಾಗಾಗಿ, ಎಲ್ಲಿ ನಿಂತು ಹೋಗಿದೆ ಎಂಬುದು ನಮಗೆ ಗೊತ್ತಿಲ್ಲ. ಸರ್ಕಾರದ ಮಟ್ಟದಲ್ಲಿ ನಿಂತು ಹೋಗಿದೆಯೋ? ಅಧಿಕಾರಿಗಳು ಇದನ್ನು ತಡೆಹಿಡಿದಿದ್ದಾರೋ? ಇದಕ್ಕೆ ಯಾರು ಜವಾಬ್ದಾರಿ? ಹೀಗಾಗುತ್ತಿರುವುದ ರಿಂದ, ಬೆಂಗಳೂರಿಗೂ ನಮ್ಮ ಹಳ್ಳಿ ಪ್ರದೇಶಗಳಿಗೆ ಮತ್ತೆ ಏನು ಸ್ಥಳೀಯ ನಮ್ಮ ಪಟ್ಟಣಗಳಿವೆ. ಅವುಗಳಿಗೂ ಇರುವ ವ್ಯತ್ಯಾಸವೇನೆಂದರೆ, ಬೆಂಗಳೂರಿನಲ್ಲಿ ರೀಸೋರ್ಸ್ ಮೊಬೆಲೈಸೇಷನ್ ಚೆನ್ನಾಗಿ ಆಗುತ್ತದೆ. ಆದರೆ, ನಮ್ಮ ಹಳ್ಳಿಗಳಲ್ಲಿ ಮುಖ್ಯವಾಗಿ ರೀಸೋರ್ಸ್ ಮೊಬಿಲೈಸೇಷನ್ ಆಗುತ್ತಿಲ್ಲ. ಕಲಾಂರವರು ಬೇರೆ ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿಯೂ ಸಹ ಅಭಿವೃದ್ಧಿ, ಮೂಲಭೂತ ಸೌಲಭ್ಯಗಳು ಚೆನ್ನಾಗಿ ಬರಬೇಕೆಂದು ಏನು ಕನಸು ಕಂಡಿದ್ದಾರೆ, ಬರಬೇಕಾದರೆ ಸ್ಥಳೀಯ ಸಂಪನ್ಮೂಲಗಳ ಕ್ರೋಢೀಕರಣ ಏನಿದೆ ಕನಿಷ್ಠ ನೀರಿಗೆ ಒಂದು ತಿಂಗಳಿಗೆ 10 ರೂಪಾಯಿ ಟ್ಯಾಕ್ಸ್ ಹಾಕಿದರೆ ಇವತ್ತು ಅದನ್ನು ವಸೂಲು ಮಾಡುವುದಕ್ಕೆ ನಮಗೆ ಆಗುತ್ತಿಲ್ಲ. ಹಳ್ಳಿಗಳಲ್ಲಿ ಕಂದಾಯ ವಸೂಲಿ ಮಾಡುವುದಕ್ಕಾಗುತ್ತಿಲ್ಲ. ಎಗೆನೆಸ್ಟ್ ದಿ ಟಾರ್ಗೆಟ್, ನಾವು ಶೇಕಡ 20 ರಷ್ಟು ಮಾತ್ರ ವಸೂಲಿ ಮಾಡುತ್ತಿದ್ದೇವೆ. ಈ ರೀತಿಯಾದರೆ ಸ್ಥಳೀಯ ಸಂಪನ್ಮೂಲವನ್ನೇ ಕ್ರೋಢೀಕರಿಸಿ ಪೂರ್ತಿ ಅಭಿವೃದ್ಧಿ ಮಾಡುತ್ತೇವೆಂದು ನಾನು ಹೇಳುವುದಿಲ್ಲ. ಆದರೆ, ಕನಿಷ್ಠ ಅದರಿಂದೇನು ಭಾಗ ಬರುತ್ತದೆ ಅದು ಬಂದಾಗ ಅದಕ್ಕೆ ಇನ್ನೂ ಸರ್ಕಾರ ಹೆಚ್ಚಿಗೆ ಅನುದಾನವನ್ನು ಕೊಟ್ಟು ಅಭಿವೃದ್ಧಿ ಮಾಡಲಿಕ್ಕಾಗುತ್ತದೆ. ಹಾಗಾಗಿ, ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸತಕ್ಕಂಥ ವಿಷಯದಲ್ಲಿ ಏನು ನಾವೆಲ್ಲರೂ ವಿಫಲರಾಗಿದ್ದೇವೆ, ಅದರ ಬಗ್ಗೆಯೂ ಸಹ ನಾವು ಹೆಚ್ಚಿಗೆ ಗಮನಹರಿಸಬೇಕು. ಬೆಂಗಳೂರು, ಬೇರೆ ಪಟ್ಟಣ ಎಂದು ಬಂದಾಗ, ಬೆಳಿಗ್ಗೆ ಸಾಕಷ್ಟು ಉದ್ವೇಗದಿಂದ ಚರ್ಚೆಯಾಯಿತು. ಅವರು ಹೇಳುತ್ತಾರೆ, ನಾವು ಪ್ರತಿಯೊಂದಕ್ಕೂ ಇಲ್ಲಿ ದುಡ್ಡು ಕಟ್ಟುತ್ತೇವೆ. ಕರೆಂಟ್‌ಗೆ, ನೀರಿಗೆ ದುಡ್ಡು ಕಟ್ಟುತ್ತೇವೆ, ಪ್ರತಿಯೊಂದಕ್ಕೂ ನಾವು ಟ್ಯಾಕ್ಸ್ ಕಟ್ಟುತ್ತೇವೆ, ನಿಮ್ಮ ಊರುಗಳಲ್ಲಿ ಎಷ್ಟು ಕಟ್ಟುತ್ತೀರಿ ಎಂದು ನಮ್ಮ ಸ್ನೇಹಿತರು ಕೇಳಿದರು. ಒಂದು ರೀತಿಯಲ್ಲಿ ನಿಜವೇ ಅದು. ಎಷ್ಟರಮಟ್ಟಿಗೆ ನಮ್ಮಲ್ಲಿ ಸ್ಥಳೀಯ ಸಂಪನ್ಮೂಲ ಕ್ರೋಢೀಕರಣ ವಾಗುತ್ತಿದೆ? ಅದನ್ನು ಸರಿಪಡಿಸಿದರೆ ಸ್ವಲ್ಪಮಟ್ಟಿಗೆ ಬೇರೆ ಪಟ್ಟಣಗಳು ಅಭಿವೃದ್ಧಿಯಾಗಲಿಕ್ಕೆ ಒಂದು ಪ್ರಥಮ ಹೆಜ್ಜೆಯಷ್ಟೆ ಅದು. ಆದರೆ, ಬೇರೆ ಪಟ್ಟಣಗಳನ್ನು ನಗರಗಳನ್ನು ಅಭಿವೃದ್ಧಿ ಪಡಿಸದೇ ಹೋದರೆ ಬೆಂಗಳೂರಿನ

ಸಮಸ್ಯೆಯೂ ಬಗೆಹರಿಯುವುದಿಲ್ಲ, ಈ ಕರ್ನಾಟಕ ರಾಜ್ಯವೂ ಮುಂದು ವರಿಯುವುದಿಲ್ಲ. ಎಲ್ಲರೂ ದೇಶದಲ್ಲಿರುವವರೆಲ್ಲಾ ಬೆಂಗಳೂರಿಗೇ ಬರಬೇಕೆಂದರೆ ಹೇಗಾಗುತ್ತದೆ? ಅಲ್ಲಿಗೆ ಆ ಪಟ್ಟಣಗಳನ್ನು ನಾವು ಖಾಲಿ ಮಾಡಿದರೆ ಅಭಿವೃದ್ಧಿ ಹೇಗೆ ಮಾಡಿದ ಹಾಗಾಗುತ್ತದೆ? ಹಾಗಾಗಿ, ಈ ಡೆವಲಪ್‌ಮೆಂಟ್ ಫೆಸಿಲಿಟೇಟರ್ಸ್ ಎಂದು ರಾಷ್ಟ್ರಪತಿಗಳು ಕೊನೆ ಅಂಶದಲ್ಲಿ ಮಾತನಾಡಿದ್ದಾರೆ. ಅದರ ಬಗ್ಗೆಯೂ ಸಹ ನಾವು ಸಾಕಷ್ಟು ಹೆಚ್ಚಿಗೆ ಗಮನವನ್ನು ಕೊಡಬೇಕಾದಂಥ ಅವಶ್ಯಕತೆ ಇದೆ. ಹಾಗೆಯೇ, ಟೆಕ್ಸ್‌ಟೈಲ್ಸ್ ಬಗ್ಗೆ ರಾಷ್ಟ್ರಪತಿಗಳು ಪ್ರಥಮ ಅಂಶವಾಗಿ ಇದರ ಬಗ್ಗೆಯೇ ಮಾತನಾಡಿದ್ದಾರೆ. ಇವತ್ತೇನು ಅಂತರ್‌ರಾಷ್ಟ್ರೀಯ ಒಪ್ಪಂದಗಳೆಲ್ಲಾ ಸಡಿಲವಾದ ನಂತರ ಇವತ್ತು ಒಂದು ಮುಕ್ತ ಮಾರುಕಟ್ಟೆ ಇದೆ. ಏನು ಬಟ್ಟೆಗಳ ರಫ್ತಿನಲ್ಲಿ ಮುಕ್ತ ಅಂತರ್‌ರಾಷ್ಟ್ರೀಯ ಮಾರುಕಟ್ಟೆ ಇದೆ. ಅದನ್ನು ನಾವು ಯಾವ ರೀತಿ ಉಪಯೋಗಿಸಿಕೊಳ್ಳಬೇಕೆನ್ನುವುದರ ಬಗ್ಗೆ ಸಹ ಅವರು ಅಭ್ಯಾಸ ಮಾಡಿ ಕೆಲವೊಂದು ಸಜೆಷನ್ಸ್ ಕೊಟ್ಟಿದ್ದಾರೆ. ಅದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಎಲ್ಲಾ ಪಾಯಿಂಟ್ ಬಗ್ಗೆಯೂ ಮಾತನಾಡಬೇಕೆಂದು ಇಲ್ಲ. ಆದರೆ, ಒಂದೇ ಒಂದು ವಿಷಯ. ಇವತ್ತು ದೊಡ್ಡಬಳ್ಳಾಪುರ ಅಪಾರೆಲ್ ಪಾರ್ಕ್ ಎಂದು ಆಗಿ, ನನಗೆ ಗೊತ್ತಿದ್ದ ಹಾಗೆ 4–5 ವರ್ಷಗಳಿಂದ ನಾನು ಕೇಳುತ್ತಲೇ ಇದ್ದೇನೆ. ಲ್ಯಾಂಡ್ ಆಕ್ವಿಜಿಷನ್ ಆಗಿ ಸುಮಾರು 5–6 ವರ್ಷಗಳಾಗಿರಬಹುದು. ಆದರೆ, ಇವತ್ತಿಗೂ ಅದೇನು ಕಾರ್ಯಗತವಾಗಿದೆ, ಅದರಿಂದೇನಾದರೂ ಅಲ್ಲಿ ಉತ್ಪಾದನೆ ನಡೆಯುತ್ತಿದೆಯೋ? ಅಥವ ಇಲ್ಲವೋ? ನಮಗೆ ಗೊತ್ತಿಲ್ಲ. ಇದು ದೊಡ್ಡಬಳ್ಳಾಪುರ ರಸ್ತೆಯಲ್ಲಿ ಬೆಂಗಳೂರಿಗೆ ಹತ್ತಿರ ಇರತಕ್ಕಂಥದ್ದು. ಇನ್ನೇನು ದಾವಣಗೆರೆಯಲ್ಲಿ ಏನೂ ಮಾಡಲಿಲ್ಲ. ಬೆಂಗಳೂರು ಹತ್ತಿರವೇ ಮಾಡಿರತಕ್ಕಂಥದ್ದು. ಅದನ್ನೂ ನಾವು ಇವತ್ತು ಕೊನೆ ಹತ್ತಿಸಲಿಲ್ಲ. ಈ ರೀತಿ ಏನೋ ಒಂದು ಉದ್ದೇಶ ಇಟ್ಟುಕೊಂಡು ಆಕಸ್ಮಾತ್ ನಾವು ಯೋಜನೆಯನ್ನು ಹಾಕಿಕೊಂಡರೂ ಸಹ ಅದನ್ನು ಪೂರ್ತಿ ಮಾಡದೇ ಹೋದಾಗ, ಯಾವ ರೀತಿ ನಾವು ಸಾಧನೆಯನ್ನು ಮಾಡಲಿಕ್ಕಾಗುತ್ತದೆ ಎನ್ನತಕ್ಕಂಥದ್ದು ಮುಖ್ಯ ಪ್ರಶ್ನೆ. ಹಾಗೆಯೇ, ವಿದ್ಯುತ್ ಉತ್ಪಾದನೆ ಬಗ್ಗೆ, ಎನರ್ಜಿ ಸೆಕ್ಟಾರ್ ಬಗ್ಗೆಯೂ ಸಹ ಅವರು ಹೇಳಿದ್ದಾರೆ. ನಾನು ಮೊನ್ನೆ ಹೀಗೇ ಅಧಿಕಾರಿಗಳ ಹತ್ತಿರ, ಮಾತನಾಡುವಾಗ, ಏನ್ ಸಾರ್, ನೀವು ಹೇಗೆ ಹೇಳುತ್ತೀರಾ, ಇವತ್ತೂ ಸಹ ಬೆಂಗಳೂರಿನಲ್ಲಿ ಒಂದು ಯೂನಿಟ್‌ಗೆ ಮೂರು, ಮೂರೂವರೆ ರೂಪಾಯಿ ಕಟ್ಟುತ್ತಾರೆ. ಇಂಥ ಸಂದರ್ಭದಲ್ಲಿ ಬೆಂಗಳೂರಿನಲ್ಲೂ ನೀವು ಪವರ್ ಕಟ್ ಮಾಡುತ್ತಿದ್ದೀರಲ್ಲಾ. ಏನು ಕಾರಣ ಎಂದು ಕೇಳಿದರೆ,

ಅವರು ಉತ್ತರ ಕೊಟ್ಟರು, 4 ವರ್ಷಗಳ ಹಿಂದೆ ಒಂದು ಸರ್ವೆ ಮಾಡಿಸಿದ್ದೇವೆ, ಆ ಸರ್ವೆಯಲ್ಲಿ ನಮಗೆ ಏನು ರೆಕಮೆಂಡ್ ಮಾಡಿದ್ದರು ಅಂದರೆ, ನೀವು ಹೊಸ ಉತ್ಪಾದನೆ ಮಾಡುವುದೇನೂ ಬೇಕಾಗಿಲ್ಲ, ಆಗುತ್ತಿರತಕ್ಕಂಥ ಟ್ರಾನ್ಸ್‌ಮಿಷನ್ ಲಾಸ್ ಏನಿದೆ ಅದನ್ನು ಕಟ್ ಮಾಡಿ ಸಾಕು, ಹೊಸ ಉತ್ಪಾದನೆ ಮಾಡಲಿಕ್ಕೆ ನೀವೇನೂ ಬಂಡವಾಳ ಹಾಕುವ ಅವಶ್ಯಕತೆ ಇಲ್ಲ ಎಂದು ರೆಕಮೆಂಡೇಷನ್ಸ್ ಕೊಟ್ಟಿದ್ದಾರೆಂದು ಹೇಳಿದರು. ಆಯಿತು, ಸಂತೋಷ, ಒಪ್ಪಿಕೊಳ್ಳೋಣ. ಒಳ್ಳೆಯ ಸಜೆಷನ್ನೇ. ಒಂದು ರೀತಿಯಲ್ಲಿ ಒಳ್ಳೆಯ ಸಲಹೆಯೇ ಎಂದು ಇಟ್ಟುಕೊಳ್ಳೋಣ. ಏಕೆಂದರೆ, ಹೊಸ ಬಂಡವಾಳ ಹಾಕುವುದಕ್ಕಿಂತ ನಷ್ಟವಾಗುತ್ತಿರುವುದನ್ನು ತಡೆಗಟ್ಟಿ. ಎಷ್ಟರಮಟ್ಟಿಗೆ ನಾವು ನಷ್ಟವನ್ನು ತಡೆಗಟ್ಟಿದ್ದೇವೆ? ಟ್ರಾನ್ಸ್‌ಮಿಷನ್‌ನಲ್ಲಾಗುತ್ತಿರತಕ್ಕಂಥ ನಷ್ಟವನ್ನು ಎಷ್ಟರಮಟ್ಟಿಗೆ ನಾವು ತಡೆಗಟ್ಟಿದ್ದೇವೆ? ಅದರಲ್ಲೂ ನಾವು ವಿಫಲರಾಗಿದ್ದೇವೆ. ವಿಫಲವಾದಾಗ, ಕನಿಷ್ಠ ಹೊಸ ಶಕ್ತಿಯನ್ನು ಅಂದರೆ ವಿದ್ಯುತ್‌ನ್ನು ಉತ್ಪಾದನೆ ಮಾಡಲಿಕ್ಕಾದರೂ ನಾವು ಬಂಡವಾಳ ಹಾಕಬೇಕೆ? ಅಥವಾ ಬೇಡವೆ? ಅದನ್ನೂ ಮಾಡಿಲ್ಲ. ಅವರು ರೆಕಮೆಂಡೇಷನ್ ಕೊಟ್ಟರು. ನೀವು ಬರೀ ಟ್ರಾನ್ಸ್‌ಮಿಷನ್ ಲಾಸ್ ಕಟ್ ಮಾಡಿ ಸಾಕು ಎಂದರು. ಅದೇ ನಮಗೆ ವೇದವಾಕ್ಯ ಎಂದು ಹೊಸ ಉತ್ಪಾದನೆ ಬಗ್ಗೆ ನಾವು ಹೆಚ್ಚಿಗೆ ಗಮನ ಕೊಡುವುದಕ್ಕೆ ಹೋಗಲಿಲ್ಲ. ಇವತ್ತು ಹೊಸ ಉತ್ಪಾದನೆಯೂ ಆಗಲಿಲ್ಲ; ಇವತ್ತಿನ ಪತ್ರಿಕೆಯಲ್ಲಿ ನಾನು ಓದಿದೆ, ಮೂರು ಸಾವಿರ ಮೆಗಾವ್ಯಾಟ್ ಸಾಮರ್ಥ್ಯವನ್ನು ನಮ್ಮ ರಾಜ್ಯದಲ್ಲಿ ಅಭಿವೃದ್ಧಿಪಡಿಸುತ್ತೇವೆ ಎಂದು ಇತ್ತು. ನಾನು ಅದನ್ನು ಸ್ವಾಗತಿಸಲಿಕ್ಕೆ ಬಯಸುತ್ತೇನೆ. ಆದರೆ, ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆ? ನನಗಂತೂ ಭಾರೀ ಅನುಮಾನವಿದೆ. ಇವತ್ತು ಏನಾಗಿದೆ? ಹೈದರಾಬಾದ್‌ಗೆ ಹೋಗಿ ತಾವು ಬೇರೆ ರಾಜ್ಯಗಳಿಗೆ ಅಂದರೆ ಮದ್ರಾಸ್‌ಗೆ ಹೋಗಿ, ಪವರ್ ಕಟ್ ಅನ್ನತಕ್ಕಂಥದ್ದು ಸಿಟಿಗಳಲ್ಲಿ ಇಲ್ಲವೇ ಇಲ್ಲ. ಬೆಂಗಳೂರಿನ ಇಂದಿರಾನಗರದಲ್ಲಿ ನಾನು ವಾಸವಿದ್ದೇನೆ, ಡಿಸೆಂಬರ್ ತಿಂಗಳಿನಿಂದ ನೋಡುತ್ತಿದ್ದೇನೆ, ಪ್ರತಿ ದಿನ ಪವರ್ ಕಟ್ ಇದೆ. ಇಂಥ ದಿನ ಇಲ್ಲವೆಂದು ಇಲ್ಲ. ಬೆಂಗಳೂರಿನಲ್ಲಿಯೇ ಗ್ರಾಹಕರು ಸಂಪೂರ್ಣವಾಗಿ ಬಿಲ್ ಅಮೌಂಟ್ ಅನ್ನು ಪಾವತಿ ಮಾಡುತ್ತಾರೆ. ಇಂಥ ಕಡೆಯೇ ನೀವು ಸುದೀರ್ಘವಾಗಿ ಹಾಗೂ ಸರಾಗವಾದಂಥ ವಿದ್ಯುತ್ತನ್ನು ಕೊಡದೇ ಹೋದರೆ, ಇನ್ನು ರಾಜ್ಯದಲ್ಲಿ ಬೇರೆ ಕಾರ್ಖಾನೆಗಳಾಗಬಹುದು, ರೈತರದಾಗಬಹುದು, ಇವರ ಬವಣೆ ಎಲ್ಲಿಗೆ ಇರಬಹುದು? ನಮ್ಮ ರೈತರ ಬಗ್ಗೆಯಂತೂ ಬಿಟ್ಟುಬಿಡಿ. ನಾನು ನನ್ನ ಜಿಲ್ಲೆಯ ಅನುಭವ ಹೇಳಲಿಕ್ಕೆ ಬಯಸುತ್ತೇನೆ. 6 ಗಂಟೆ ವಿದ್ಯುತ್ತು ಕೊಡುತ್ತೇವೆಂದು ಹೇಳಿದ್ದಾರೆ ಮಾನ್ಯ

ಅಧ್ಯಕ್ಷರೆ. ಮಾನ್ಯ ರಮೇಶ್‌ಕುಮಾರ್‌ರವರೂ ಇದ್ದಾರೆ. ಅವರ ಕ್ಷೇತ್ರ, ನನ್ನ ಕ್ಷೇತ್ರ ಪಕ್ಕಪಕ್ಕದ ಕ್ಷೇತ್ರ. ಶ್ರೀನಿವಾಸಗೌಡರ ಕ್ಷೇತ್ರವೂ ಅಷ್ಟೇ ನಮ್ಮನೆಲ್ಲಾ ಪಕ್ಕಪಕ್ಕದ ಕ್ಷೇತ್ರಗಳು. ಕೆಲವು ಊರುಗಳಲ್ಲಿ ಸುಮಾರು ಒಂದು, ಒಂದೂವರೆ ತಿಂಗಳು 4 ಗಂಟೆ ಮೇಲೆ ವಿದ್ಯುತ್ ಕೊಟ್ಟೇ ಇಲ್ಲ. ಸರ್ಕಾರ ಬೇಕಾದರೆ ಅದರ ಬಗ್ಗೆ ಮಾಹಿತಿ ತರಿಸಿಕೊಂಡು ನೋಡಲಿ. ನಾನೇನೂ ಇಲ್ಲಿ ಉತ್ಪ್ರೇಕ್ಷೆಯಾಗಿ ಮಾತನಾಡಲಿಕ್ಕೆ ಬಂದಿಲ್ಲ. ಕೊಟ್ಟಂಥ ವಿದ್ಯುತ್ತೂ ಗಂಟೆಗೆ 2 ಸಾರಿ, 3 ಸಾರಿ ಟ್ರಿಪ್ ಆಗುತ್ತದೆ. ಈ ರೀತಿಯಾದಂಥ ವ್ಯವಸ್ಥೆಯಾದರೆ, ರೈತರು ಹೇಗೆ ಉತ್ಪಾದನೆ ಮಾಡತಕ್ಕಂಥದ್ದು ಸಾಧ್ಯ? ಕಾರ್ಖಾನೆಗಳು ಹೇಗೆ ಅಭಿವೃದ್ಧಿಯಾಗತಕ್ಕಂಥದಕ್ಕೆ ಸಾಧ್ಯ? ಕಾರ್ಖಾನೆಗಳು ತಾನೇ ಏಕೆ ಬರುತ್ತವೆ ಕರ್ನಾಟಕಕ್ಕೆ? ಅವರಿಗೆ ಮದ್ರಾಸ್‌ನಲ್ಲಿ ಸಾಕಷ್ಟು ಸರಾಗವಾಗಿ 24 ಗಂಟೆ ನಿಮಗೆ ಕರೆಂಟ್ ಕೊಟ್ಟೇ ತೀರುತ್ತೇವೆ ಎಂದು ತಮಿಳುನಾಡಿನವರು ಹೇಳಿದಾಗ, ಕರ್ನಾಟಕಕ್ಕೆ ಅವರು ಯಾಕೆ ಬರುತ್ತಾರೆ? ಏಕೆ ಬರಬೇಕು? ಎಲ್ಲಿ ಅನುಕೂಲ ಇದೆ, ಅಲ್ಲಿಗೆ ಹೋಗುತ್ತಾರೆ. ಹಾಗಾಗಿ, ಅವರೇನು ಕೆಲವೊಂದು ಮೂಲಭೂತ ಸೌಲಭ್ಯಗಳನ್ನು ಒದಗಿಸುವ ದಿಕ್ಕಿನಲ್ಲಿ ಕೆಲವೊಂದು ಅಂಶಗಳನ್ನು ಹೇಳಿದ್ದಾರೆ, ಅವುಗಳನ್ನು ನಾವು ಭಾರೀ ಗಂಭೀರತೆಯಿಂದ ಪರಿಗಣಿಸಬೇಕು. ಅವರು ರಸ್ತೆಗಳ ಬಗ್ಗೆಯೂ ಮಾತನಾಡಿದ್ದಾರೆ. ಕರ್ನಾಟಕದಲ್ಲಿ ಯಾವ ರೀತಿ ರಸ್ತೆಗಳನ್ನು ಅಭಿವೃದ್ಧಿಪಡಿಸಬಹುದೆಂದು ಒಂದು ಮ್ಯಾಪೇ ಹಾಕಿಕೊಟ್ಟಿದ್ದಾರೆ. ಅದನ್ನು ನಾವು ಸ್ವಲ್ಪಮಟ್ಟಿಗೆ ಗಮನಕ್ಕೆ ತೆಗೆದುಕೊಳ್ಳಬೇಕಾದಂಥ ಅವಶ್ಯಕತೆ ಇದೆ. ಏಕೆ ನಾವು ಮೂಲಭೂತ ಸೌಲಭ್ಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದರೆ, ಅವಿದ್ದಾಗ ಮಾತ್ರ ಕಾರ್ಖಾನೆಗಳು ಬರುತ್ತವೆ, ರೈತರು ಉತ್ಪಾದನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಅದಾದಾಗ ಮಾತ್ರ ನಮ್ಮಲ್ಲಿ ಎಂಪ್ಲಾಯ್‌ಮೆಂಟ್ ಜನರೇಷನ್ ಆಗುತ್ತದೆ. ಎಂಪ್ಲಾಯ್‌ಮೆಂಟ್ ಜನರೇಷನ್ ಆಗದ ಹೊರತು ನಮ್ಮ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಾಗಲಿ, ಯಾವುದೇ ಪ್ರದೇಶವಾಗಲಿ ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಿಲ್ಲ ಅನ್ನತಕ್ಕಂಥದ್ದು ನನ್ನ ಅಭಿಪ್ರಾಯ.

ಅಧ್ಯಕ್ಷರು: ಬೇಗ ಮುಗಿಸಿ.

ಶ್ರೀ ಸಿ.ಬಿ. ಕೃಷ್ಣಭೈರೇಗೌಡ: ಮುಗಿಸುತ್ತೇನೆ ಅಧ್ಯಕ್ಷರೆ, ಇನ್ನೊಂದೆರಡು ನಿಮಿಷಗಳಲ್ಲಿ ಒಂದೆರಡು ವಿಷಯ ಮಾತ್ರ ಹೇಳಿ ಮುಗಿಸುತ್ತೇನೆ. ಕರೆಂಟ್ ಬಗ್ಗೆ ಹೇಳುತ್ತಿದ್ದೆ. ಇವತ್ತಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಶುರುವಾಗಿದೆ. ಇದು ವಿಷಯಕ್ಕೆ ನೇರವಾಗಿ ಸಂಬಂಧವಿಲ್ಲದಿರುವುದಾದರೂ ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತರಲಿಕ್ಕೆ ಬಯಸುತ್ತೇನೆ. ಇವತ್ತಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಶುರುವಾಗಿದೆ. ಬೆಳಗ್ಗೆ ನನಗೆ ನನ್ನ ಕ್ಷೇತ್ರದ ಒಂದು ಊರಿನಿಂದ ಫೋನ್ ಮಾಡಿದ್ದರು. ಸಾರ್, 2–3 ದಿನಗಳಿಂದ ನಮಗೆ ಕರೆಂಟೇ ಇಲ್ಲ. ಎಸ್.ಎಸ್.ಎಲ್.ಸಿ ಪರೀಕ್ಷೆ ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ ಸರಿಯಾಗಿ ವಿದ್ಯುತ್ ಸಂಪರ್ಕ ಇಲ್ಲದೇ ಹೋದರೆ ಮಕ್ಕಳು ವಿದ್ಯಾಭ್ಯಾಸ ಮಾಡುವುದು ಹೇಗೆ ಎಂದು ಬೆಳಗ್ಗೆ ಸದನಕ್ಕೆ ಬರುವ ಸಂದರ್ಭದಲ್ಲಿ ನನಗೆ ಫೋನ್ ಮಾಡಿದ್ದರು. ಹೇಗೆ ಸಾರ್? ನಾವು ಎಸ್.ಎಸ್.ಎಲ್.ಸಿ ಪರೀಕ್ಷೆ ನಡೆಯತಕ್ಕಂಥ ಸಂದರ್ಭದಲ್ಲಿಯೂ ಸೂಕ್ತವಾದಂಥ ವಿದ್ಯುತ್ ಕೊಡದೇ ಹೋದರೆ ಮಕ್ಕಳು ಓದುವುದು ಹೇಗೆ? ಪಾಸ್ ಆಗುವುದು ಹೇಗೆ? ಜೀವನದಲ್ಲಿ ಉದ್ಧಾರ ವಾಗುವುದು ಹೇಗೆ? ಎಲ್ಲಾ ಸಮಸ್ಯೆಗಳು ಪ್ರಶ್ನೆಗಳಿಗೆ ನಾವು ಉತ್ತರವನ್ನು ಹುಡುಕುತ್ತಾ ಹೋದಾಗ ಎಲ್ಲಿಗೆ ಹೋಗುತ್ತದೆ ಎಂದು ಹೇಳಿದರೆ, ಮೂಲಭೂತ ಸೌಲಭ್ಯಗಳನ್ನು ಕೊಡುವುದರಲ್ಲಿ ನಾವು ಸಾಕಷ್ಟು ವಿಫಲರಾಗಿದ್ದೇವೆ ಅನ್ನುವುದನ್ನು ನಾವು ಒಪ್ಪಿಕೊಳ್ಳದೇ ಹೋದರೆ, ನಾವು ತಪ್ಪನ್ನು ಒಪ್ಪಿಕೊಳ್ಳದೇ ಹೋದರೆ, ಅದಕ್ಕೆ ಉತ್ತರದ ಪ್ರಶ್ನೆಯೇ ಬರುವುದಿಲ್ಲವಲ್ಲಾ. ಹಾಗಾಗಿ ಈ ಮೂಲಭೂತ ಸೌಲಭ್ಯಗಳಾದ ರಸ್ತೆ, ವಿದ್ಯುತ್, ಕುಡಿಯುವ ನೀರು ಇವುಗಳನ್ನು ಒದಗಿಸುವ ದಿಕ್ಕಿನಲ್ಲಿ ಘನತೆವೆತ್ತ ರಾಷ್ಟ್ರಪತಿಗಳೇನು ಸಂದೇಶವನ್ನು ಕೊಟ್ಟಿದ್ದಾರೋ, ಅದನ್ನು ಭಾರಿ ಗಂಭೀರವಾಗಿ ಪರಿಗಣಿಸಬೇಕು ಎಂಬುದು ನನ್ನ ಆಸೆಯಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇವತ್ತು Horticulture ಬಗ್ಗೆ ಮಾನ್ಯ ಘನತೆವೆತ್ತ ರಾಷ್ಟ್ರಪತಿಗಳು ಸಾಕಷ್ಟು ಮಾತನಾಡಿದ್ದಾರೆ. Horticultureಗೆ ಹೊಂದಿಕೊಂಡಿರ ತಕ್ಕಂಥದ್ದು ನಮ್ಮಲ್ಲಿ ಹೈನುಗಾರಿಕೆ. ಹೈನುಗಾರಿಕೆ ಇವತ್ತು ನಮ್ಮ ಅನೇಕ ಜಿಲ್ಲೆಗಳಲ್ಲಿ ಜೀವನಾಡಿ ಎಂದೇ ಹೇಳಬಹುದು. ಪ್ರತಿದಿನ ರೈತರಿಗೆ ದುಡ್ಡನ್ನು ವಿತರಣೆ ಮಾಡತಕ್ಕಂಥ ವ್ಯವಸ್ಥೆ ನಮ್ಮಲ್ಲಿದೆ. ನನಗೆ ಜ್ಞಾಪಕವಿದ್ದಂತೆ, ಹೈನುಗಾರಿಕೆಯನ್ನೂ ಸಹ ಬಳಸಿಕೊಳ್ಳಬಹುದು ಎಂದು ಬಹುಶಃ ಅವರೂ ಇದನ್ನು suggest ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಇವತ್ತು ಹೈನುಗಾರಿಕೆ ಮೂಲಕ ಸುಮಾರು 7 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಒಂದೇ ಜಿಲ್ಲೆಯಲ್ಲಿ ಇಷ್ಟೊಂದು ಉತ್ಪಾದನೆಯಾಗುತ್ತಿದೆ. ನನಗೆ ಗೊತ್ತಿರತಕ್ಕಂಥದ್ದನ್ನು ಮಾತ್ರ ನಾನಿಲ್ಲಿ ಮಾತನಾಡುತ್ತಿದ್ದೇನೆ. ಅದಕ್ಕೂ ಸಹ ನಾವು ಸೂಕ್ತ ಮಾರುಕಟ್ಟೆಯನ್ನು ಒದಗಿಸಲಿಕ್ಕೆ ಆಗಿಲ್ಲ. ಎಷ್ಟು ಬೇಕಾದರೂ ಹಾಲನ್ನು ಉತ್ಪಾದನೆ ಮಾಡಲಿಕ್ಕೆ ನಮ್ಮ ರೈತರು ತಯಾರಿದ್ದಾರೆ. ಒಂದು ಕಡೆ ಅದಕ್ಕೆ ಪೂರಕವಾಗಿ ಏನು ಮಾಡಬೇಕು

ಎಂಬುದನ್ನು ಯೋಚಿಸಬೇಕಾಗಿದೆ. ಇವತ್ತು ನಮ್ಮಲ್ಲಿ ನೀರಿನ ಬವಣೆ ಇದೆ. ನೀರಿನ ಬವಣೆಯನ್ನು ಬಗೆಹರಿಸುವ ದಿಕ್ಕಿನಲ್ಲಿ ಹೈನುಗಾರಿಕೆ ಸಹಾ ಸಹಕಾರಿಯಾಗುತ್ತದೆ. ಆದರೆ grazing grounds ಎಂದೇನು ನಾವು ಕರೆಯುತ್ತೇವೆ, ಅಂತಹ ಸಾಕಷ್ಟು ಬೆಟ್ಟ ಗಾಡು ಪ್ರದೇಶಗಳು ನಮ್ಮಲ್ಲಿವೆ. ಅಲ್ಲೆಲ್ಲಾ ಹುಲ್ಲನ್ನು ಬೆಳೆಸಿದರೆ, ಅಲ್ಲಿ ಹಸುಗಳಿಗೆ ಮೇವನ್ನು ಉತ್ಪಾದನೆ ಮಾಡಿದಂತೆಯೂ ಆಗುತ್ತದೆ. ನಮ್ಮ ಇನ್ನೂ ಒಳ್ಳೊಳ್ಳೆಯ ತಳಿಗಳನ್ನು ಅಲ್ಲಿ ನಾವು ರೈತರಿಗೆ ಪರಿಚಯ ಮಾಡಿಕೊಟ್ಟು, ಈ ರೀತಿಯಾಗಿ ಪೂರಕವಾದಂತಹ ಹುಲ್ಲನ್ನು ಅಲ್ಲಿ ಬೆಳೆಸಿ, ಅದರ ಮುಖಾಂತರ ಉತ್ಪಾದನೆ ಆಗತಕ್ಕಂಥ ಹಾಲನ್ನು ಅಲ್ಲಿಗೆ ಬಿಡುವುದಕ್ಕೆ ಸಾಧ್ಯವಾಗುವುದಿಲ್ಲ, ಏನು ಹೆಚ್ಚುವರಿ ಉತ್ಪಾದನೆ ಬರುತ್ತದೋ, ಅದಕ್ಕೆ ಸೂಕ್ತ ಮಾರುಕಟ್ಟೆಯನ್ನು ಕಲ್ಪಿಸಬೇಕು. ಶುರುವಿನಿಂದ ಅಂತ್ಯದವರೆಗೂ ಒಂದು ಆ ಇಡೀ ಸರಣಿಯನ್ನು ಸರಿಯಾಗಿ ರೂಪಿಸಿ, ನಾವು solutions ಕೊಡದೇ ಹೋದರೆ ಅದರಲ್ಲೂ ಕೂಡ ವಿಫಲರಾಗುತ್ತೇವೆ. ಆದರೆ ಇವತ್ತು lift irrigation ಅನ್ನು ಅಳವಡಿಸುವುದರಲ್ಲಿ ಆಗಬಹುದು ಮತ್ತು ಎಲ್ಲಿ ಇವತ್ತು ನಮಗೆ ತೋಟಗಾರಿಕೆಗೆ ಹೋಗಿ ಎಂದು ಯಾವ ರೀತಿಯಾಗಿ ಹೇಳುತ್ತಿದ್ದೀರಿ, ಅದೇ ರೀತಿಯಾಗಿ ಹೈನುಗಾರಿಕೆಯನ್ನೂ ಸಹ ಮಾಡಬಹುದು. ನೀರಿನ ಮಿತವ್ಯಯ ಮಾಡಲಿಕ್ಕೆ ಅವಕಾಶ ಇದೆ. ಹೈನುಗಾರಿಕೆ, ತೋಟಗಾರಿಕೆ ಇವುಗಳೆಲ್ಲವನ್ನೂ ಸಹ water management ಸೇರಿಸಿಕೊಂಡು, ನಾವು ಒಂದು comprehensive ಆದ programme ಅನ್ನು ಮಾಡಿದಾಗ, ಆ solution ಕೊಡಲಿಕ್ಕೆ ಆಗುತ್ತದೆ ಎನ್ನುವಂಥಾದ್ದು ನನ್ನ ಅಭಿಪ್ರಾಯ ಎಂದು ಹೇಳುತ್ತೇನೆ. ಮಾನ್ಯ ರಾಷ್ಟ್ರಪತಿಗಳು ಇನ್ನೊಂದು ಹೇಳಿದ್ದಾರೆ. ಅವರು ದುಬೈಗೆ ಹೋದಾಗ, ದುಬೈನಲ್ಲಿ ಅವರು ಅಲ್ಲಿನ ದೊರೆಯನ್ನು ಭೇಟಿಯಾದಾಗ, ಇನ್ನು ನಾಲ್ಕು ವರ್ಷಗಳಲ್ಲಿ ನಮಗೆ ಬೇರೆ ದೇಶಗಳಿಂದ ಬರುತ್ತಿರತಕ್ಕಂಥ ಪ್ರವಾಸಿಗರೇನಿದ್ದಾರೆ. ಆ ಸಂಖ್ಯೆಯನ್ನು ನಾವು ನಾಲ್ಕು ಪಟ್ಟು ಬೆಳೆಸುತ್ತೇವೆ ಎಂಬ ಒಂದು ಅಂಶವನ್ನು ಅಲ್ಲಿನ ದೊರೆಗಳು ಘನತೆವೆತ್ತ ರಾಷ್ಟ್ರಪತಿಯವರ ಗಮನಕ್ಕೆ ತಂದರಂತೆ. ಘನತೆವೆತ್ತ ರಾಷ್ಟ್ರಪತಿಗಳು ಇದನ್ನು ಹೇಗೆ ಮಾಡುತ್ತೀರಿ ಎಂದು ಕೇಳಿದಾಗ, ಎಲ್ಲಾ department ನವರಿಗೂ ಜವಾಬ್ದಾರಿ ವಹಿಸಿದ್ದೇವೆ ಎಂದರಂತೆ, ಘನತೆವೆತ್ತ ರಾಷ್ಟ್ರಪತಿಗಳು ಹೇಳುತ್ತಾರೆ. Public Works ನಿಂದ ಹಿಡಿದು ರಸ್ತೆಗಳು ಆಗಬಹುದು, Hotels ಆಗಬಹುದು, Air Ports ಆಗಬಹುದು, Communication networks ಆಗಬಹುದು, ಎಲ್ಲರಿಗೂ ಒಂದು

action plan ಕೊಟ್ಟಿರುವುದು ಅವರಿಗೆ ಗೊತ್ತಾಯಿತಂತೆ. ಇನ್ನು ನಾಲ್ಕು ವರ್ಷಗಳಲ್ಲಿ ನಮ್ಮ ದೇಶಕ್ಕೆ ಆಗಮಿಸತಕ್ಕಂಥ ಪ್ರವಾಸಿ ಸಂಖ್ಯೆಯನ್ನು ನಾಲ್ಕು ಪಟ್ಟು ಬೆಳೆಸಬೇಕಾದರೆ ಏನೇನು ಅವಶ್ಯಕತೆ ಇದೆ ಎನ್ನುವುದರಲ್ಲಿ ಪ್ರತಿಯೊಂದು ಇಲಾಖೆಯವರಿಗೂ ತಮ್ಮದೇ ಆದಂತಹ ಜವಾಬ್ದಾರಿಯನ್ನು ಅವರು ವಹಿಸಿದ್ದರು. ಅಲ್ಲಿ ಎಲ್ಲಾ ಇಲಾಖೆಯವರೂ ಸೇರಿ ಕೆಲಸ ಮಾಡುತ್ತಿದ್ದಾರೆ. ಇವತ್ತು ದುಬೈಗೆ ಎಷ್ಟು ಸಂಖ್ಯೆಯಲ್ಲಿ ಪ್ರವಾಸಿಗರು ಹೋಗುತ್ತಿದ್ದಾರೆ ಎಂದರೆ, ನಮ್ಮ ದಕ್ಷಿಣ ಭಾರತದಿಂದಲೇ ಸಾಕಷ್ಟು ಸಂಖ್ಯೆಯಲ್ಲಿ ದಿನವೂ ಹೋಗುತ್ತಾರೆ. ಈ ರೀತಿಯಾಗಿ ನಾವು ಯಾವುದೇ ಒಂದು ಯೋಜನೆಯನ್ನು ಹಾಕಿಕೊಂಡಾಗ, ಕೇವಲ ಹೈನುಗಾರಿಕೆ ಎಂದು ಹೇಳಿದರೆ, ಬರೀ Animal husbandry ಯವರದೊಂದೇ ಜವಾಬ್ದಾರಿ ಆಗುವುದಿಲ್ಲ. ಅದಕ್ಕೆ ಪೂರಕವಾಗಿ ಎಲ್ಲರೂ ಸೇರಿ ಕೆಲಸ ಮಾಡಿದಾಗ ಮಾತ್ರ ಆ ಒಂದು ಗುರಿಯನ್ನು ಸಾಧಿಸಲಿಕ್ಕೆ ಆಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ, ಘನತೆವೆತ್ತ ರಾಷ್ಟ್ರಪತಿಗಳು ಎಲ್ಲರೂ ಸೇರಿ ಕೆಲಸ ಮಾಡಿದಾಗ ಗುರಿಯನ್ನು ಸಾಧಿಸಲಿಕ್ಕೆ ಸಾಧ್ಯವಾಗುತ್ತದೆ ಎಂಬ ಒಂದು ಸಂದೇಶವನ್ನು ಕೊಟ್ಟಿದ್ದಾರೆ. ಅದು ಬಹುಶಃ ನಮ್ಮಲ್ಲಿ ತಪ್ಪಿದೆ. ಆ ಸಂದೇಶವನ್ನೂ ಸಹ ನಾವು ಅಳವಡಿಸಿಕೊಳ್ಳಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ. ಕೊನೆಯದಾಗಿ, ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ಏಕೀಕರಣದ ಸುವರ್ಣ ಮಹೋತ್ಸವವನ್ನು ನಾವು ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಹಿರಿಯರಾದಂತಹ ವಾಟಾಳ್ ನಾಗರಾಜ್‌ರವರು ಹಿಂದಿನ ಅನೇಕ ನಾಯಕರುಗಳ ಬಗ್ಗೆ ಮೆಲುಕು ಹಾಕಿದರು. ಅದನ್ನು ಕೇಳುತ್ತಿದ್ದರೆ, ಎಂತಹ ನಾಯಕರು ನಮ್ಮನ್ನು ಆಳಿ ಹೋಗಿದ್ದಾರೆ ಎಂದು ನಮಗೇ ಒಂದೊಂದು ಬಾರಿ ಮೈ ರೋಮಾಂಚನವಾಗುತ್ತದೆ. ಇವತ್ತು ಈ ಸುಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಗಳ ಸಂದೇಶದ ಜೊತೆಗೆ ನಮ್ಮ ರಾಜ್ಯ ಯಾವ ದಿಕ್ಕಿನಲ್ಲಿ ಹೆಜ್ಜೆ ಇಡಬೇಕು ಎನ್ನುವುದರ ಬಗ್ಗೆಯೂ ಸಹ ವಿಮರ್ಶೆ ಮಾಡುತ್ತಿದ್ದೇವೆ. ಮುಖ್ಯವಾಗಿ ನಾನು ಭಾವಿಸುತ್ತೇನೆ, ಎಷ್ಟೇ ವಿಮರ್ಶೆ ಮಾಡಿ, ಏನೇ ಯೋಜನೆಗಳನ್ನು, ಗುರಿಗಳನ್ನು ನಾವು ಹಾಕಿಕೊಳ್ಳಬಹುದು. ಆದರೆ ನಮ್ಮ ನಾಯಕತ್ವ, ಆ ಹಿಂದಿನ ದಿನಗಳಲ್ಲಿ ಇದ್ದಂತಹ ಗುಣಗಳನ್ನು ನಾವು ಮತ್ತೆ ನಮ್ಮ ನಾಯಕತ್ವದಲ್ಲಿ ತರದೇ ಹೋದರೆ ಯಾವುದನ್ನೂ ಸಹ ಸಾಧಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಕೆಂಗಲ್ ಹನುಮಂತಯ್ಯನವರು ಈ ವಿಧಾನ ಸೌಧವನ್ನು ಕಟ್ಟಬೇಕಾದರೆ ಎಷ್ಟು ವಿರೋಧವನ್ನು ಮೆಟ್ಟಿ ನಿಂತು ಕಟ್ಟಿಸಿದರು ಎನ್ನುವುದನ್ನು ನಾವು ಮರೆಯುವಂತಿಲ್ಲ. ಅಥವಾ ಏಕೀಕರಣ ಆಗಬೇಕಾದರೆ

ಏನು ವಿರೋಧ ಇತ್ತು, ಅದನ್ನು ಆ ನಾಯಕತ್ವ ಭದ್ರವಾಗಿ ಮೆಟ್ಟಿ ನಿಂತಿತ್ತು. ದೂರದೃಷ್ಟಿಯಿಂದ ಯೋಚನೆ ಮಾಡತಕ್ಕಂಥ ಶಕ್ತಿ ಆ ನಾಯಕತ್ವಕ್ಕೆ ಇತ್ತು, ಅಂತಹ ಒಂದು ಗುಣಗಳೂ ಸಹ ಅವರಲ್ಲಿ ಅಡಗಿದ್ದವು. ಯಾರೂ ಸಹ ಅಂದಿನ ದಿನಗಳಲ್ಲಿ ನಾಯಕತ್ವವನ್ನು ಪ್ರಶ್ನೆ ಮಾಡುತ್ತಿರಲಿಲ್ಲ. ಏಕೆಂದರೆ, ಅವರ ವೈಯಕ್ತಿಕ ನಡವಳಿಕೆ ಏನಿತ್ತು. ಅದು ಅಷ್ಟು ಸ್ವಚ್ಛವಾಗಿತ್ತು. ಅಂತಹ ಒಂದು ಸ್ವಚ್ಛ ಹಾಗೂ ಒಂದು ದೃಢ ನಾಯಕತ್ವದ ಅವಶ್ಯಕತೆಯೂ ಸಹ ಇವತ್ತು ನಮ್ಮ ರಾಜ್ಯದಲ್ಲಿದೆ. ಘನತೆವೆತ್ತ ರಾಷ್ಟ್ರಪತಿಗಳ ಈ ಎಲ್ಲಾ ಗುರಿಗಳನ್ನು ನಾವು ಸಾಧಿಸಬೇಕಾದರೆ, ಅಂತಹ ನಾಯಕತ್ವದ ಅವಶ್ಯಕತೆ ನಮಗೆ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಘನತೆವೆತ್ತ ರಾಷ್ಟ್ರಪತಿಗಳು ನಮ್ಮ ಒಂದು ಸೌಜನ್ಯಕ್ಕಾಗಿ ಇಲ್ಲಿ ಬಂದು ಮಾತನಾಡಿದ್ದಾರೆ. ಐವತ್ತನೇ ವರ್ಷದಲ್ಲಿ ನಾವು ಹೆಜ್ಜೆ ಇಡುತ್ತಿದ್ದೇವೆ, ತಾವು ಬಂದು ನಮ್ಮನ್ನು ಉದ್ದೇಶಿಸಿ ಎರಡು ಮಾತುಗಳನ್ನಾಡಬೇಕೆಂದು ಕೇವಲ ತಾವು, ಮುಖ್ಯಮಂತ್ರಿಗಳು, ಸಭಾಪತಿಯವರು ಹೋಗಿ ಕರೆದ ತಕ್ಷಣ, ಅವರು ಎಷ್ಟೊಂದು ಸಂಶೋಧನೆಯನ್ನು ಮಾಡಿದ್ದಾರೆ. ಇದನ್ನು ನಾವು ನೋಡುತ್ತಿದ್ದರೆ, ಇನ್ನೆಷ್ಟು ಸಂಶೋಧನೆಯನ್ನು, ಅವರೇ ಆಗಲಿ, ಅಥವಾ ಅವರ staff ಆಗಲಿ, ಎಷ್ಟು ಸಂಶೋಧನೆಯನ್ನು ಮಾಡಿದ್ದಾರೆ ಎಂದರೆ, ನಮಗೇ ಆಶ್ಚರ್ಯವಾಗುತ್ತದೆ. ಇಷ್ಟು ಸಂಶೋಧನೆ ಆಗಲಿ ಇಷ್ಟು ಆಳವಾಗಿ ಒಂದು ವಿಷಯವನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಮಾಡತಕ್ಕಂಥದ್ದು ಆಗಲಿ, ನಮ್ಮಲ್ಲಿ ಎಷ್ಟು ಜನಕ್ಕೆ ಇದೆ ಅಧ್ಯಕ್ಷರೆ, ಎಷ್ಟು ಅಧಿಕಾರಿಗಳಿಗಿದೆ? ಅಧಿಕಾರಿಗಳ ಮಾತೇಕೆ? ಸದಸ್ಯರಾದ ನಾವು, ನಾನೂ ಒಬ್ಬ ಸದಸ್ಯ ನನಗೆ ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ? ಹಾಗಾಗಿ, ಈ ಆಳವಾಗಿ ತಿಳಿದುಕೊಳ್ಳತಕ್ಕಂಥ ಅವರ ಸಂಕಲ್ಪವನು ನಾವು ಮೆಚ್ಚಬೇಕು. ಅವರು ಏಕೆ ಮಾಡಿದರು? ಅವರಿಗೆ ಈ ದೇಶದ ಬಗ್ಗೆ, ಈ ದೇಶದ ಭವಿಷ್ಯದ ಬಗ್ಗೆ ಒಂದು commitment ಇದೆ, ಆ commitment ಇದ್ದಿದ್ದರಿಂದ ಅವರು ಅಷ್ಟು ತಯಾರಾಗಿ ಬಂದರು. ಅಷ್ಟೊಂದು ತಯಾರಾಗಿ ಬರತಕ್ಕಂಥ ಅವಶ್ಯಕತೆಯಾದರೂ ಏನಿತ್ತು? ಅವರು ಬಂದಿರಬಹುದಾಗಿತ್ತು. ಐವತ್ತು ವರ್ಷ ಆಗಿದೆ, ನಿಮಗೆಲ್ಲಾ ಶುಭಾಶಯಗಳು, ಶುಭ ಕೋರುತ್ತೇನೆ, ಇನ್ನೂ ಐವತ್ತು ವರ್ಷ ನೀವು ಸಂತೋಷವಾಗಿ, ಸದೃಢವಾಗಿ ಬೆಳೆಯಲಿ ಎಂದು ಹೇಳಿ ಹೋಗಬಹುದಾಗಿತ್ತು. ಆದರೆ ಇಷ್ಟು ಆಳವಾಗಿ ವಿಷಯಗಳನ್ನು ತಿಳಿದುಕೊಂಡು ಬಂದು ನಮ್ಮ ಮುಂದೆ ಈ ವಿಷಯಗಳನ್ನೆಲ್ಲಾ ಇಟ್ಟು ಹೋದರು. ಆ ಒಂದು

commitment, ನಮ್ಮ leadership ನಲ್ಲಿ ಆಗಬಹುದು, ರಾಜಕೀಯ ರಂಗದಲ್ಲಿ ಆಗಬಹುದು, ಆಡಳಿತ ರಂಗದಲ್ಲಿ ಆಗಬಹುದು, ಆ commitment ಬರದೇ ಹೋದರೆ, ನಾವು ಯಾವುದನ್ನೂ ಸಹ ಸಾಧಿಸಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದೂ ಸಹ ನನ್ನ ಒಂದು ಅಭಿಪ್ರಾಯವಾಗಿದೆ. ಆ ದಿಕ್ಕಿನಲ್ಲೂ ಸಹ....

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು): ಮಾನ್ಯ ಕೃಷ್ಣ ಬೈರೇಗೌಡರೆ, ಒಂದು ನಿಮಿಷ ಈಲ್ಡ್ ಆಗಿ. ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕೃಷ್ಣ ಬೈರೇಗೌಡರು ಪ್ರವಾಸೋದ್ಯಮದ ಬಗ್ಗೆ ಬಹಳ ಮಾತನಾಡುತ್ತಿದ್ದಾರೆ, ಬಹಳ ಸಂತೋಷ. ಮಾನ್ಯ ಅಬ್ದುಲ್ ಕಲಾಂ ಸಾಹೇಬರವರೂ ಕೂಡ ಪ್ರವಾಸೋದ್ಯಮಕ್ಕೆ ಒತ್ತು ಕೊಡುವುದರ ಬಗ್ಗೆ ದುಬೈಯನ್ನು Quote ಮಾಡಿರತಕ್ಕಂಥದ್ದು ನಿಜ. ಆದರೆ ನಾನು KGF ನಲ್ಲಿ, Golden safari, ಎಂದು ಮಾಡಬೇಕೆಂದು ಪ್ರಸ್ತಾವಿಸಿದ್ದೆ. Gold ಅನ್ನು ಹಿಂದೆ ಅಲ್ಲಿ ತೆಗೆಯುತ್ತಿದ್ದರು, ಇವತ್ತು ಅದೆಲ್ಲಾ ಪಾಳು ಬಿದ್ದಂತಹ ಒಂದು ಸ್ಥಳವಾಗಿದೆ. ಅಲ್ಲಿ "Golden safari" ಮಾಡುವುದರ ಮುಖಾಂತರ ಅದನ್ನು ಪ್ರವಾಸೋದ್ಯಮವಾಗಿ ಅಭಿವೃದ್ಧಿ ಮಾಡಬೇಕು ಎನ್ನುವಂತಹ ದೃಷ್ಟಿಯಿಂದ Central Government ಗೆ ನಾವು 625 ಕೋಟಿ ರೂಪಾಯಿಗಳ ಪ್ರಸ್ತಾವನೆಯೊಂದನ್ನು ಸಲ್ಲಿಸಿದ್ದೇವೆ. ಅದರಲ್ಲಿ Golden safari ಯನ್ನೂ ಕೂಡ ಸೇರಿಸಿದ್ದೇವೆ. ಆದರೆ ಅಲ್ಲಿ ಇರತಕ್ಕಂಥ ಮಾನ್ಯ ಕೇಂದ್ರ ಸಚಿವರಾದಂತಹ ಮುನಿಯಪ್ಪನವರು ಅದರ ಬಗ್ಗೆ ನಮಗೆ ಸಹಕಾರ ನೀಡಬೇಕು. ಅವರು ಸಹಕಾರ ನೀಡದೇ ಹೋದರೆ, ಆ ಯೋಜನೆಯನ್ನು ತರಲಿಕ್ಕಾಗುವುದಿಲ್ಲ. ಅಲ್ಲಿನ Mines and Geology ಯಿಂದ ನಮಗೆ permission ಕೊಡಬೇಕು. ಆ permission ಕೊಟ್ಟರೆ, ಬಹುಶಃ ಅದೊಂದು ಬೆಂಗಳೂರಿಗೆ ಅತ್ಯಂತ ಹತ್ತಿರವಾದಂತಹ ಪ್ರವಾಸೋದ್ಯಮ ಸ್ಥಳವಾಗುತ್ತದೆ. ಜೊತೆಗೆ, ಅಲ್ಲಿ 19 ಹೋಲ್ ಇರತಕ್ಕಂಥ ಒಂದು Golf ಸೆಂಟರ್ ಇದೆ. ಅದು ಬ್ರಿಟೀಷರ ಕಾಲದಲ್ಲಿ ಮಾಡಿರತಕ್ಕಂಥದ್ದು. ಅದನ್ನು ಪುನಶ್ಚೇತನ ಮಾಡಿದರೆ, ಬಹುಶಃ ಬೆಂಗಳೂರಿನಿಂದ ಹೆಚ್ಚು ಜನರನ್ನು ಅಲ್ಲಿಗೆ ಆಕರ್ಷಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಿಮ್ಮದೇ ಸರ್ಕಾರ ಸೆಂಟ್ರಲ್‌ನಲ್ಲಿದೆ, ಮಾನ್ಯ ಮುನಿಯಪ್ಪನವರೂ ಕೂಡ ನಿಮ್ಮ ಜಿಲ್ಲೆಯವರೇ ಆಗಿದ್ದಾರೆ. ದಯಮಾಡಿ ಅದೊಂದು ಯೋಜನೆಯನ್ನು ದಯವಿಟ್ಟು clear ಮಾಡಿಸಲಿಕ್ಕೆ ನೀವು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಸಿ.ಬಿ.ಕೃಷ್ಣ ಬೈರೇಗೌಡ: ಮಾನ್ಯ ಮಂತ್ರಿಗಳು ನಮ್ಮ ಕೋಲಾರ ಜಿಲ್ಲೆಯವರು ಹಾಗೂ ಈ ಭಾಗದ ಎಲ್ಲರೂ ಸಹ ಸ್ವಾಗತ ಮಾಡತಕ್ಕಂಥ ಯೋಜನೆಯನ್ನು ತಿಳಿಸಿದ್ದಾರೆ. ಮಾನ್ಯ ಕೇಂದ್ರ ಸಚಿವರೊಬ್ಬರೇ ಅಲ್ಲ. ಅವರ ಜೊತೆಗೆ ನಾವೂ ಸೇರಿಕೊಂಡು ನಿಮಗೆ ಬೆಂಗಾವಲಾಗಿ ನಿಲ್ಲುತ್ತೇವೆ. ನಮ್ಮ ಸಂಪೂರ್ಣ ಪ್ರೋತ್ಸಾಹ ನಿಮ್ಮ ಜೊತೆಗೆ ಇದ್ದೇ ಇರುತ್ತದೆ. ದಯವಿಟ್ಟು ಅದಕ್ಕೆ ಏನಾದರೂ ಮಾಡಿ ಸಹಕಾರ ಮಾಡಬೇಕು ಎಂದು ತಮ್ಮಲ್ಲಿ ಕೇಳುತ್ತೇನೆ. ನಾವೂ ಖಂಡಿತ ಸಹಕರಿಸುತ್ತೇವೆ. ಇದು ಹೊಸ ಯೋಜನೆ ಏನಲ್ಲ. ಸುಮಾರು ವರ್ಷಗಳಿಂದ ಇದು ಇದೆ. KGFನಲ್ಲಿ ಒಂದು ಉತ್ತಮ ವಾತಾವರಣ ಅಲ್ಲಿದೆ, ಅಲ್ಲಿ ಸಾಕಷ್ಟು ಸಾವಿರಾರು ಎಕರೆ ಸರ್ಕಾರಿ ಜಾಗ ಇದೆ, ಅದನ್ನೆಲ್ಲಾ ಸದುಪಯೋಗಪಡಿಸಿಕೊಂಡು ನಾವು ಅಭಿವೃದ್ಧಿ ಮಾಡಬಹುದು. ಹಿಂದೆ ಮಾನ್ಯ ಅಲಂಗೂರು ಶ್ರೀನಿವಾಸ್‌ರವರು ಅಲ್ಲೊಂದು ತೋಟಗಾರಿಕಾ ಕ್ಷೇತ್ರವನ್ನು ಅಭಿವೃದ್ಧಿ ಮಾಡಬಹುದು ಎನ್ನುವಂತಹ ಯೋಚನೆಯನ್ನೂ ಸಹ ಮಾಡಿದ್ದರು. ಇವತ್ತಿಗೂ ಅಲ್ಲಿ ಅವಕಾಶ ಇದೆ. ಅಂತಹ ಅವಕಾಶಗಳನ್ನು ನೋಡಿ, ಅವುಗಳನ್ನು ಬಳಸಿಕೊಳ್ಳತಕ್ಕಂಥದ್ದರಲ್ಲಿ ನಮ್ಮ ದೂರದೃಷ್ಟಿ ಅಡಗಿದೆ. ಕೇಂದ್ರ ಸಚಿವರ ಜೊತೆ ನಾವಂತೂ ಒತ್ತಾಯ ಮಾಡುತ್ತೇವೆ. ನಾವು ನಿಮ್ಮ ಜೊತೆ ಇರುತ್ತೇವೆ. ನೀವು ಏನಾದರೂ ಮಾಡಿ ನಮ್ಮ ಜಿಲ್ಲೆಗೆ ಆ ಒಂದು ಕೊಡುಗೆ ಕೊಟ್ಟರೆ, ಆ ಭಾಗದಲ್ಲಿ ಸಾಕಷ್ಟು ಜನ ಇವತ್ತು ನಿರ್ಗತಿಕರು ಇದ್ದಾರೆ. ಎಲ್ಲಾ ಉದ್ಯೋಗವನ್ನು ಕಳೆದುಕೊಂಡು ಏನೂ ವೃತ್ತಿ ಇಲ್ಲದೆ ಇರುವವರೂ ಇದ್ದಾರೆ. ನಮ್ಮ ರಾಜೇಂದ್ರನ್‌ರವರು ಇದ್ದಿದ್ದರೆ ಈಗಲೇ ಅರ್ಧ ಗಂಟೆ ಚರ್ಚೆ ಪ್ರಾರಂಭ ಮಾಡುತ್ತಿದ್ದರು. ಸಾಕಷ್ಟು ಜನ ನಿರ್ಗತಿಕರಿದ್ದಾರೆ. ಅವರಿಗೆ ಒಂದು ಮಾರ್ಗ ಆದ ಹಾಗಾಗುತ್ತದೆ ಎಂದು ಹೇಳುತ್ತಾ, ಕೊನೆಯದಾಗಿ, ಮಾನ್ಯ ಘನತೆವೆತ್ತ ರಾಷ್ಟ್ರಪತಿಯವರು ಈ ಸದನವನ್ನು ಉದ್ದೇಶಿಸಿ ಮಾತನಾಡಿದರು ಆ ಸಂದೇಶದಲ್ಲಿ ಇದೊಂದು ಮುಖ್ಯವಾದ ಸಂದೇಶ ಎಂದು ನಾನು ಭಾವಿಸಿದ್ದೇನೆ. ಅವರು ಹೇಳುತ್ತಾರೆ, ಈ ರಾಜ್ಯದ ಜನರ ಆಶಯ ಮತ್ತು ಕನಸುಗಳನ್ನು ನನಸಾಗಿ ಮಾಡುವುದೇ ನಿಮ್ಮ ಧ್ಯೇಯವಾಗಿದೆ ಎಂದು ಮೊದಲ ಪ್ಯಾರಾಗ್ರಾಫ್‌ನಲ್ಲಿ ಅವರು ಹೇಳಿದರು. ಈ ರಾಜ್ಯದ ಜನರ ಆಶಯ ಏನಿದೆ, ಅವರ ಕನಸುಗಳು ಏನಿವೆ, ಬಹುಶಃ ಅವುಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿಯೇ ನಾವುಗಳು ವಿಫಲರಾಗಿದ್ದೇವೆ. ಎಂದು ನಮಗೆ ಒಂದೊಂದು ಸಾರಿ ಅನ್ನಿಸುತ್ತದೆ. ಅವುಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಾವು ಕನಸನ್ನು ಕಾಣಬೇಕಾಗುತ್ತದೆ. ಇನ್ನು ಐದು ವರ್ಷಕ್ಕೆ ನಮ್ಮ ರಾಜ್ಯ

ಎಲ್ಲಿರಬೇಕು, ಇನ್ನು 10 ವರ್ಷಕ್ಕೆ ನಮ್ಮ ರಾಜ್ಯ ಎಲ್ಲಿರಬೇಕು, ಇನ್ನು 20 ವರ್ಷಕ್ಕೆ ಅವರೇನು 20-20 ಅಂಶಗಳ ಒಂದು ಸಂದೇಶವನ್ನು ಕೊಟ್ಟಿದ್ದಾರೆ, 2020ನೇ ಇಸವಿಗೆ ನಾವು ಎಲ್ಲಿರಬೇಕು ಎಂದು ಪ್ರಥಮವಾಗಿ ಆಲೋಚನೆ ಮಾಡದೇ ಹೋದರೆ ಆ ಒಂದು ವಿಷನರಿ ಝೀಲ್ ಏನಿದೆ, ಆ ದೂರದೃಷ್ಟಿಯನ್ನು ನಾವು ಯೋಚನೆ ಮಾಡದೆ ಹೋದರೆ ಯಾವುದರಲ್ಲಿಯೂ ನಾವು ಗೆಲ್ಲುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ನಮ್ಮ ಅಭಿಪ್ರಾಯ. ಮುಖ್ಯವಾಗಿ ರಾಷ್ಟ್ರಪತಿಗಳ ಭಾಷಣದಿಂದ ನಾವು ಆ ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡತಕ್ಕಂಥದ್ದನ್ನು ಕಲಿಯಬೇಕು. ಉಳಿದಿದ್ದೆಲ್ಲ ಆ ದೂರದೃಷ್ಟಿ ಇಟ್ಟುಕೊಂಡು ಮಾಡುತ್ತೇವೆಂದು ದೃಢ ಸಂಕಲ್ಪ ಮಾಡಿದರೆ, ಹಣಕಾಸಿನ ಕೊರತೆ 25,000 ಕೋಟಿ ರೂಪಾಯಿಗಳ ಕೊರತೆ ಇದೆ ಎಂದು ಹೇಳುತ್ತೀರಿ, ಎಷ್ಟೋ ಕಾರ್ಯಕ್ರಮಗಳಿಗೆ ನಾವು ಹಣವನ್ನು ವ್ಯಯ ಮಾಡುತ್ತಿದ್ದೇವೆ. ಆದರೆ ನಾವು ನಮಗೆ ಒಂದು ಗುರಿಯನ್ನು ಅಳವಡಿಸಿಕೊಂಡರೆ ಹಣಕಾಸು ಆಗಬಹುದು, ಮತ್ತೊಂದು ಸಂಪನ್ಮೂಲ, ಮಗದೊಂದು ಸಂಪನ್ಮೂಲ ಎಲ್ಲ ತಾನೇ ತಾನಾಗಿ ಬರುತ್ತದೆ. ಆದರೆ ಆ ಸಂಕಲ್ಪ ಇದೆಯಲ್ಲಾ, ಅದು, ಪ್ರಥಮ ಹೆಜ್ಜೆ. ಆ ಕನಸನ್ನು ಕಂಡು ಕರ್ನಾಟಕ 2020ನೇ ಇಸವಿಗೆ ಈ ರೀತಿ ಇರುತ್ತದೆ, ಆ ರೀತಿ ಮಾಡಬೇಕು, ಎನ್ನತಕ್ಕಂಥ ಕನಸನ್ನು ನಾವು ಕಾಣದೇ ಹೋದರೆ, ನಾವು ಯಾವುದನ್ನೂ ಸಹ ಸಾಧಿಸಲಿಕ್ಕೆ ಆಗುವುದಿಲ್ಲ, ನಾವೆಲ್ಲರೂ ಸರ್ಕಾರ ಆಗಬಹುದು, ನಾವಾಗಬಹುದು, ಅಧಿಕಾರಿಗಳು ಆಗಬಹುದು, ಎಲ್ಲರೂ ಸಹ ಆ ಕನಸನ್ನು ಕಾಣಬೇಕಾಗಿದೆ. ಆ ದಿಕ್ಕಿನಲ್ಲಿ ನಾವು ಯೋಚನೆ ಮಾಡಬೇಕು. ಅವರು ಹೇಳಿರತಕ್ಕಂತಹ ಕೆಲವು ಅಂಶಗಳನ್ನು ನಮಗೆ ಸರಿ ಅನ್ನಿಸಬಹುದು, ಇಲ್ಲ ಎನ್ನಿಸಬಹುದು, ಆದರೆ ಮುಖ್ಯವಾಗಿ ಆ ದೂರದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡುವ ದಿಕ್ಕಿನಲ್ಲಿ ನಾವೆಲ್ಲರೂ ಈ ಸದನ ಮತ್ತು ಸರ್ಕಾರ ಯೋಚನೆ ಮಾಡಲಿ ಎಂದು ಹೇಳುತ್ತಾ, ಮತ್ತೊಮ್ಮೆ ಇಂತಹ ಮಹಾನ್ ರಾಷ್ಟ್ರಪತಿಗಳನ್ನು ಪಡೆಯಲಿಕ್ಕೆ, ನಮ್ಮ ದೇಶ ಹಾಗೂ ನಾವೆಲ್ಲರೂ ಸಹ ಹೆಮ್ಮೆ ಪಡಬೇಕೆಂದು ಹೇಳುತ್ತಾ, ಅವರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಅಧ್ಯಕ್ಷರೆ, ತಮಗೂ ಧನ್ಯವಾದಗಳು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೆ, ಮೊಟ್ಟ ಮೊದಲನೆಯದಾಗಿ ಈ ವಿಷಯ ಕುರಿತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ, ನವೆಂಬರ್ 20ನೇ ತಾರೀಖು ಸನ್ಮಾನ್ಯ ರಾಷ್ಟ್ರಪತಿಗಳಾದಂತಹ ಅಬ್ದುಲ್ ಕಲಂರವರು ನಮ್ಮ ಈ ಸದನವನ್ನು

ಉದ್ದೇಶಿಸಿ ನಮ್ಮ ರಾಜ್ಯದ ಜನರನ್ನು ಉದ್ದೇಶಿಸಿ ಮಾತನಾಡಿರುವುದು ಸುವರ್ಣ ಕರ್ನಾಟಕ ವರ್ಷದ ಬಹು ದೊಡ್ಡ ಕೊಡುಗೆ ಎಂದು ನಾನು ಭಾವಿಸಿಕೊಂಡಿದ್ದೇನೆ, ರಾಜ್ಯದ ಜನ ಭಾವಿಸಿಕೊಂಡಿದ್ದಾರೆ. ಈ ವರ್ಷದ ಒಂದು ದೊಡ್ಡ ಕೊಡುಗೆ ಕರ್ನಾಟಕಕ್ಕೆ ಯಾವುದಾದರೂ ಸಿಕ್ಕಿದೆ ಎಂದರೆ, ಅದು ರಾಷ್ಟ್ರಪತಿಗಳು ಕರ್ನಾಟಕಕ್ಕೆ ಬಂದು, ಕರ್ನಾಟಕದ ಮುಂದಿನ ಹತ್ತಾರು ವರ್ಷಗಳ ಒಂದು ದಿಕ್ಕನ್ನು ಸ್ಪಷ್ಟಪಡಿಸಿ ನಮ್ಮೆಲ್ಲರಲ್ಲಿ ಒಂದು ಹೊಸ ಚಿಂತನೆಯನ್ನು ಮೂಡಿಸುವುದಕ್ಕೆ ಕಾರಣೀಕರ್ತವಾದ ಅವರ ಕಾರ್ಯಕ್ರಮ ಅವರ ಭಾಷಣ ನಿಜವಾದ ಒಂದು ದೊಡ್ಡ ಕೊಡುಗೆ ಎಂದು ನಾನು ಭಾವಿಸಿದ್ದೇನೆ. ಹಾಗಾಗಿ ಇಂತಹ ಒಂದು ಸಂದರ್ಭದಲ್ಲಿ ರಾಷ್ಟ್ರಪತಿಗಳೇ ಸ್ವತಃ ಬಂದು ನಮ್ಮನ್ನು ಉದ್ದೇಶಿಸಿ ಮಾತನಾಡಿ, ಕರ್ನಾಟಕಕ್ಕೆ ಹೊಸ ದಿಕ್ಕನ್ನು ಕೊಡುವಂತಹ ಪ್ರಯತ್ನ ಮಾಡಿರುವುದಕ್ಕೆ ಈ ಸದನದ ಮೂಲಕ ಕರ್ನಾಟಕ ರಾಜ್ಯದ ಜನತೆ ಪರವಾಗಿ ನಾನು ಮಾನ್ಯ ರಾಷ್ಟ್ರಪತಿಗಳನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಈ ಸಂದರ್ಭದಲ್ಲಿ ಅಧ್ಯಕ್ಷರೆ, ತಮಗೆ ಮತ್ತು ಮೇಲ್ಮನೆಯ ಸಭಾಪತಿಗಳಿಗೂ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ತಾವು ಸುವರ್ಣ ಕರ್ನಟಕವನ್ನು ಒಂದು ಅರ್ಥಪೂರ್ಣವಾಗಿ ಆಚರಿಸುವುದಕ್ಕೆ ರಾಷ್ಟ್ರಪತಿಗಳನ್ನು ಕರೆಸಬೇಕು, ನಮ್ಮ ರಾಜ್ಯದ ಬಗ್ಗೆ, ಕರ್ನಾಟಕದ ಪ್ರಗತಿಯ ಸೂತ್ರಗಳನ್ನು ನಮ್ಮ ರಾಜ್ಯದ ಜನತೆಯ ಕಣ್ಣು ಮುಂದೆ ಇಡಬೇಕೆಂದು ವಿಶೇಷವಾಗಿ ತಾವುಗಳು ಆಸಕ್ತಿಯನ್ನು ತೆಗೆದುಕೊಂಡು ಸರ್ಕಾರದ ಎಲ್ಲಾ ಮಂತ್ರಿಗಳ ಜೊತೆಯಲ್ಲಿ ಅವರನ್ನು ಕರೆಸುವುದಕ್ಕೆ ತಾವು ವಿಶೇಷವಾದ ಪ್ರಯತ್ನವನ್ನು ಮಾಡಿದ್ದೀರಿ. ಈ ರೀತಿ ಪ್ರಯತ್ನ ಆಗುವುದು ಅತ್ಯಂತ ಮುಖ್ಯ. ಏಕೆಂದರೆ, ತಮ್ಮ ಮಟ್ಟದಲ್ಲಿ ತಾವು ಈ ಪ್ರಯತ್ನವನ್ನು ಮಾಡಿರುವುದರಿಂದಾಗಿ ರಾಷ್ಟ್ರಪತಿಗಳು ಬಂದು ಈ ಭಾಷಣವನ್ನು ಮಾಡುವುದಕ್ಕೆ ಅವಕಾಶವಾಯಿತು. ಸಾಮಾನ್ಯರು ಯಾರೋ ಇದನ್ನು ಯೋಚಿಸಿದ್ದರೆ ಅದರ ಅವಕಾಶವೇ ನಮಗೆ ಲಭ್ಯವಾಗುತ್ತಿರಲಿಲ್ಲ. ಹಾಗಾಗಿ ತಾವು ಆ ಸ್ಥಾನದಿಂದ ಅತ್ಯಂತ ಸರಿಯಾದ ಯೋಗ್ಯವಾದ ಕರ್ನಾಟಕದ ಭವಿಷ್ಯವನ್ನು ಉತ್ತರವಾದ ರೀತಿಯಲ್ಲಿ ನಿರ್ಧರಿಸುವುದಕ್ಕೆ ಬೇಕಾದ ನಿಲುವನ್ನು ತೆಗೆದುಕೊಂಡು ತಾವು ರಾಷ್ಟ್ರಪತಿಗಳನ್ನು ಭೇಟಿ ಮಾಡಿ, ಅವರನ್ನು ಇಲ್ಲಿ ಕರೆಸಿ ಆ ಮಾತುಗಳನ್ನು ಹೇಳಿಸಿದ್ದೀರಿ. ಹಾಗಾಗಿ ತಮಗೂ ಮತ್ತು ಸಭಾಪತಿಗಳಿಗೂ ನಾನು ಧನ್ಯವಾದಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಅಧ್ಯಕ್ಷರೆ, ಇನ್ನು ನಾನು ನಮ್ಮ ಬಿಜೆಪಿ ಮತ್ತು ಜೆಡಿಎಸ್ ಸರ್ಕಾರಗಳ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯ ಮಂತ್ರಿಗಳನ್ನು

ಅಭಿನಂದಿಸುತ್ತೇನೆ. ತಮ್ಮನ್ನೂ ಸಹ ನಾನು ಅಭಿನಂದಿಸುತ್ತೇನೆ. ರಾಷ್ಟ್ರಪತಿಗಳು ಭಾಷಣ ಮಾಡಿ ಹೋದರೆ ಅಷ್ಟಕ್ಕೇ ಸೀಮಿತ ಆಗಬಾರದು, ಹಾಗಾಗದೆ ಇದು ಮತ್ತೊಮ್ಮೆ ಇವತ್ತು ಮತ್ತು ನಾಳೆ ಮತ್ತೊಮ್ಮೆ ಈ ವಿಷಯ ಕುರಿತಂತೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಹಾಗಾಗಿ ನಾನು ಸರ್ಕಾರಕ್ಕೆ, ಮಾನ್ಯ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯ ಮಂತ್ರಿಗಳಿಗೆ ಮತ್ತು ತಮಗೆ, ಅಭಿನಂದಿಸುತ್ತೇನೆ. ಈ ರೀತಿ ಅವಕಾಶಗಳನ್ನು ಕಲ್ಪಿಸಿಕೊಟ್ಟು ನಮ್ಮೆಲ್ಲರ ಮೇಲಿನ ಜವಾಬ್ದಾರಿಗಳು ನಮಗೆ ಮತ್ತೊಮ್ಮೆ ಅರಿವಾಗುವುದಕ್ಕೆ ಬೇಕಾದ ಅವಕಾಶಗಳನ್ನು ತಾವು ಕಲ್ಪಿಸಿ ಕೊಟ್ಟಿದ್ದೀರಿ. ಅನೇಕ ಹಿರಿಯರು ಚಿಂತನೆ ಮಾಡಿ ಈ ವಿಷಯವನ್ನು ಪ್ರಸ್ತಾಪ ಮಾಡಿ, ಅದು ಹಾಗೆಯೇ ಗಾಳಿಗೆ ಹೋಗಿದ್ದು ಇದೆ, ಸಾಕಷ್ಟು ವಿಷಯಗಳು ನಮ್ಮ ರಾಜ್ಯದಲ್ಲಿ ಇರಬಹುದು, ನಮ್ಮ ಸುತ್ತ ಮುತ್ತಲೂ ನಡೆಯುತ್ತಿರುವಂತಹ ಘಟನೆಗಳಲ್ಲಿ ಇರಬಹುದು. ಎಷ್ಟೋ ಜನ ಹಿರಿಯರು ಮಾತನಾಡಿದ್ದಾರೆ. ವಿಷಯಗಳನ್ನು ಆದರೆ ಅದು ಗಾಳಿಯಲ್ಲಿ ಹೋಗಿರುವುದನ್ನು ನಾವು ನೋಡಿದ್ದೇವೆ. ಆದರೆ ಸನ್ಮಾನ್ಯ ರಾಷ್ಟ್ರಪತಿಗಳು ಮಾಡಿರುವಂತಹ ಮಾರ್ಗದರ್ಶನದ ಮಾತುಗಳು ಮೆಲುಕು ಹಾಕುವುದರ ಜೊತೆಯಲ್ಲಿ ನಮಗೆ ಅದು ನಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳುವುದಕ್ಕೆ ಅವಕಾಶ ಆಗಬೇಕೆಂದು ತಾವು ಈ ಸದನವನ್ನು ಎರಡು ದಿನದ ಮಟ್ಟಿಗೆ ವಿಶೇಷವಾಗಿ ಅದಕ್ಕೋಸ್ಕರವಾಗಿ ಕರೆದಿರುವುದು ಬಹಳ ಅತ್ಯಂತ ಶ್ಲಾಘನೀಯ. ನಾವು ರಾಷ್ಟ್ರಪತಿಗಳಿಗೆ ಈ ರೀತಿ ಗೌರವ ಸಲ್ಲಿಸುವಂಥದ್ದು ನಮ್ಮ ಕರ್ನಾಟಕ ವಿಧಾನ ಸಭೆಯ ಘನತೆ ಗೌರವ ಹೆಚ್ಚಿಸುವುಂಥದ್ದಕ್ಕೆ ಮಾಡಿರುವ ಪ್ರಯತ್ನವೂ ಇದು ಎಂದು ನಾನು ಭಾವಿಸಿಕೊಂಡಿದ್ದೇನೆ. ಹಾಗಾಗಿ ಈ ರೀತಿಯ ಪ್ರಯತ್ನ ಆಗಿರುವುದು ಅತ್ಯಂತ ಶ್ಲಾಘನೀಯ. ನಮ್ಮ ಮೇಲಿನ ಜವಾಬ್ದಾರಿಯನ್ನು ಅರಿತುಕೊಂಡು ನಾವು ಮುಂದೆ ಹೋಗುವುದಕ್ಕೆ ಒಂದು ಒಳ್ಳೆಯ ಅವಕಾಶ ಇರುವಂಥದ್ದು ಎಂದು ನಾನು ಭಾವಿಸಿಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೆ, ರಾಷ್ಟ್ರಪತಿಗಳ ಭಾಷಣದ ಬಗ್ಗೆ ಇಡೀ ಸಮಾಜದಲ್ಲಿ ಅಪಾರವಾದ ಗೌರವ ಮೂಡಿರುವುದು ಕಾಣುತ್ತೇವೆ. ನಮ್ಮೆಲ್ಲರಿಗೂ ಗೌರವ ಮೂಡಿರುವುದು ನಾವು ಕಾಣುತ್ತೇವೆ. ಬರೀ ನಮ್ಮ ದೇಶದಲ್ಲಿ ಮಾತ್ರವಲ್ಲ, ಇವತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸಹ, ನಮ್ಮ ರಾಷ್ಟ್ರಪತಿಗಳ ಬಗ್ಗೆ ವಿಶೇಷವಾದ ಗೌರವ ನಿರ್ಮಾಣವಾಗಿರುವುದನ್ನು ನಾವು ಕಾಣುತ್ತೇವೆ. ಹಾಗಾಗಿ ಅವರು ಯಾವ ದೇಶಕ್ಕೇ ಹೋಗಲಿ ಅವರಿಗೆ ಅಪಾರವಾದ ಗೌರವವನ್ನು ಮತ್ತು ಅವರಿಗೆ ಯೋಗ್ಯವಾದ ರೀತಿಯಲ್ಲಿ ಅವರನ್ನು ನಡೆಸಿಕೊಳ್ಳುತ್ತಿರುವುದನ್ನು, ಇತ್ಯಾದಿ ಎಲ್ಲಾ

ಸಂಗತಿಗಳನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ ನಾವು ಇಂತಹ ರಾಷ್ಟ್ರಪತಿಗಳನ್ನು ಹೊಂದಿರುವಂಥದ್ದು ನಮ್ಮೆಲ್ಲರ ಸುದೈವ ಎಂದು ಭಾವಿಸಿಕೊಂಡಿದ್ದೇನೆ. ಅವರು 2020ಕ್ಕೆ ನಮ್ಮ ಕಣ್ಣು ಮುಂದೆ ಒಂದು ಗುರಿಯನ್ನು ಇಟ್ಟಿದ್ದಾರೆ. ಭಾರತ ದೇಶ ಅಭಿವೃದ್ಧಿ ಹೊಂದಿದ ದೇಶಗಳ ಸಾಲಿನಲ್ಲಿರಬೇಕೆಂದು ಒಂದು ಕನಸನ್ನು ನಮ್ಮ ಮುಂದಿಟ್ಟಿದ್ದಾರೆ. ಕೇವಲ ಕನಸನ್ನು ಮಾತ್ರ ಅವರು ನಮ್ಮ ಮುಂದಿಟ್ಟಿಲ್ಲ. 2020ಕ್ಕೆ ಭಾರತ ಅಭಿವೃದ್ಧಿ ಹೊಂದಿದ ದೇಶಗಳ ಸಾಲಿನಲ್ಲಿ ಇರಬೇಕೆಂದಾದರೆ, ಅದಕ್ಕೆ ಮಾಡಬೇಕಾದ ಕಾರ್ಯ ಯೋಜನೆ ಏನು ಅದನ್ನು ಸಹ ಸಿದ್ಧಪಡಿಸಿಕೊಂಡು ಅದನ್ನು ಅನುಷ್ಠಾನ ಗೊಳಿಸುವುದಕ್ಕೆ ಅವರು ತಮ್ಮದೇ ಆದ ಪ್ರಯತ್ನವನ್ನು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅವರು ಮಕ್ಕಳ ಮಧ್ಯೆ ಬೆರೆಯುತ್ತಿರುವಂಥದ್ದು, ಮಕ್ಕಳಿಗೆ ನೈತಿಕವಾದ ಜೀವನವನ್ನು ನಡೆಸುವುದಕ್ಕೆ ಪ್ರೇರಣೆಯನ್ನು ಕೊಡುತ್ತಿರುವಂಥದ್ದು, ಮತ್ತು ಈ ದೇಶದ ಭವಿಷ್ಯವನ್ನು ನಿರ್ಮಿಸುವುದಾದರೆ ಇವತ್ತಿನ ಈ ರಾಜಕಾರಣಿಗಳಿಂದ ಎಷ್ಟು ಆಗುತ್ತದೋ ಬಿಡುತ್ತದೋ ಎಂದು ಒಂದು ಸಂಶಯ ಅವರ ಸಮಾಜದಲ್ಲಿ ಇದ್ದ ಹಾಗೆ ಮನಸ್ಸಿನಲ್ಲಿರುವುದನ್ನು ನಾವು ಕಾಣುತ್ತೇವೆ. ಈ ರಾಷ್ಟ್ರವನ್ನು 2020ಕ್ಕೆ ಅಭಿವೃದ್ಧಿ ಹೊಂದಿದ ದೇಶದ ಸಾಲಿನಲ್ಲಿ ನಿಲ್ಲಿಸಬೇಕೆಂದಾದರೆ ಅದು ಈ ಮಕ್ಕಳಿಂದ ಸಾಧ್ಯ ಎನ್ನುವಂತಹ ವಿಶ್ವಾಸದಿಂದ ಅವರಲ್ಲಿ ಆ ಜವಾಬ್ದಾರಿ ಅರಿವನ್ನು ಮೂಡಿಸುವಂತಹ ಪ್ರಯತ್ನವನ್ನು ರಾಷ್ಟ್ರಪತಿಗಳು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದು ನಮ್ಮೆಲ್ಲರ ಮೇಲಿನ ಜವಾಬ್ದಾರಿಯೂ ಇದೆ. ನಾವು 2020ಕ್ಕೆ ಯಾರ್ಯಾರು ಎಲ್ಲೆಲ್ಲಿ ಇರುತ್ತೇವೋ ಗೊತ್ತಿಲ್ಲ. 2020ಕ್ಕೆ ಈ ದೇಶದ ಮಕ್ಕಳು ಯುವಕರು ಅವರು ಈ ಅಭಿವೃದ್ಧಿ ಹೊಂದಿದ ದೇಶವನ್ನು ಮುನ್ನಡೆಸುವುದಕ್ಕೆ ಬೇಕಾದಂತಹ ಹೊಣೆಗಾರಿಕೆಯ ಜವಾಬ್ದಾರಿಯನ್ನು ನಾವೂ ಸಹ ಅವರಲ್ಲಿ ಮೂಡಿಸಬೇಕಾದ ಸಂದರ್ಭ ಇದೆ. ಹಾಗಾಗಿ ರಾಷ್ಟ್ರಾಧ್ಯಕ್ಷರು ಅವರ ಕನಸನ್ನು ನನಸು ಮಾಡುವುದಕ್ಕೆ ನಾವು ನಮ್ಮ ಅಳಿಲು ಸೇವೆಯನ್ನು ನಮ್ಮ ಜವಾಬ್ದಾರಿಯ ಸ್ಥಾನಮಾನವನ್ನು ಕೊಡಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ನಮಗೆಲ್ಲರಿಗೂ ಗೊತ್ತಿರುವಂತೆ ನಾವೆಲ್ಲಾ ನಂಬಿರುವಂತೆ ಮಾನವವಾಗಿ ಹುಟ್ಟುವುದೇ ಅದೆಷ್ಟೋ ಜನ್ಮಗಳ ಪುಣ್ಯವಾಗಿದೆ. ಅದರಲ್ಲೂ ಭಾರತದಲ್ಲಿ ಹುಟ್ಟಿದವರ ಬಗ್ಗೆ ಈ ಒಂದು ಆಧ್ಯಾತ್ಮಿಕ ಭೂಮಿಯಲ್ಲಿ ಹುಟ್ಟಿರುವುದರ ಬಗ್ಗೆ ಇನ್ನಷ್ಟು ಹೆಚ್ಚು ವಿಶೇಷವಾದಂಥ ಗೌರವ ನಮ್ಮ ಬಗ್ಗೆ ಇದೆ. ಜಗತ್ತಿನ ಉಳಿದೆಲ್ಲಾ ದೇಶಗಳ ಬಗ್ಗೆ ಬೇರೆ ಬೇರೆ ಮಾತುಗಳೇ ಇವೆ. ಅವೆಲ್ಲಾ ಭೋಗಗಳ

ರಾಷ್ಟ್ರಗಳು ಎಂದು ಇದೆ. ಆದರೆ ಭಾರತದ ಬಗ್ಗೆ ಹೆಮ್ಮೆ ಇದೆ. ಇದರದೇ ಆದಂಥ ಒಂದು ಸಂಸ್ಕೃತಿ ಇದೆ, ಇತಿಹಾಸ ಇದೆ, ಈ ದೇಶದ ಒಂದು ಆಧ್ಯಾತ್ಮಿಕ ಶಕ್ತಿಯ ಬಗ್ಗೆ ಇವೊತ್ತು ಇಡೀ ಜಗತ್ತೇ ನಮ್ಮ ಕಡೆ ನೋಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವೊತ್ತು ಅಮೇರಿಕಾ ಮುಂದುವರಿದಿರಬಹುದು, ಆದರೆ ಅಮೇರಿಕಾದಲ್ಲಿ ಇರುವಷ್ಟು ಹುಚ್ಚಾಸ್ಪತ್ರೆಗಳು ಬಹುಶಃ ಇನ್ನು ಎಲ್ಲೂ ಇಲ್ಲವೆಂದು ನಾವು ಕೇಳುತ್ತೇವೆ. ಆದರೆ ಇವೊತ್ತು ಭಾರತದ ಕಡೆ ಇಡೀ ಜಗತ್ತು ನೋಡುತ್ತಿದೆ. ಶಾಂತಿಗಾಗಿ, ಆತ್ಮದ ಒಂದು ನೆಮ್ಮದಿಗಾಗಿ, ಅದು ಇನ್ನೆಲ್ಲಿ ಇದೆ, ಭಾರತದಂಥ ಒಂದು ಆಧ್ಯಾತ್ಮಿಕವಾದಂಥ ದೇಶದಲ್ಲಿಯೇ ಅದು ಲಭ್ಯವಿದೆ ಎನ್ನುವಂಥ ನಮ್ಮ ಸನಾತನ ಸಂಸ್ಕೃತಿಯ ಬಗ್ಗೆ ನಂಬಿಕೆ ಮತ್ತು ಜಾಗೃತಿ ಬಂದಿರುವಂಥ ಸಂದರ್ಭವನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ ಭಾರತ ಅಭಿವೃದ್ಧಿ ಹೊಂದಿದಂಥ ದೇಶದ ಸಾಲಿನಲ್ಲಿ ಇರಬೇಕು ಎಂದರೆ ಆಧ್ಯಾತ್ಮಿಕವಾದಂಥ ವಿಷಯದಿಂದ ಹಿಡಿದು ಆರ್ಥಿಕವಾದಂಥ, ಸಾಮಾಜಿಕವಾದಂಥ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಒಂದು ಹೊಸತನವನ್ನು ತರಬೇಕು ಎನ್ನುವಂಥ ಚಿಂತನೆ ಇವೊತ್ತು ರಾಷ್ಟ್ರಾಧ್ಯಕ್ಷರಲ್ಲಿ ಇರುವುದನ್ನು ಕಾಣುತ್ತಿದ್ದೇವೆ. ನಾನು ಏಕೆ ಈ ಮಾತನ್ನು ಉದಾಹರಿಸಿದೆ ಎಂದರೆ ಮಹರ್ಷಿ ಪತಂಜಲಿ ಯೋಗಸೂತ್ರದಲ್ಲಿ ಬರುವಂಥದ್ದರ ಬಗ್ಗೆ ರಾಷ್ಟ್ರಪತಿಗಳು ಮಾತನಾಡಿದ್ದಾರೆ. ಇತ್ತೀಚೆಗೆ ಮೊನ್ನೆ ಮೊನ್ನೆ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್‌ನಲ್ಲಿ ವಸುದೈವ ಕುಟುಂಬಕಂ ಕಾರ್ಯಕ್ರಮಕ್ಕೆ ಅವರು ಬಂದಾಗ, ಅವರು ಮಾತನಾಡಿರುವುದನ್ನು ನಾವು ಕೇಳಿದ್ದೇವೆ. ಈ ದೇಶದ ಒಂದು ಆತ್ಮ ಎಲ್ಲಿದೆ? ಅದು ಆಧ್ಯಾತ್ಮಿಕ ವಿಷಯದಲ್ಲಿದೆ. ಹೀಗಾಗಿ ಆಧ್ಯಾತ್ಮಿಕವಾದಂಥ ಆ ಆತ್ಮಕ್ಕೆ ನಾವು ಯೋಗ್ಯವಾದಂಥ ಸಂಸ್ಕಾರವನ್ನು ಕೊಟ್ಟು ನಾವು ಅದನ್ನು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅವರು ಆ ಶಕ್ತಿ ಸದ್ಬಳಕೆಯಾಗುವಂತೆ ಒಂದು ಪ್ರೇರಣೆಯನ್ನು ನೀಡಬೇಕಾದಂಥ ಕೆಲಸವನ್ನು ನಮ್ಮ ರಾಷ್ಟ್ರಾಧ್ಯಕ್ಷರು ಮಾಡುತ್ತಿದ್ದಾರೆ. ಹೀಗೆಯೇ ಇನ್ನೂ ಅನೇಕರು ಮಾಡುತ್ತಿದ್ದಾರೆ. ಹೀಗಾಗಿ ಇವೊತ್ತು ಎಲ್ಲವನ್ನು ಒಟ್ಟಾಗಿ, ನಮ್ಮ ದೇಶದ ಭವಿಷ್ಯವನ್ನು 2020ರಲ್ಲಿ ಅಭಿವೃದ್ಧಿ ಹೊಂದಿದ ದೇಶವಾಗಿ ಮಾತ್ರವಲ್ಲ ಇಡೀ ಜಗತ್ತಿಗೇ ಮಾರ್ಗದರ್ಶಕವಾದಂಥ ರೀತಿಯಲ್ಲಿ ಭಾರತವನ್ನು ರೂಪಿಸುವಂಥ ಶಕ್ತಿ ಸಾಮರ್ಥ್ಯ ನಮ್ಮ ಜನತೆಯಲ್ಲಿದೆ ಎನ್ನುವಂಥ ವಿಶ್ವಾಸವನ್ನು ಮೂಡಿಸುವಂಥ ಪ್ರಯತ್ನವಾಗುತ್ತಿರುವುದನ್ನು ನಾವು ಕಂಡಿದ್ದೇವೆ. ಹೀಗಾಗಿ ನಮಗೆ ಶಕ್ತಿ ಇದೆ, ನಮಗೆ ಸಾಮರ್ಥ್ಯ ಇದೆ. ಆ ಸಾಮರ್ಥ್ಯವನ್ನು ಓರೆಗಲ್ಲಿಗೆ

ಹಚ್ಚಿ, ಆ ಶಕ್ತಿ ಸಾಮರ್ಥ್ಯವನ್ನು ನಮ್ಮ ಮುಂದೆ ಇರುವಂಥ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಒಂದು ಸವಾಲವನ್ನಾಗಿ ತೆಗೆದುಕೊಂಡು ನಾವು ಮುನ್ನಡೆಯುವುದಕ್ಕೆ ಬೇಕಾಗಿರುವಂಥ ಒಂದು ಆತ್ಮವಿಶ್ವಾಸವನ್ನು ಮೂಡಿಸುವಂಥ ಕಾರ್ಯಕ್ರಮಗಳು ಆಗುತ್ತಿರಬೇಕು. ಅದು ರಾಷ್ಟ್ರಪತಿಗಳಿಂದ ಈ ಸದನದಲ್ಲಿ ಆಗಿರುವುದರ ಬಗ್ಗೆ ಮತ್ತೊಮ್ಮೆ ನಾನು ನನ್ನ ಸಂತೋಷವನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ರಾಷ್ಟ್ರಪತಿಯವರು 11 ಅಂಶಗಳನ್ನು ಧ್ಯೇಯ ವಾಕ್ಯಗಳು ಎಂದು ಹೇಳಬಹುದು, ಸೂತ್ರಗಳು ಎಂದು ಹೇಳಬಹುದು, ಆ ರೀತಿಯಲ್ಲಿ 11 ಅಂಶಗಳನ್ನು ನಮ್ಮ ಮುಂದೆ ರಾಷ್ಟ್ರಪತಿಗಳು ಪ್ರಸ್ತಾಪಿಸಿದ್ದಾರೆ. ನಾನು ಬೆಳಿಗ್ಗೆಯಿಂದ ಅನೇಕರು ಮಾತನಾಡುವುದನ್ನು ನೋಡುತ್ತಿದ್ದೇನೆ. ನಮ್ಮ ಸರ್ಕಾರದ ಜವಾಬ್ದಾರಿ ಎಂದು ನಾವು ಅಷ್ಟಕ್ಕೇ ಇದನ್ನು ಸೀಮಿತಗೊಳಿಸಿ ಕೊಳ್ಳಬಾರದು. 11 ಅಂಶಗಳನ್ನು ಅವರೇನು ಪ್ರಸ್ತಾಪಿಸಿದ್ದಾರೆ ಇದು ಸರ್ಕಾರದ ಜವಾಬ್ದಾರಿ ಮಾತ್ರ ಅಲ್ಲ, ಇದರೊಳಗೆ ಖಾಸಗಿ ಸಂಘ ಸಂಸ್ಥೆಗಳ ಖಾಸಗಿ ಕ್ಷೇತ್ರದಲ್ಲಿರುವಂಥವರ ಕೊಡುಗೆಯೂ ಬಹಳ ದೊಡ್ಡದಾಗಿದೆ. ಇವರುಗಳೂ ಕೂಡ ದೊಡ್ಡ ಕೊಡುಗೆಯನ್ನು ಕೊಡಬೇಕಾದ ಅಗತ್ಯತೆಯೂ ಇದೆ. ಇವರುಗಳೂ ಕೂಡ ದೊಡ್ಡ ಕೊಡುಗೆಯನ್ನು ಕೊಡಬೇಕಾದ ಅಗತ್ಯತೆಯೂ ಇದೆ. ಸರ್ಕಾರವೂ ಅದಕ್ಕೆ ಬೇಕಾಗಿರತಕ್ಕಂಥ ಪ್ರಯತ್ನವನ್ನು ಮಾಡಲೇಬೇಕು. ನಮ್ಮ ಮೇಲೆ ಇರುವಂಥ ಜವಾಬ್ದಾರಿಯಿಂದ ನಾವ್ಯಾರೂ ನುಣುಚಿಕೊಳ್ಳುವುದಕ್ಕೆ ಆಗುವುದಿಲ್ಲ. ಅದರಿಂದ ಜಾರಿಕೊಳ್ಳುವುದಕ್ಕೂ ಆಗುವುದಿಲ್ಲ. ಆ ರೀತಿ ಆಗಲೂಬಾರದು. ನಾವು ಅದನ್ನು ಅರ್ಥಪೂರ್ಣವಾಗಿ, ಜವಾಬ್ದಾರಿಯುತವಾಗಿ ಈ 11 ಅಂಶಗಳ ಬಗ್ಗೆ ನಾವು ಯಾವ ರೀತಿಯಲ್ಲಿ ಮುನ್ನಡೆಯಬೇಕು ಎಂಬ ಬಗ್ಗೆ ಸರಿಯಾದ ಯೋಜನೆಯನ್ನು ಮಾಡಬೇಕಾದಂಥ ಒಂದು ಅಂಶ ಇದ್ದೇ ಇದೆ. ಆದರೆ ಅದಕ್ಕಿಂತಲೂ ಹೆಚ್ಚಾಗಿ ಖಾಸಗಿಯವರ ಸಹಭಾಗಿತ್ವ ಬಹಳ ದೊಡ್ಡ ಪ್ರಮಾಣದಲ್ಲಿ ಬೇಕಾಗಿದೆ. ಅಧ್ಯಕ್ಷರೆ, ಕರ್ನಾಟಕ ಶಿಕ್ಷಣ ಕ್ಷೇತ್ರದಲ್ಲಿ ಬಹಳ ಮುಂದೆ ಇದೆಯೆಂದು ಹೆಸರಿದೆ ಏಕಿದೆ? ಖಾಸಗಿಯವರ ಸಹಭಾಗಿತ್ವ ಇದರಲ್ಲಿ ಇದೆ. ಇವೊತ್ತು ಐ.ಟಿ. ಕ್ಷೇತ್ರದಲ್ಲಿ ನಾವೇನು ಮಾಡುತ್ತಿದ್ದೇವೆ ಸರ್ಕಾರ ಐ.ಟಿ. ಕ್ಷೇತ್ರದಲ್ಲಿ ಖಾಸಗಿ ಕ್ಷೇತ್ರದವರು ಇವೊತ್ತು ಇಡೀ ಜಗತ್ತಿಗೇ ಭಾರತ, ಭಾರತದಲ್ಲಿ ಕರ್ನಾಟಕ, ಕರ್ನಾಟಕದಲ್ಲಿ ಬೆಂಗಳೂರು ಗೊತ್ತಾಗುವಂತೆ ಖಾಸಗಿಯವರು ಮಾಡಿದ್ದಾರೆ. ಹೀಗಾಗಿ ಖಾಸಗಿ ಕ್ಷೇತ್ರದವರ ಬಹಳ ದೊಡ್ಡ ಪ್ರಮಾಣದ ಸಹಕಾರ ಈ 11 ಅಂಶಗಳನ್ನು ಜಾರಿಗೆ ತರುವುದಕ್ಕೆ ಬೇಕಾಗಿದೆ. ಹೀಗಾಗಿ ನಾವು ಸರ್ಕಾರವಾಗಿ ನಮ್ಮ ಇಲಾಖೆಗಳ ವತಿಯಿಂದ ಏನೇನು ಆಗಬೇಕು ಎಂಬ ಬಗ್ಗೆ

ಜವಾಬ್ದಾರಿಯುತವಾಗಿ ಯೋಚನೆ ಮಾಡುವುದರ ಜೊತೆಯಲ್ಲಿಯೇ ಖಾಸಗಿಯವರ ಸಹಭಾಗಿತ್ವವನ್ನು ಹೇಗೆ ಪಡೆಯಬೇಕು ಎನ್ನುವ ಬಗ್ಗೆ ಕಡೆ ಯೋಜನೆಯನ್ನು, ನೀಲಿ ನಕ್ಷೆಯನ್ನು ಸಿದ್ಧಪಡಿಸಬೇಕಿದೆ. ಅಧ್ಯಕ್ಷರೆ, ಈ ಸಂಧರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದೇನೆ. ನಮ್ಮಲ್ಲಿ ಡೆವಲಪ್‌ಮೆಂಟ್ ಕಮಿಷನರ್‌ರವರ ಆಫೀಸ್ ಇದೆ. ಡೆವಲಪ್‌ಮೆಂಟ್ ಕಮಿಷನರ್ ಏನೇನು ಮಾಡುತ್ತಿದ್ದಾರೆ ಎನ್ನುವ ಬಗ್ಗೆ ನನಗಂತೂ ಸರಿಯಾದಂಥ ಜ್ಞಾನ ಇಲ್ಲ ಎಂದೇ ಹೇಳಿಕೊಳ್ಳುವುದು ಒಳ್ಳೆಯದು. ಏಕೆಂದರೆ ಡೆವಲಪ್‌ಮೆಂಟ್ ಕಮಿಷನರ್ ಅಲ್ಲದೇ ಇನ್ನೊಂದು ಯೋಜನಾ ಆಯೋಗ ಎಂದೂ ಕೂಡ ಇದೆ. ಕಳೆದ 58 ವರ್ಷದಲ್ಲಿ ಅದು ಯಾವ ರೀತಿಯಲ್ಲಿ ಏನು ಮಾರ್ಗದರ್ಶನವನ್ನು ಮಾಡಿದ್ದಾರೆ, ಅವರ ಮಾರ್ಗದರ್ಶನದ ಮಾತುಗಳನ್ನು ನಾವೆಷ್ಟು ಕೇಳಿದ್ದೇವೆ, ನಾವೆಷ್ಟು ಮುನ್ನಡೆದಿದ್ದೇವೆ, ಅದರ ಬಗ್ಗೆ ಯಾವ ರೀತಿಯಲ್ಲಿ ವಿಶ್ಲೇಷಣೆಗಳು ಆಗಬೇಕಿತ್ತು ಅದು ಆಯಿತೋ ಅಥವಾ ಆಗಿಲ್ಲವೋ ಎನ್ನುವ ಸಂಶಯಗಳು ನನ್ನಲ್ಲಿವೆ. ಏಕೆಂದರೆ ಯೋಜನಾ ಆಯೋಗ ಇರಬಹುದು ಅಥವಾ ಡೆವಲಪ್‌ಮೆಂಟ್ ಕಮಿಷನರ್ ಇರಬಹುದು ಅವರು ಎಷ್ಟಕ್ಕೆ ಸೀಮಿತವಾಗಿದ್ದಾರೆ, ಅವರನ್ನು ಇನ್ನಷ್ಟು ಹೆಚ್ಚು ಸೀಮಿತಗೊಳಿಸಿ ಕೊಳ್ಳುವುದಕ್ಕೆ ಪ್ರಯತ್ನಗಳು ಏನು ನಡೆಯುತ್ತಿದೆ ಎನ್ನುವುದನ್ನು ನೋಡಿದರೆ, ಅವರು ನಮ್ಮ ರಾಜ್ಯಕ್ಕೆ ಸರಿಯಾದಂಥ ಹಾಗೂ ಸಮರ್ಥವಾದಂಥ ರೀತಿಯಲ್ಲಿ ಒಂದು ಧಿಕ್ಕನ್ನು ಕೊಡಬಹುದು ಎನ್ನುವಂಥ ವಿಶ್ವಾಸವನ್ನು ಇನ್ನಷ್ಟು ಹೆಚ್ಚು ಜಾಗೃತವನ್ನು ನಾವು ಮಾಡಬೇಕಾಗಿದೆ. ಹೀಗಾಗಿ ನಾನು ಈ ಸಂದರ್ಭದಲ್ಲಿ ನಾನು ಹೇಳಬಯಸುವುದು ಏನೆಂದರೆ ನಾವು ಈ ಸದನದ ಮೂಲಕ ಡೆವಲಪ್‌ಮೆಂಟ್ ಕಮಿಷನರ್‌ರವರಿಗೆ ಹೇಳೋಣ, ನಾವು ಈ ಸದನದ ಮೂಲಕ ಯೋಜನಾ ಇಲಾಖೆಯವರಿಗೆ ಹೇಳೋಣ, ನಾವು ಈ ಸದನದ ಮೂಲಕ ಹೇಳೋಣ, ಈ 11 ಇಲಾಖೆಗಳಿಗೆ ಸಂಬಂಧಪಟ್ಟಂಥ ಇಲಾಖಾ ಅಧಿಕಾರಿಗಳಿಗೆ, ಟೂರಿಸಂ ಇದೆ, ಜವಳಿ ಇದೆ, ಹೀಗೆ 11 ಅಂಶಗಳಿಗೂ ಇಲಾಖೆಗಳು ಇವೆ. ರಾಷ್ಟ್ರಪತಿಗಳು 11 ಅಂಶಗಳ ಬಗ್ಗೆ ಹೇಳಿರುವಾಗ ಆ ಇಲಾಖೆಗಳು ಏನು ಮಾಡಿದ್ದಾರೆ? ಆ ಇಲಾಖಾಧಿಕಾರಿಗಳಿಗೆ ಏನಾದರೂ ಸ್ವಲ್ಪ ಜಾಗೃತಿ ಬಂದಿದೆಯೋ, ನಮ್ಮ ಇಲಾಖೆ ಬಗ್ಗೆ ರಾಷ್ಟ್ರಪತಿಗಳು ಭಾಷಣ ಮಾಡಿದ್ದಾರೆ ಎನ್ನುವಂಥದಾದರೂ ಅವರಿಗೆ ಅನ್ನಿಸಿದೆಯೋ ಅಥವಾ ಅನ್ನಿಸಿಲ್ಲವೋ ಎಂದು ನಾವು ಯೋಚನೆ ಮಾಡಬೇಕಾಗಿದೆ. ಈಗಾಗಲೇ ನನ್ನ ಸ್ನೇಹಿತರು ಮಾತನಾಡುವಾಗ ಹೇಳಿದರು. ಒಬ್ಬ ರಾಜ ನಮ್ಮ ದೇಶವನ್ನು ನಾವು

ಈ ರೀತಿಯಲ್ಲಿ ಅಭಿವೃದ್ಧಿ ಪಡಿಸುತ್ತೇವೆ ಎಂದು ಹೇಳಿದ ತಕ್ಷಣ ಹೇಗೆ ಎಲ್ಲಾ ಇಲಾಖೆಗಳವರು ಜಾಗೃತಗೊಂಡವು ಎಂದು ಹೇಳಿದರು. ಅವು ತಮ್ಮ ತಮ್ಮ ಮುಂದಿನ ಭವಿಷ್ಯದ ನೀಲಿ ನಕ್ಷೆಯನ್ನು ಹೇಗೆ ಸಿದ್ಧಪಡಿಸಿಕೊಂಡವು ಎಂಬುದನ್ನು ಉಲ್ಲೇಖ ಮಾಡಿದರು. ಆದರೆ ನಾವು ಎಲ್ಲಿದ್ದೇವೆ? ನಮಗೆ ಇಲ್ಲಿ ರಾಷ್ಟ್ರಪತಿಗಳು ಬಂದು ಭಾಷಣ ಮಾಡಿ ಹೋಗಿದ್ದಷ್ಟಕ್ಕೇ ನಾವು ಕೇಳಿಕೊಂಡಿದ್ದೇವೋ ಅಥವಾ ನಮ್ಮ ಇಲಾಖೆಯ ಎಲ್ಲಾ ಮುಖ್ಯಸ್ಥರು ಮತ್ತು ಅಧಿಕಾರಿಗಳು ಅದಕ್ಕೆ ಬೇಕಾಗಿರುವಂಥ ರೀತಿಯಲ್ಲಿ ಏನಾದರೂ ನೀಲಿನಕ್ಷೆಯನ್ನು ಸಿದ್ಧಪಡಿಸಿದ್ದಾರೋ, ಇಲ್ಲವೋ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ನಾವು ಈ ಸದನದಲ್ಲಿ ಮುಂದಿನ ಒಂದು ತಿಂಗಳಲ್ಲಿ, ಎರಡು ತಿಂಗಳಲ್ಲಿ, ಆ ಎಲ್ಲಾ ಡೆವಲಪ್‌ಮೆಂಟ್ ಕಮಿಷನರ್ ಇರಬಹುದು, ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಇರಬಹುದು, 11 ಅಂಶಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಇಲಾಖೆಗಳವರು ಮುಂದಿನ ಹತ್ತು ವರ್ಷಗಳಲ್ಲಿ ನಮ್ಮದು ನೀಲಿ ನಕ್ಷೆ ಇದು, ಇದಕ್ಕೆ ಹಣಕಾಸಿನ ಇಲಾಖೆಯಿಂದ ಇಷ್ಟು ಹಣ ಬಿಡುಗಡೆ ಆಗಬೇಕು, ಇದಕ್ಕೆ ಬೇರೆ ಬೇರೆ ಇಲಾಖೆಗಳವರಿಂದ ಇಂಥಿಂಥ ಸಹಕಾರ ನಮಗೆ ಬೇಕು ಎನ್ನುವಂಥ ನೀಲಿನಕ್ಷೆಯನ್ನು ಇಡಲಿ. ನಾವು ಅದಕ್ಕೆ ಸದನದ ಮೂಲಕ ಬದ್ಧರಾಗೋಣ. ನಾವ್ಯಾರೂ ಮನುಷ್ಯರಾಗೇ ಇರುವುದು ಶಾಶ್ವತವಲ್ಲ ಎಂದು ನಮಗೆಲ್ಲರಿಗೂ ಗೊತ್ತಿದೆ. ಇನ್ನು ಈ ಸ್ಥಾನಮಾನಗಳು ಎಷ್ಟು ಶಾಶ್ವತ ಎಂಬುದು ನಮಗೆಲ್ಲರಿಗೂ ಗೊತ್ತಿರುವಂಥ ಸಂಗತಿ. ಆದರೆ ನಮ್ಮ ಅವಧಿಯೊಳಗೆ ರಾಜ್ಯಕ್ಕೆ, ರಾಜ್ಯದ ಮುಂದಿನ ಹತ್ತು, ಹದಿನೈದು ವರ್ಷಗಳ ಭವಿಷ್ಯವನ್ನು ನಿರ್ಧರಿಸುವುದಕ್ಕೆ ಅತ್ಯಂತ ಯೋಗ್ಯ ನಿರ್ಣಯವನ್ನು ನಾವು ತೆಗೆದು ಕೊಂಡಿದ್ದೇವೆ ಎನ್ನುವಂಥ ಗೌರವಕ್ಕೆ ಪಾತ್ರರಾಗುವಂಥ ರೀತಿಯಲ್ಲಿ ನಾವು ನಮ್ಮ ಈ ಸದನದಲ್ಲಿ ಒಂದು ನಿರ್ಣಯವನ್ನು ಅಂಗೀಕಾರ ಮಾಡೋಣ. ಮತ್ತು ಅದನ್ನು ಅನುಷ್ಠಾನಗೊಳಿಸುವುದಕ್ಕೆ ಜವಾಬ್ದಾರಿಯನ್ನು ನಿಶ್ಚಯ ಮಾಡೋಣ. ಆ ರೀತಿ ಮಾಡಿಕೊಂಡಾಗ ಮಾತ್ರ ಇಲ್ಲಿ ರಾಷ್ಟ್ರಪತಿಗಳು ಬಂದು ಮಾಡಿರುವಂಥ ಭಾಷಣಕ್ಕೆ ಒಂದು ಅರ್ಥ ಬರುತ್ತದೆ. ಅದನ್ನು ಬಿಟ್ಟು ನಮಗೆ ಇಲ್ಲಿ ಮಾತನಾಡುವುದಕ್ಕೆ ಸಂದರ್ಭ ಸಿಕ್ಕಿದೆ ಎಂದು ಹೇಳಿ ಕೇವಲ ಮಾತನಾಡಿ ಹೋಗುವುದಕ್ಕೆ ಸೀಮಿತವಾಗಬಾರದು. ಹೀಗಾಗಿ ಇಲಾಖಾಧಿಕಾರಿಗಳ ಮೇಲೆ, ಪ್ಲಾನಿಂಗ್ ಮತ್ತು ಡೆವಲಪ್‌ಮೆಂಟ್ ಕಮಿಷನರ್ ಮೇಲೆ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ಸರ್ಕಾರದಲ್ಲಿ ಸ್ಪಷ್ಟವಾಗಿ ಆ ಅಧಿಕಾರಿಗಳಿಗೆ ಟಾರ್ಗೆಟ್ ಎನ್ನುವ ರೀತಿಯಲ್ಲಿ ಫಿಕ್ಸ್ ಮಾಡಿ ಅದು ಒಂದು ತಿಂಗಳೋ, ಎರಡು

ತಿಂಗಳೊಳಗೆ ಅವರು ತಮ್ಮ ಇಲಾಖೆಯ ಅಥವಾ ಈ ವಿಭಾಗದಲ್ಲಿ ಮುಂದೆ ಹೇಗೆ ಮುನ್ನಡೆಯಬೇಕು ಎನ್ನುವ ಬಗ್ಗೆ ಗುರಿಯನ್ನು ನಿಶ್ಚಯ ಮಾಡಿಕೊಂಡು ಆ ನೀಲಿ ನಕ್ಷೆಯನ್ನು ಇಟ್ಟು ನಾವು ಈ ಸದನದಲ್ಲಿ ಅದನ್ನು ಅಂಗೀಕಾರ ಮಾಡುವ ರೀತಿಯಲ್ಲಿ ಆಗಬೇಕು.

ಅಧ್ಯಕ್ಷರು: ಮಾನ್ಯ ಕಾಗೇರಿಯವರೆ, ಘನತೆವೆತ್ತ ರಾಷ್ಟ್ರಪತಿಗಳು ಏನು ಭಾಷಣ ಮಾಡಿ ಹೋದರು. ಅನಂತರ ಆಗ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಧರ್ಮಸಿಂಗ್‌ರವರು ಎಲ್ಲಾ ಇಲಾಖೆಗಳಿಗೆ ಈ ಬಗ್ಗೆ ಚಿಂತನೆ ಮಾಡುವುದಕ್ಕೆ ಸರ್ಕ್ಯುಲರ್ ಕಳುಹಿಸಿದ್ದಾರೆ. ಅದು ಆ ಮೇಲೆ ನಾನು ಮತ್ತು ಸಭಾಪತಿಗಳು ಏನು ಈ 11 ಸೂತ್ರಗಳಿವೆ ಅದಕ್ಕೆ ಸಂಬಂಧಪಟ್ಟ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳನ್ನು ಕರೆದಿದ್ದೆವು. ಕೆಲವು ಮಂತ್ರಿಗಳೂ ಬಂದಿದ್ದರು, ಕೆಲವು ಮಂತ್ರಿಗಳು ಬಂದಿರಲಿಲ್ಲ. ಅವರನ್ನೆಲ್ಲ ಕರೆದಿದ್ದೆವು. ರಾಷ್ಟ್ರಪತಿಗಳು ಬಂದ ಭಾಷಣ ಮಾಡಿ ಹೇಳಿರುವ 11 ಸೂತ್ರಗಳ ಬಗ್ಗೆ ಅವರುಗಳು ಸಾಕಷ್ಟು ವರ್ಕ್ ಮಾಡಿದ್ದಾರೆ. ಈಗ ಬಂದಿರತಕ್ಕಂಥ ಹೊಸ ಸರ್ಕಾರ ಅದರ ಬಗ್ಗೆ ಸ್ಪಷ್ಟತೆ ಹಾಗೂ ಸ್ಪಷ್ಟ ಕಾರ್ಯಕ್ರಮವನ್ನು ಕೊಡತಕ್ಕ ಕೆಲಸ ಮಾಡುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಆ ರೀತಿ ಪ್ರಯತ್ನಗಳು ಆಗಿದ್ದರೆ ಬಹಳ ಒಳ್ಳೆಯದು. ನಾನು ಅದನ್ನು ಸ್ವಾಗತಿಸುತ್ತೇನೆ. ಹೊಸ ಸರ್ಕಾರ ಒಳ್ಳೆಯ ರೀತಿಯಲ್ಲಿ ಹೆಜ್ಜೆ ಇಟ್ಟಿರುವುದನ್ನು ನಾವು ಕಾಣುತ್ತಿದ್ದೇವೆ. ರಾಷ್ಟ್ರಪತಿಗಳ ಭಾಷಣದ ಮೇಲೆ ಚರ್ಚೆ ಮಾಡುವುದಕ್ಕಾಗಿಯೇ ಈ ಅಧಿವೇಶನವನ್ನು ಕರೆದಿರುವುದರಿಂದ ಹೊಸ ಸರ್ಕಾರ ಆ 11 ಸೂತ್ರಗಳ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದಕ್ಕೆ ಬದ್ಧವಾಗಿದೆ ಎನ್ನುವುದೇ ಇದರ ಸಂದೇಶವಾಗಿದೆ. ಹೀಗಾಗಿ ನಾವು ನಿಶ್ಚಿತವಾಗಿ ಈ ಕಾರ್ಯ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಬೇಕಾಗಿರತಕ್ಕಂಥ ಪ್ರಯತ್ನವನ್ನು ಮಾಡಬೇಕಾಗಿದೆ. ಮತ್ತೆ ಇದನ್ನು ಪ್ರತ್ಯೇಕವಾಗಿ ಇದನ್ನು ಮಾನಿಟರ್ ಮಾಡಬೇಕು. ಸರ್ಕಾರಗಳು ಯಾವ ಯಾವ ರೀತಿಯಲ್ಲಿ ಬದಲಾಗುತ್ತಿರುತ್ತವೆ ಎನ್ನುವಂಥದ್ದು ನಮಗೆ ಗೊತ್ತಿರುವಂಥ ಸಂಗತಿ. ನಲವತ್ತು ತಿಂಗಳು ಏನೂ ಆಗುವುದಿಲ್ಲ, ಮುಂದಿನ ಐದತ್ತು ವರ್ಷಗಳು ನಮ್ಮದೇ ಸರ್ಕಾರ ಇರುತ್ತವೆ ಎನ್ನುವಂಥ ವಿಶ್ವಾಸದಲ್ಲಿ ನಾವು ಇದ್ದರೂ, ಕೂಡ ಇದನ್ನು ಮಾನಿಟರ್ ಮಾಡುವಂಥ ಸಂಗತಿಗಳೂ ಕೂಡ ಅಗತ್ಯವಿದೆ. ಹೀಗಾಗಿ ಈ ಎಲ್ಲಾ ಇಲಾಖೆಗಳಿಂದ ಏನೇನು ಕಾರ್ಯ ಯೋಜನೆಯನ್ನು, ನೀಲಿ ನಕ್ಷೆಯನ್ನು ಸಿದ್ಧಪಡಿಸಬೇಕು, ಸಿದ್ಧಪಡಿಸಿದೆ, ಅದನ್ನು ಈ ಸದನದ ಮೂಲಕ ಇನ್ನಷ್ಟು ಹೆಚ್ಚು

ವಿಸ್ತಾರವಾಗಿ ಚರ್ಚೆಯನ್ನು ಮಾಡಿ ಅದನ್ನು ಮತ್ತೆ ಮಾನಿಟರ್ ಮಾಡುವುದಕ್ಕೆ ಬೇಕಾಗಿರುವಂಥ ಅಗತ್ಯ ಜವಾಬ್ದಾರಿಗಳನ್ನೂ ಸಹ ಇಲ್ಲಿರುವವರಿಗೆ ನಿಶ್ಚಯ ಮಾಡಿ ಅವರು ತಿಂಗಳಿಗೆ, ಎರಡು ತಿಂಗಳಿಗೆ ಒಂದು ಸಲ ರಿವ್ಯೂ ಮಾಡಿ ಬೇರೆ ಬೇರೆ ಇಲಾಖೆಗಳವರ ಸಹಕಾರ ತೆಗೆದುಕೊಂಡು ಮುಂದೆ ಹೋಗುವುದಕ್ಕೆ, ಕೇಂದ್ರ ಸರ್ಕಾರದ ಸಹಕಾರ ಹೇಗೆ ತೆಗೆದುಕೊಳ್ಳಬೇಕು. ಬೇರೆ ಬೇರೆ ಹಣಕಾಸಿನ ಇಲಾಖೆಗಳ ಸಹಕಾರ ಹೇಗೆ ತೆಗೆದುಕೊಳ್ಳಬೇಕು, ಇತ್ಯಾದಿಗಳ ಬಗ್ಗೆ ಯೋಚನೆ ಮಾಡಿ ಮುನ್ನಡೆಯುವಂಥ ಅಗತ್ಯತೆ ಇದೆ ಎನ್ನುವಂಥ ಮಾತನ್ನು ನಾನು ಹೇಳಬಯಸುತ್ತೇನೆ. ಇವೊತ್ತು ಒಂದೊಂದು ವಿಷಯದ ಬಗ್ಗೆ ನಾನು ಮಾತನಾಡುವುದಕ್ಕೆ ಹೊರಟರೂ ನಾನು ಎಷ್ಟು ಹೊತ್ತು ಬೇಕಾದರೂ, ವಿಸ್ತಾರವಾಗಿ ಮಾತನಾಡಬಹುದು. ಟೂರಿಸಂ ಬಗ್ಗೆ ಹೇಳುವುದಾದರೆ, ನಾನು ಉತ್ತರ ಕನ್ನಡ ಜಿಲ್ಲೆಯಿಂದ ಬಂದಂಥವನು. ನಮ್ಮ ಕಾರವಾರ ಜಿಲ್ಲೆ ಪ್ರವಾಸೋದ್ಯಮಕ್ಕೆ ಅತ್ಯಂತ ಹೇಳಿಮಾಡಿಸಿದ ಜಿಲ್ಲೆಯಾಗಿದೆ. ಕರ್ನಾಟಕವೇ ಕಾಶ್ಮೀರ ಎಂದು ನಾವು ಕರೆಯುತ್ತೇವೆ. ಅದರಲ್ಲೂ ಉತ್ತರ ಕನ್ನಡ ಜಿಲ್ಲೆ, ಕೊಡಗು ಅಂಥದ್ದು ಕಾಶ್ಮೀರವೇ. ಅಲ್ಲಿ ಹಿಮ ಬೀಳುವುದಿಲ್ಲವೆನ್ನುವುದನ್ನು ಬಿಟ್ಟರೆ ಎಲ್ಲಾ ರೀತಿಯ ಸೌಂದರ್ಯಗಳು ಪ್ರವಾಸೋದ್ಯಮಕ್ಕೆ ಬೇಕಾಗಿರುವಂತಹ ಎಲ್ಲಾ ರೀತಿಯ ಅಗತ್ಯತೆಗಳು ಅಲ್ಲಿದೆ. ಅಲ್ಲಿ ಪೊಟೆನ್ಸಿಯಲಿಟಿ ಇದೆ. ಆದರೆ ನಾವು ಅದರ ಬಳಕೆಯನ್ನು ಹೇಗೆ ಮಾಡಿಕೊಳ್ಳುತ್ತಿದ್ದೇವೆ? ನಮ್ಮ ಕಡೆ ಸಮುದ್ರ ಇದೆ. ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡದ ಕಡೆ ಸಮುದ್ರ ಇದೆ. ಕರಾವಳಿ ಪ್ರವಾಸೋದ್ಯಮದ ಬಗ್ಗೆ ನಮ್ಮ ನೀಲಿ ನಕ್ಷೆ ಏನು? ನಮ್ಮಲ್ಲಿ ಒಳ್ಳೊಳ್ಳೆಯ ದೇವಸ್ಥಾನಗಳು ಇರುವಂತಹ ಪುಣ್ಯಕ್ಷೇತ್ರಗಳ ತಾಣಗಳು ಪ್ರವಾಸೋದ್ಯಮಕ್ಕೆ ತುಂಬಾ ಇವೆ. ಅದರ ಅಭಿವೃದ್ಧಿಗೆ ಹಾಗೂ ಅಲ್ಲಿ ನಮಗೆ ಬೇಕಾಗಿರುವಂತಹ ಸೌಲಭ್ಯಗಳನ್ನು ಮಾಡುವುದಕ್ಕೆ ಆಗಿದೆಯಾ? ಅದರ ಜೊತೆಯಲ್ಲಿ ಅರಣ್ಯದ ಮಧ್ಯದಲ್ಲಿ ನಡೆಯುತ್ತಿರುವಂತಹ ಪ್ರವಾಸೋದ್ಯಮದ ಒಂದು ಭಾಗ ಇದೆ. ಅದರಲ್ಲಿ ವನ್ಯಜೀವಿ ವಿಷಯಗಳು ಅಥವಾ ಇನ್ನಿತರ ಅರಣ್ಯದ ಬೇರೆ ಬೇರೆ ಸಂಗತಿಯಿರಬಹುದು. ಅದಕ್ಕೆ ನಾವೇನು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇನೆ? ಹೆರಿಟೇಜ್ ಸೆಂಟರ್ ಬನವಾಸಿಯಾಣದಂತಹ ಹಳೆಯ ಕಾಲದ ಅನೇಕ ರೀತಿಯ ಸಹಸ್ರ ಲಿಂಗದಂತಹ ಅನೇಕ ಕ್ಷೇತ್ರಗಳಿವೆ. ಇನ್ನು ಮಿರ್ಜಾನ್ ಕೋಟೆ ಇರಬಹುದು, ಬೇರೆ ಬೇರೆ ಅನೇಕ ಸಂಗತಿಗಳಿದೆ. ಆದರೆ ಅದರ ರಕ್ಷಣೆಗಾಗಿ ಅದರ ಅಭಿವೃದ್ಧಿಗಾಗಿ ನಾವೇನು ಮಹತ್ವವನ್ನು ಕೊಟ್ಟಿದ್ದೇವೆ. ನಾವು ನಮ್ಮ

ನಮ್ಮ ಸಮಿತಿಗಳಲ್ಲಿ ಪ್ರವಾಸಕ್ಕೆ ಹೋಗುವಂತಹವರು ಬೇರೆ ಬೇರೆ ರಾಜ್ಯದಲ್ಲಿ ಅಥವಾ ಇನ್ನೆಲ್ಲೋ ಹೋದಾಗ, ಅಲ್ಲಿ ನಮ್ಮನ್ನು ಕರೆದುಕೊಂಡು ಅಲ್ಲಿರುವಂತಹ ಸ್ಥಳಗಳನ್ನು ತೋರಿಸಿದಾಗ ಅದನ್ನು ನೋಡಿದಾಗ, ಅಬ್ಬಾ ನಮ್ಮ ಊರಿನಲ್ಲಿ ಇರುವಂತಹ ಸ್ಥಳ ಎಷ್ಟು ಒಳ್ಳೆಯದಾಗಿದೆ, ಇದನ್ನು ಅಭಿವೃದ್ಧಿ ಪಡಿಸಿದರೆ, ಎಷ್ಟು ಜನ ಬಂದು ನೋಡುತ್ತಿದ್ದರು ಎನ್ನುವಂತಹ ಭಾವನೆ ನಮ್ಮಲ್ಲೆಲ್ಲಾ ಬರುತ್ತದೆ. ಹಾಗಾಗಿ ಇವತ್ತು ಪ್ರವಾಸೋದ್ಯಮಕ್ಕೆ ಕರ್ನಾಟಕ ಸರ್ಕಾರ ನಾವು ವಿಶೇಷವಾದಂತಹ ಮಹತ್ವವನ್ನು ಕೊಡಬೇಕಾಗಿದೆ. ನಾನು ಬಜೆಟ್ ಅನ್ನು ನೋಡುತ್ತಿದ್ದಾಗ ನಮ್ಮ ಪ್ರವಾಸೋದ್ಯಮ ಇಲಾಖೆಗೆ ಇರುವುದು ಕೇವಲ 8 ರಿಂದ 10 ಕೋಟಿ ರೂಪಾಯಿಗಳು ಮಾತ್ರ, ಅದು ಯಾವುದಕ್ಕೆ ಸಾಲುತ್ತದೆ? ಅಲ್ಲಿ ಕೆಲಸ ಮಾಡುವಂತಹ ನೌಕರರಿಗೆ ಪಗಾರ ಕೊಡುವುದಕ್ಕೆ ಸಾಕಾಗುತ್ತದೆ. ನನ್ನ ಹತ್ತಿರ ಅವರ ವಿವರ ಇದೆ. ವಾರ್ಷಿಕ ವರದಿಯನ್ನು ನಾನು ನೋಡುತ್ತಿದ್ದೆ ಪ್ರವಾಸೋದ್ಯಮ ಬಗ್ಗೆ ಹೇಗೇಗಿದೆ ಎಂದು. 15 ಕೋಟಿ ರೂಪಾಯಿ; ಅದರಲ್ಲಿ ನಾವು ಏನು ಮಾಡಬಹುದು? ಕೇರಳದಲ್ಲಿ 180 ಕೋಟಿ ರೂಪಾಯಿ ಪ್ರವಾಸೋದ್ಯಮಕ್ಕೆ ಇದೆ. ನಮ್ಮ ಅಂಕಿಸಂಖ್ಯೆಗಳ ಪ್ರಕಾರ ನಮ್ಮ ದೇಶಕ್ಕೆ ಹತ್ತು ಜನ ಪ್ರವಾಸಿಗರು ಬಂದರೆ ಅದರಲ್ಲಿ ಎಂಟು ಜನ ಕೇರಳಕ್ಕೆ ಹೋಗಿ ಬರುತ್ತಾರೆ. ಆದರೆ ನಮ್ಮಲ್ಲಿ ಏನಾಗಿದೆ ಎಂದು? ಕರ್ನಾಟಕಕ್ಕೆ ಪ್ರವಾಸಿಗರು ಬರುವಂತಹ ಸಂಖ್ಯೆನೇ ಇಲ್ಲ. ಏಕಿಲ್ಲವೆಂದರೆ ಬರೀ ಭಾಷಣಗಳು ಪ್ರವಾಸೋದ್ಯಮದ ಬಗ್ಗೆ ಆಗಿದೆಯೇ ಹೊರತು, ಅದರ ಬಗ್ಗೆ ಕಾರ್ಯಯೋಜನೆಯಾಗಿಲ್ಲ. ಮಾನ್ಯ ತಿಲಕ್ ರವರದ್ದು ಒಂದು ಮಾತು ನೆನಪು ಬರುತ್ತದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ತಿಲಕರೆಲ್ಲಾ ಸಕ್ರಿಯವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಭಾಗವಹಿಸಿ....

ಡಾ. ಎಂ.ಸಿ. ಸುಧಾಕರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಬಹಳ ಸರಿಯಾದ ರೀತಿಯಲ್ಲಿ ಹೇಳಿದರು. ನಮ್ಮಲ್ಲಿ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಮಾಡುತ್ತಿಲ್ಲ ಎನ್ನುವುದಕ್ಕೆ ಮೊನ್ನೆ ಒಂದೂವರೆ ತಿಂಗಳಲ್ಲಿ ರಾಜ್ಯದಲ್ಲಿ ನಡೆದಂತಹ ವಿದ್ಯಮಾನಗಳ ಬಗ್ಗೆ ಹೇಳುವುದಾದರೆ ವಿವಿಧ ಪಕ್ಷಗಳ ಶಾಸಕರು ಒಂದು ಕಡೆ ಗೋವಾ, ಒಂದು ಕಡೆ ಚೆನ್ನೈಗೆ ಹೋಗಿದ್ದೆ ಒಂದು ನಿದರ್ಶನ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾನು ತಿಲಕರ ಬಗ್ಗೆ ಹೇಳುತ್ತಿದ್ದೆ. ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ ಒಂದು ದಿನ ಅವರು ಕುಳಿತುಕೊಂಡಿದ್ದರಂತೆ. ಆಗ ಒಬ್ಬ

ಯುವಕ ಬಂದು ನಾನು ನಿಮ್ಮ ಹತ್ತಿರ ಸ್ವಲ್ಪ ಮಾತನಾಡಬೇಕು ಎಂದು ಹೇಳಿದರಂತೆ. ಆಯಿತು. ಮಾತನಾಡು, ಏನು ಎಂದು ಕೇಳಿದರಂತೆ. ಆಗ ಅವನು ಒಂದಿಷ್ಟು ಒಂದು ಹಾಳೆಯಲ್ಲಿ ಬರೆದುಕೊಂಡು ಬಂದು ಇದನ್ನು ನೀವು ಸ್ವಲ್ಪ ನೋಡಬೇಕು ಎಂದು ಹೇಳಿದಾಗ, ಅವರು ಏನು ಎಂದು ಕೇಳಿದರಂತೆ. ನಾವು ಸ್ವಾತಂತ್ರ್ಯವನ್ನು ಹೇಗೆ ಪಡೆಯಬೇಕು ಎನ್ನುವುದರ ಬಗ್ಗೆ ಇದರಲ್ಲಿ ಎಲ್ಲಾ ಸಲಹೆ ಇದೆ. ಆ ಸಲಹೆಯನ್ನು ಆ ಯುವಕ ತಿಲಕರಿಗೆ ಕೊಟ್ಟ. ಆದರೆ ಸ್ವಾತಂತ್ರ್ಯಕ್ಕೋಸ್ಕರ ಏನೇನು ಮಾಡಬೇಕು ಎಂದು ಇತ್ತು. ಆಗ ತಿಲಕರು ಹೇಳಿದರಂತೆ ಈ ನಾಲ್ಕಾಣಿ ತೆಗೆದುಕೊಂಡು ಹೋಗು, ಸ್ವಲ್ಪ ಆಫೀಮು ತಗೋ, ನಿನಗೆ ಇನ್ನು ಹೆಚ್ಚು ಹೊಸ ಹೊಸ ಐಡಿಯಾ ಬರುತ್ತದೆ, ಅದನ್ನು ಬರೆದುಕೊಂಡು ಕುಳಿತುಕೋ ಎಂದು ಹೇಳಿದರು. ನಂತರ ಅವರು ಮುಂದೆ ಹೇಳಿದರು, ಈ ರೀತಿ ಸಲಹೆ ಕೊಡುವಂತಹ ಅವಶ್ಯಕತೆ ನಮ್ಮ ದೇಶಕ್ಕೆ ಇಲ್ಲ. ಇವತ್ತು ನಮ್ಮ ದೇಶಕ್ಕೆ ಬೇಕಾಗಿರುವುದು ಸ್ವಾತಂತ್ರ್ಯಕ್ಕೋಸ್ಕರವಾಗಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳುವಂತಹ ಜನ ಬೇಕಾಗಿದೆ. ನೀನು ಅದಕ್ಕೆ ಸಿದ್ಧನಿದ್ದೀಯಾ ಬಾ ಇಲ್ಲಿ, ಈ ಹೋರಾಟಕ್ಕೆ ಆದರೆ ಈ ಸಲಹೆಯನ್ನು ಕೊಡುವಂತಹ ಅಗತ್ಯವಿಲ್ಲವೆಂದು ತಿಲಕರು ಹೇಳಿದರು. ಇವತ್ತು ಸಲಹೆಗಳು ಸಾಕಷ್ಟು ಇವೆ. ಆಗಲೇ ಹೇಳಿದಂತೆ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಆ ಸಾಮರ್ಥ್ಯ ಇದೆ. ಆದರೆ ನಮ್ಮ ನಮ್ಮ ಜವಾಬ್ದಾರಿಯಿಂದಾಗಿ ನಾವು ಅದನ್ನು ಅನುಷ್ಠಾನಗೊಳಿಸುವುದಕ್ಕೆ ಆ ಜವಾಬ್ದಾರಿಯನ್ನು ಹಾಗೂ ಕರ್ತವ್ಯವನ್ನು ನಾವು ನಿರ್ವಹಿಸುವುದಕ್ಕೆ ಎಷ್ಟು ಬದ್ಧರಾಗುತ್ತಿದ್ದೇವೆ ಎನ್ನುವಂತಹ ಆತ್ಮವಿಮರ್ಶೆಯನ್ನು ಮಾಡಿಕೊಳ್ಳಬೇಕಾಗಿದೆ. ಆಗ ಮಾಡಿದಾಗ ಮಾತ್ರ ಎಲ್ಲಾ ಕನಸುಗಳು ನನಸಾಗುವುದಕ್ಕೆ ಸಾಧ್ಯವಿದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ತಿಲಕ್‌ರವರ ಬಗ್ಗೆ ಬಹಳ ಉತ್ತಮವಾದಂತಹ ಉದಾಹರಣೆಯನ್ನು ಕೊಟ್ಟರು. ಆದರೆ ಅವರೂ ಕೂಡ ಕೇವಲ ಮನುಷ್ಯರಾಗಿದ್ರು. ಸಲಹೆ ವಿಚಾರದಲ್ಲಿ ಸಂಬಂಧಪಟ್ಟ ಹಾಗೆ ಹೇಳುವುದಾದರೆ. ಮಹಾತ್ಮಾ ಗಾಂಧಿಯವರು 1919ರಲ್ಲಿ ದಕ್ಷಿಣ ಆಫ್ರಿಕಾದಲ್ಲಿರುವ ಕರಿಯರ ವಿಚಾರದಲ್ಲಿ, ಒಂದು ಸಭೆಯನ್ನು ಏರ್ಪಾಡು ಮಾಡಿ ಪೂನಾದಲ್ಲಿ ನಡೆಸುವುದಿದ್ದು, ಅದರ ಅಧ್ಯಕ್ಷತೆಯನ್ನು ನೀವು ವಹಿಸಿಕೊಳ್ಳಬೇಕೆಂದು ಮಾನ್ಯ ತಿಲಕ್‌ರವರನ್ನು ಕೇಳಿಕೊಂಡರು. ಅದಕ್ಕೆ ಅವರು ಇಲ್ಲ, ಇಲ್ಲ, ನೀನಾಗಲೇ ಗೋಪಾಲ ಕೃಷ್ಣ ಗೋಖಲೆಯವರ ಹತ್ತಿರ ಹೋಗಿರುತ್ತೀಯಾ ಅವನು ಇದ್ದಲ್ಲಿ ನಾನು ಬರುವುದಿಲ್ಲ, ಆದ್ದರಿಂದ ನೀವು ಅವರನ್ನೇ ಕರೆದುಕೊಂಡು ಸಭೆಯನ್ನು ಮಾಡಿ ಎಂದು ಹೇಳುತ್ತಾರೆ. ಆಗ

ಗಾಂಧೀಜಿಯವರು ಮಾನ್ಯ ಗೋಪಾಲ ಕೃಷ್ಣ ಗೋಖಲೆಯವರ ಹತ್ತಿರ ಹೋಗುತ್ತಾರೆ. ತಿಲಕ್‌ರವರು ಇಲ್ಲದೆ ಇದ್ದರೆ ಸ್ವಾತಂತ್ರ್ಯ ಸಮರ ಏನೂ ಆಗುವುದಿಲ್ಲ. ನಾನು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಇಟ್ಟುಕೊಂಡು ನಾನು ಕೆಲಸ ಮಾಡತಕ್ಕಂಥವನು. ಆದುದರಿಂದ ಅಲ್ಲಿ ತಿಲಕ್‌ರವರೇ ಇರಬೇಕು, ಒಂದು ವೇಳೆ ತಿಲಕ್‌ರವರು ಒಪ್ಪಿದರೂ ನಾನು ಅಧ್ಯಕ್ಷತೆ ವಹಿಸುವುದಿಲ್ಲ. ಆದರೆ ಅಧ್ಯಕ್ಷರನ್ನಾಗಿ ಮಾಡುವುದಿದ್ದರೆ ಭಂಡಾರ್ಕರ್ ಅವರನ್ನು ಮಾಡಿ, ಆಗ ನಾವಿಬ್ಬರೂ ಬರುತ್ತೇವೆ ಎಂದು ಒಂದು ಸಲಹೆಯನ್ನು ಕೊಟ್ಟರಂತೆ, ಆ ಸಲಹೆ ಮೇಲೆ ನಮ್ಮ ಓರಿಯಂಟಲ್ ರೀಸರ್ಚ್ ಇನ್ಸಿಟಿಟ್ಯೂಷನ್‌ನ ಮಾನ್ಯ ಭಂಡಾರ್ಕರ್ ರವರನ್ನು ಅಧ್ಯಕ್ಷರನ್ನಾಗಿ ಮಾಡಿ ಸಭೆಯನ್ನು ಮಾಡಿದರಂತೆ. ಸಲಹೆಗಳೂ ಕೂಡ ಒಮ್ಮೊಮ್ಮೆ ಹೇಗಾಗುತ್ತವೆ ಎನ್ನುವುದಕ್ಕೆ ದೊಡ್ಡವರಲ್ಲಿ ಕೂಡ ಇಂತಹ ಸಣ್ಣತನಗಳು ಇರುತ್ತವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾನು ಪ್ರವಾಸೋದ್ಯಮವನ್ನು ಕುರಿತು ಮಾತನಾಡುವಾಗ, ನಾನು ನನ್ನ ಜಿಲ್ಲೆಯ ಬಗ್ಗೆ ಹೇಳಿದೆ. ಆದರೆ ಇಡೀ ರಾಜ್ಯದ ಬಗ್ಗೆ ಯೋಜನೆ ಮಾಡಿದಾಗ ಪ್ರವಾಸೋದ್ಯಮಕ್ಕೆ ಹೇಳಿ ಮಾಡಿಸಿರುವಂತಹ ರಾಜ್ಯ ನಮ್ಮದು. ಹಾಗಾಗಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಹಣಕಾಸಿನ ನೆರವನ್ನು ನಾವು ಕೊಡಬೇಕು. ಮಾನ್ಯ ಪ್ರವಾಸೋದ್ಯಮಕ್ಕೆ ಸಚಿವರು ಮೊನ್ನೆ ಡೆಲ್ಲಿಗೆ ಹೋಗಿ ನಮ್ಮ ರಾಜ್ಯಕ್ಕೆ 75 ಕೋಟಿ ರೂಪಾಯಿ ಬರಬೇಕಾಗಿರುವುದರ ಬಗ್ಗೆ ಅವರಿಗೆ ತಿಳಿಸಿ ಬಂದಿದ್ದಾರೆ. ಅದು ಒಂದು ಒಳ್ಳೆಯ ಪ್ರಯತ್ನ. ಆದರೆ ಪ್ರವಾಸೋದ್ಯಮಕ್ಕೆ ಖಾಸಗಿಯವರ ಸಹಭಾಗಿತ್ವದಲ್ಲೂ ಬಹಳ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ಸರ್ಕಾರದಲ್ಲಿ ಹೇಗೆ ಕೆಲಸಗಳು ಆಗುತ್ತವೆ ಎನ್ನುವುದರ ಬಗ್ಗೆ ನಾನು ಬಹಳ ನೋವಿನಿಂದ ಈ ಮಾತನ್ನು ಹೇಳಬೇಕಾಗಿದೆ. ನಾನು ವಿರೋಧ ಪಕ್ಷದಲ್ಲಿದ್ದಾಗಲೂ ಕೂಡ ಒಂದು ಮಾತನ್ನು ಹೇಳಿದೆ. ನಮ್ಮ ಅರಣ್ಯ ಇಲಾಖೆಯವರು ಅಭಿವೃದ್ಧಿಗೆ ಅವರು ಸಹಕರಿಸದೇ ಹೋದರೆ ನಮ್ಮ ಯಾವ ಕೆಲಸಗಳೂ ಕೂಡ ಅದರಲ್ಲೂ ವಿಶೇಷವಾಗಿ ಮಲೆನಾಡಿನ ಜಿಲ್ಲೆಗಳಲ್ಲಿ ಆಗುವುದಿಲ್ಲ. ಏಕೆಂದರೆ ನಮ್ಮಂತಹ ಜಿಲ್ಲೆಗಳಲ್ಲಿ 80 ಪರ್ಸೆಂಟ್ ಅರಣ್ಯ ಇದೆ. ನಾವು ಕಾಲು ಹೊರಗೆ ಇಟ್ಟರೆ ಕಾಡಿನಲ್ಲಿ ಇಡಬೇಕು ಆ ರೀತಿಯ ಪರಿಸ್ಥಿತಿ ನಮ್ಮದಿದೆ. "ಯಾಣ", ಇವತ್ತು ಜಗತ್ಪ್ರಸಿದ್ಧವಾದಂತಹ ಸ್ಥಳ. ಆ ಸ್ಥಳಕ್ಕೆ ನಡೆದು ಹೋಗುವಂತಹ ಒಂದು ರಸ್ತೆ ಇದೆ. (ಅಲ್ಲಿಗೆ ವಾಹನಗಳನ್ನೂ ಕೂಡ ತೆಗೆದುಕೊಂಡು ಹೋಗುವಂತಹ ರಸ್ತೆ

ಇದೆ.) ಅದಕ್ಕೆ ಎರಡು ಕಡೆಯಿಂದ ದಾರಿ ಇದೆ, ಒಂದು ಕುಮುಟಾ ಕಡೆಯಿಂದ ಹಾಗೂ ಇನ್ನೊಂದು ಬಾರಿ ಶಿರಸಿಯಿಂದ ಇದೆ. ಶಿರಸಿ ಕಡೆಯಿಂದ ಇನ್ನೂ ನಾಲ್ಕೈದು ಕಿಲೋಮೀಟರಿನ ರಸ್ತೆ ಆಗಬೇಕಾಗಿದೆ. ಇರುವಂತಹ ರಸ್ತೆಯ ಡಾಂಬರೀಕರಣಕ್ಕೆ ಹಾಗೂ ಹೀಗೂ ಮಾಡಿ 70 ಲಕ್ಷ ರೂಪಾಯಿಯನ್ನು ಬೇರೆ ಬೇರೆ ಯೋಜನೆಯಲ್ಲಿ ಮಂಜೂರು ಮಾಡಿಸಿದೆವು. ಆದರೆ ಕೆಲಸ ಪ್ರಾರಂಭ ಮಾಡುವುದಕ್ಕೆ ಹೋದರೆ, ಅರಣ್ಯ ಇಲಾಖೆಯವರು ನಿಲ್ಲಿಸಿ ಆರು ತಿಂಗಳಾಯಿತು. ಇವತ್ತು ಇವತ್ತು ಭವನದಲ್ಲಿ ಅದರ ಫೈಲ್ ಬಂದು ಬಿದ್ದಿದೆ. ಇರುವಂತಹ ರಸ್ತೆಗೆ ಡಾಂಬರೀಕರಣ ಮಾಡಿದರೆ ಒಂದು ಮರ ಕೂಡ ಹೋಗುವುದಿಲ್ಲ. ಇಲಾಖೆಗಳು ಹೇಗಿದೆ ಎಂದು ಯೋಚನೆ ಮಾಡೋಣ ಹೀಗಾದರೆ ಪ್ರವಾಸೋದ್ಯಮ ಹೇಗೆ ಅಭಿವೃದ್ಧಿಯಾಗಬೇಕು? ಹಾಗಾದರೆ ಯಾಣಕ್ಕೆ ಜನಗಳು ಹೇಗೆ ಬರಬೇಕು? ಇದು ನನ್ನ ಕ್ಷೇತ್ರದಲ್ಲಿ ಅನುಭವಿಸುತ್ತಿರುವಂತಹ ವಿಷಯ. ಇನ್ನು ರಾಜ್ಯದ ಉದ್ದಗಲದಲ್ಲಿ ಇರುವಂತಹ ವಿಚಾರಗಳನ್ನು ಕೇಳಿದರೆ ಒಬ್ಬೊಬ್ಬರದ್ದು ಉದಾಹರಣೆಗಳು ಇದೆ. ಆ ಫೈಲ್ ಅರಣ್ಯ ಭವನದಲ್ಲಿ ಬಿದ್ದಿದೆ, ಅದಕ್ಕೆ ಬೇಕಾದಂತಹ ಮಾಹಿತಿಗಳನ್ನು ತರಿಸಿ ಕೊಳ್ಳುತ್ತಿದ್ದಾರೆ. ಇವತ್ತು ಕ್ಲಿಯರ್ ಮಾಡುತ್ತೇವೆ, ನಾಳೆ ಕ್ಲಿಯರ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಅಂತರರಾಷ್ಟ್ರೀಯ ಮಟ್ಟದ ಪ್ರವಾಸಿಗರು ಬರುವಂತಹ ಒಂದು ಒಳ್ಳೆಯ ಕ್ಷೇತ್ರ. ಇನ್ನೊಂದು ಕಡೆಯಂತೂ ರಸ್ತೆಯಾಗಿಲ್ಲ. ಇಲ್ಲಿ ಎಲ್ಲಾ ರೀತಿಯ ಹಣಕಾಸಿನ ನೆರವನ್ನು ಕೊಟ್ಟರೆ ಒಂದು ಮರ ಕೂಡ ತೆಗೆಯದೆ ಇರುವಂತಹ ವಿಚಾರ ಇದ್ದರೂ ಸಹ ಅಲ್ಲಿ ರಸ್ತೆಯನ್ನು ಮಾಡುವುದಕ್ಕೆ ಇವತ್ತು ನಮಗೆ ಆಗುತ್ತಿಲ್ಲ. ಈ ರೀತಿಯಾದರೆ ಪ್ರವಾಸೋದ್ಯಮ ಕ್ಷೇತ್ರಗಳು ಹೇಗೆ ಅಭಿವೃದ್ಧಿಯಾಗುವುದು? ಪ್ರವಾಸೋದ್ಯಮಗಳು ಅಭಿವೃದ್ಧಿಯಾಗಬೇಕು ಎಂದರೆ ಮೂಲಭೂತವಾಗಿ ರಸ್ತೆಗಳು ಬೇಕೇ ಬೇಕು. ರಸ್ತೆಗಳು ಇಲ್ಲದೆ ಹೋದರೆ ಯಾರೂ ಪ್ರವಾಸಿಗರು ಬರುವುದೇ ಇಲ್ಲ. ಇವತ್ತು ಹೆಚ್ಚಾಗಿ ರೈಲ್ವೆ ಲೈನ್‌ಗಳು ಆಗಬೇಕು. ವಿಮಾನ ನಿಲ್ದಾಣಗಳು ಜಾಸ್ತಿಯಾಗಬೇಕು. ರೈಲ್ವೆ ಹಾಗೂ ವಿಮಾನಗಳ ಬಗ್ಗೆ ನಾನು ಮಾತನಾಡುವುದಿಲ್ಲ. ರಸ್ತೆಗಳು, ನಮ್ಮ ಜಿಲ್ಲಾ ಮುಖ್ಯ ರಸ್ತೆಗಳು ಇವತ್ತು 3.75 ಅಗಲದಲ್ಲೆ ಇದೆ. ಇವತ್ತು ಅದು ಡಬಲ್ ರೋಡ್ ಕೂಡ ಆಗದೆ, ಸಿಂಗಲ್ ರೋಡ್ ಮಾತ್ರ ಇದೆ. ಆದುದರಿಂದ ಇವತ್ತು ಪ್ರವಾಸೋದ್ಯಮಕ್ಕೆ ಮೊದಲನೆಯದಾಗಿ ಬೇಕಾಗಿರುವುದು ರಸ್ತೆಗಳು. ಈ ರಸ್ತೆಗಳ ಸಂಪರ್ಕಕ್ಕೆ ಪಿಡಬ್ಲ್ಯೂಡಿ ಇಲಾಖೆ ಇರಬಹುದು, ಜೆಡ್‌ಪಿ ಇರಬಹುದು, ನಾವು ಬೇರೆ ಬೇರೆ ಯೋಜನೆಯಿಂದ ಮಾಡುತ್ತಿರುವಂತಹ ಕೆಲಸಗಳು ಇರಬಹುದು,

ಪ್ರವಾಸೋದ್ಯಮ ಕ್ಷೇತ್ರಗಳಿಗೆ ಮೊದಲಿನ ಆದ್ಯತೆ ಮೇಲೆ ನಾವು ರಸ್ತೆಗಳನ್ನು ಮಾಡುತ್ತೇವೆ, ಈ ಒಂದು ಕಮಿಟ್‌ಮೆಂಟ್ ಎಲ್ಲಾ ಇಲಾಖೆಗಳಿಗೂ ಇರಬೇಕಾಗುತ್ತದೆ. ಮತ್ತು ಅದು ಸದನದ ಮೂಲಕ ಅಥವಾ ಬೇರೆ ಬೇರೆ ಸಂದರ್ಭದಲ್ಲಿ ಉನ್ನತ ಮಟ್ಟದ ಅಧಿಕಾರಿಗಳು ಹಾಗೂ ಮಂತ್ರಿಗಳು ಸೇರಿದಂತಹ ಸಭೆಗಳಲ್ಲಿ ನಿರ್ಣಯವಾಗಬೇಕಾಗುತ್ತದೆ. ಇನ್ನು ಎರಡನೆಯದಾಗಿ ಅಕಾಮಡೇಷನ್, ಅಲ್ಲಿ ಪ್ರವಾಸಿಗರು ಹೋದರೆ ಅವರಿಗೆ ವಸತಿ ವ್ಯವಸ್ಥೆ ಇತ್ಯಾದಿಗಳು. ಅಲ್ಲಿ ಕೊಡಬೇಕಾಗಿರುವ ಸುರಕ್ಷತೆ, ಈ ರೀತಿ ಎಲ್ಲಾ ರೀತಿಯ ಮಾಹಿತಿಗಳನ್ನು ಕೊಡುವಂತಾದ್ದು, ಈ ಎಲ್ಲಾ ರೀತಿಯ ವ್ಯವಸ್ಥೆ ಇದ್ದಾಗ ಮಾತ್ರ ಅಲ್ಲಿ ಸ್ಥಳಗಳಿಗೆ ಪ್ರವಾಸಿಗರು ಬರುತ್ತಾರೆ, ಅವರು ಸಂತೋಷ ಪಡುತ್ತಾರೆ, ಮತ್ತೆ ಅಲ್ಲಿ ಹೆಚ್ಚೆಚ್ಚು ಪ್ರವಾಸಿಗರನ್ನು ಆಕರ್ಷಿಸುವುದಕ್ಕೆ ಸಾಧ್ಯವಾಗುತ್ತದೆ. ನಮಗೆ ಈ ರೀತಿಯ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ಇಲ್ಲ. ನಾನು, ಪ್ರವಾಸೋದ್ಯಮ ಇಲಾಖೆಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ, ಯಾವ್ಯಾವ ಹುದ್ದೆ ಖಾಲಿ ಇದೆ ಎಂದು ಎಲ್ಲಾ ವಿವರಗಳನ್ನು ನೋಡುತ್ತಿದ್ದೆ. ಈ ರೀತಿಯ ಇನ್‌ಫ್ರಾಸ್ಟ್ರಕ್ಚರ್ ಅನ್ನು ಇಟ್ಟುಕೊಂಡು ನಾವು ಬಜೆಟ್ ಅನ್ನು ಜಾಸ್ತಿ ಕೊಡದೆ, ಯಾವುದೇ ರೀತಿಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಮಾಡಬೇಕಾದಂತಹ ಕೆಲಸಗಳಿಗೂ ಪ್ರೋತ್ಸಾಹ ಕೊಡದೆ ಹೋದರೆ ಪ್ರವಾಸೋದ್ಯಮ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಪ್ರವಾಸಿಗರು ಕೂಡ ಬರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ರಾಷ್ಟ್ರಪತಿಗಳು ಏನು ಪ್ರವಾಸೋದ್ಯಮದ ವಿಚಾರದಲ್ಲಿ ಕನಸನ್ನು ಕಂಡಿದ್ದರು, ಎಷ್ಟು ಲಕ್ಷ ಹೆಚ್ಚು ಪ್ರವಾಸಿಗರು ಬರಬೇಕೆಂದು ಅಪೇಕ್ಷೆಯನ್ನು ಪಟ್ಟಿದ್ದರು ಅದನ್ನು ಈಡೇರಿಸುವುದಕ್ಕಾಗುವುದಿಲ್ಲ. ಆ ರೀತಿಯ ಪರಿಸ್ಥಿತಿಗಳಾಗುತ್ತದೆ. ಹಾಗಾಗಿ ಮೂಲಭೂತ ಸೌಕರ್ಯಗಳನ್ನು ಈ ಪ್ರವಾಸಿ ಕೇಂದ್ರಗಳಿಗೆ ಕೊಡಬೇಕಾದಂತಹ ಅಗತ್ಯತೆ ಇದೆ. ಅದಕ್ಕೆ ತಕ್ಕಂತೆ ಇಲಾಖೆಗಳು ಯೋಜನೆಯನ್ನು ಸಿದ್ಧಪಡಿಸಬೇಕು, ಮತ್ತು ಪ್ರವಾಸೋದ್ಯಮ ಇಲಾಖೆ ಪತ್ರಿಕೆಗಳಿಗೆ ಜಾಹೀರಾತು ಕೊಡುವುದು ಒಂದು ಭಾಗ. ಅದರಿಂದ ಅಷ್ಟೇ ತೃಪ್ತರಾಗದೆ ಇನ್ನು ಬೇರೆ ಬೇರೆ ಮಾಧ್ಯಮಗಳ ಮೂಲಕ ಅವರು ವಿಶೇಷವಾದಂತಹ ಪ್ರಯತ್ನವನ್ನು ಮಾಡಬೇಕಾದಂತಹ ಅಗತ್ಯತೆ ಇದೆ. ನಮ್ಮ ಇಲಾಖೆಯವರು ಜಾಹೀರಾತನ್ನು ಕೊಟ್ಟಿರುವಂಥಾದ್ದೇ ಪ್ರವಾಸೋದ್ಯಮವನ್ನು ಬೆಳೆಸುವಂಥಾದ್ದಕ್ಕೆ ದೊಡ್ಡ ಪ್ರಯತ್ನ ಎಂದು ನಮ್ಮ ಇಲಾಖೆಯವರು ಹೇಳಿಕೊಳ್ಳುವಂತಹ ಧ್ವನಿ ಇದೆ. ಆದರೆ ಅದು ಅಲ್ಲ, ಅವರು ಕೆ.ಎಸ್.ಆರ್.ಟಿ.ಸಿ.ಯವರ ಬಸ್ಸು ಮಾಡುತ್ತಾರೆ. ಅದರಿಂದಲೇ ಎಲ್ಲವೂ ಆಗಬೇಕೆಂದು ಏನೂ ಇಲ್ಲ. ಇರುವ ಯಾವುದೋ ನಾಲ್ಕೈದು

ಕಂಪೆನಿಗಳವರು ಮಾಡುತ್ತಾರೆ. ಇವರು ಮಾಡುವ ಕೆಲಸವನ್ನು ಬಿಟ್ಟು ಬೇರೆ ಕೆಲಸವನ್ನು ಹಚ್ಚಿಕೊಂಡು, ಮಾಡುವ ಕೆಲಸ ಬದಿಗೆ ಹೋಗುವಂತಹ ಸ್ಥಿತಿಯಾಗುತ್ತಿದೆ. ಪ್ರವಾಸೋದ್ಯಮಕ್ಕೆ ಕೊಡಬೇಕಾದಂತಹ ಮಹತ್ವವಾದ ಭಾಗವಾಗಿದೆ. ಇವರು ಬಸ್ಸು ಮಾಡುವುದರಲ್ಲಿ ಹೆಚ್ಚು ತಲ್ಲೀನರಾಗಿ ಬಿಟ್ಟರೆ ಆಗುವುದಿಲ್ಲ. ಬಸ್ಸು ಒಂದು ಸೌಕರ್ಯ; ಇದನ್ನು ಇವತ್ತು ಯಾರಿಗೆ ಹೇಳಿದರೂ, ಅವರು ಈ ಸೌಕರ್ಯವನ್ನು ಕಲ್ಪಿಸಿಕೊಡಬಹುದು. ಆದರೆ ಉಳಿದಂತಹ ಭಾಗಕ್ಕೆ ಏನು ಪ್ರಾಮುಖ್ಯತೆಯನ್ನು ಕೊಡಬೇಕೋ ಅದನ್ನು ಕೊಡಬೇಕಾಗಿದೆ. ಬಸ್ಸು ಇರಲಿ, ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಅದೇ ನಮ್ಮ ಆದ್ಯತೆಯಾಗಿ ಬಿಡಬಾರದೆಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಆದುದರಿಂದ ಈ ಪ್ರವಾಸೋದ್ಯಮಕ್ಕೆ ಅನೇಕ ಮುಖಗಳಲ್ಲಿ ಯೋಚನೆಯನ್ನು ಮಾಡಬಹುದು. ಅನೇಕ ರೀತಿಗಳಲ್ಲಿ ಪ್ರವಾಸಿಗರನ್ನು ಆಕರ್ಷಿಸಬಹುದು. ಆ ಮೂಲಕ ನಾವು ಇಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡಬಹುದು. ಒಬ್ಬ ಪ್ರವಾಸಿಗ ಬಂದರೆ ನಾಲ್ಕು ಜನರಿಗೆ ಉದ್ಯೋಗ ಸಿಗುತ್ತದೆಂಬ ಮಾತನ್ನು ಹೇಳಿದ್ದಾರೆ. ಅದು ಸತ್ಯವಾದದ್ದು, ನಮ್ಮ ಗುಡಿ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು, ಹೋಂ ಇಂಡಸ್ಟ್ರಿಗಳು ಇತ್ಯಾದಿಗಳು ಏನು ಇವೆ. ಅವರು ಸಹ ಬಹಳ ಒಳ್ಳೆಯ ರೀತಿಯಲ್ಲಿ ಮಾರುಕಟ್ಟೆಯ ವ್ಯವಸ್ಥೆಯನ್ನು ರೂಪಿಸಿಕೊಳ್ಳುತ್ತಾರೆ. ಅದಕ್ಕೂ ಸಹ ನಾವು ಆ ರೀತಿಯಲ್ಲಿ ಇನ್‌ಡೈರೆಕ್ಟಾಗಿ ಉದ್ಯೋಗಗಳ ಅವಕಾಶಗಳು ಸಿಗುವಂತಹ ವಿಷಯದಲ್ಲಿ, ನಾವು ಹೆಚ್ಚು ಗಮನವನ್ನು ಕೊಡಬೇಕಾದಂತಹ ಅಗತ್ಯತೆ ಇದೆಯೆಂಬ ಮಾತನ್ನು ನಾನು ಹೇಳಬಯಸುತ್ತೇನೆ. ಈ ಪ್ರವಾಸೋದ್ಯಮದ ಅನೇಕ ಮುಖಗಳು ಏನು ಇವೆ. ಆ ಮುಖಗಳ ಬಗ್ಗೆ ನಾವು ಯೋಚಿಸುವುದರ ಜೊತೆಯಲ್ಲಿ, ಅಲ್ಲಿ ಬೇಕಾಗಿರುವಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವಂತಹ ದೃಷ್ಟಿಯಲ್ಲಿ, ಆ ಇಲಾಖೆ ವಿಶೇಷವಾಗಿ ಕೆಲಸವನ್ನು ಮಾಡಬೇಕಾಗಿದೆ. ನಾವು ಅಲ್ಲಿ ಆದ್ಯತೆಯ ಮೇಲೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ನಮ್ಮ ಪ್ರಯತ್ನವನ್ನು ಮಾಡಬೇಕಾಗಿದೆಯೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಜವಳಿ ವಿಷಯದಲ್ಲಿ ಮಾನ್ಯ ರಾಷ್ಟ್ರಪತಿಯವರು ಮಾತನಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಜವಳಿ ಉದ್ಯಮ ಯಾವ ರೀತಿ ಇತ್ತೆಂಬ ಬಗ್ಗೆ ನಾವು ಇತಿಹಾಸವನ್ನು ಓದಿದ್ದೇವೆ. ಆದರೆ ಇವತ್ತು ಈ ಜವಳಿ ಉದ್ಯಮ ಹೇಗೆ ನಶಿಸಿ ಹೋಗುತ್ತಿದೆಯೆಂಬ ಪಾಠವನ್ನು ಈಗ ನೋಡುತ್ತಿದ್ದೇವೆ. ಇದು ಹುಬ್ಬಳ್ಳಿಯಲ್ಲಿ ಇರುವುದೋ, ದಾವಣಗೆರೆಯಲ್ಲಿ

ಇರುವುದೋ ಬೇರೆ ಕಡೆಗಳಲ್ಲಿ ಇರುವಂಥಾದ್ದು ಎಲ್ಲಾ ಕಡೆಗಳಲ್ಲೂ ಇದು ಉಲ್ಲೇಖವಾಗಿದೆ. ಎಲ್ಲಾ ಕಡೆಗಳಲ್ಲೂ ಇವತ್ತು ಈ ಜವಳಿ ಉದ್ಯಮ ನಶಿಸಿಹೋಗುತ್ತಿರುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಅದೇ ತಮಿಳುನಾಡು ಬೇರೆ ಬೇರೆ ರಾಜ್ಯಗಳಲ್ಲಿ ಒಳ್ಳೆಯ ರೀತಿಯಲ್ಲಿ ಈ ಜವಳಿ ಉದ್ಯಮವನ್ನು ಪ್ರೋತ್ಸಾಹಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಮ್ಮಲ್ಲಿ ಸಾಮರ್ಥ್ಯ ಇದ್ದರೂ ಅದನ್ನು ಬಳಕೆ ಮಾಡಿಕೊಳ್ಳಲು ಯೋಜನೆಗಳು ಇಲ್ಲದೇ, ಇವತ್ತು ಆ ಕೈಗಾರಿಕೆಗಳು, ಉದ್ದಿಮೆಗಳು ಕಷ್ಟದಲ್ಲಿರುವುದನ್ನು ನಾವು ನೋಡುತ್ತಿದ್ದೇವೆ. ಪಾಕಿಸ್ತಾನ, ಬಾಂಗ್ಲಾದೇಶ, ಥೈಲ್ಯಾಂಡ್, ದೇಶಗಳು ಜವಳಿ ಕ್ಷೇತ್ರದಲ್ಲಿ ಇವತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಯನ್ನು ಮಾಡಬಹುದಾದಂತಹ ಸಾಮರ್ಥ್ಯವನ್ನು ಹೊಂದಿದ್ದರೆ ಇದು ಭಾರತ ದೇಶದಲ್ಲಿ ಏಕೆ ಆಗುವುದಿಲ್ಲ; ಕರ್ನಾಟಕ ರಾಜ್ಯದಲ್ಲಿ ಏಕೆ ಆಗುವುದಿಲ್ಲ? ಅವರು ಇವತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅದು ಸಿದ್ಧ ಉಡುಪು ಇರಬಹುದು, ಬೇರೆ ಬೇರೆ ರೀತಿಯ ಬಟ್ಟೆಗಳು ಇರಬಹುದು, ಈ ರೀತಿಯ ಅನೇಕ ರೀತಿಯ ಕೆಲಸವನ್ನು ಮಾಡುತ್ತಿದ್ದಾರೆ. ಈ ರೀತಿ ನಾವು ಮಾಡಬೇಕಲ್ಲಾ? ನಾವು ಮಾಡುವುದಕ್ಕೆ ನಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಬೇಕಾದಂತಹ ಅಗತ್ಯತೆ ಇದೆ. ಇವತ್ತು ಹತ್ತಿ, ಹತ್ತಿ ಬೆಳೆ, ಮತ್ತು ಇದರ ಸಮಸ್ಯೆಗಳು, ಇದರ ಮಾರುಕಟ್ಟೆಯ ವ್ಯವಸ್ಥೆಗಳು, ಈ ರೀತಿಯ ಅನೇಕ ವಿಷಯಗಳ ಬಗ್ಗೆ, ನಾವು ಎಲ್ಲರ ಜೊತೆಯಲ್ಲಿ ಈ ಉದ್ಯಮವನ್ನು ಬೇರೆ ಬೇರೆ ಕೇಂದ್ರಗಳಲ್ಲಿ ಹೇಗೆ ಪ್ರೋತ್ಸಾಹಿಸಬೇಕೆಂಬುದು ಮುಖ್ಯ. ಇವತ್ತು ಬೆಂಗಳೂರಿನಲ್ಲಿ ಗಾರ್ಮೆಂಟ್ ಫ್ಯಾಕ್ಟರಿಗಳು ಸಾಕಷ್ಟು ಇವೆ. ಇವತ್ತು ಇಂಟರ್ ನ್ಯಾಷನಲ್ ಲೆವಲ್‌ನ ಯಾವ ಕಂಪೆನಿಗಳು ನೋಡಿದರೂ, ಬೆಂಗಳೂರಿನಲ್ಲೇ ಅವರ ಫ್ಯಾಕ್ಟರಿಗಳು ಇವೆ. ಅವರು ಬೆಂಗಳೂರಿನಲ್ಲಿ ಫ್ಯಾಕ್ಟರಿ ಮಾಡುವಂಥಾದ್ದು ಏಕೆ ಬೇಕು? ನಮ್ಮ ದಾವಣಗೆರೆ ಮಿಲ್ ಸರಿಯಾಗಿ ಇದ್ದಿದ್ದರೆ, ಅದನ್ನೇ ಮಾಡ್ರನೈಸ್ ಮಾಡಿದ್ದರೆ, ಅದೇ ಅಗತ್ಯತೆಗಳನ್ನು ಪೂರೈಸಿಕೊಳ್ಳುವಂತಹ ಪ್ರಯತ್ನ ಆಗಿದ್ದರೆ, ನಾವು ಏಕೆ ಇವತ್ತು ಎಲ್ಲವನ್ನೂ ಬೆಂಗಳೂರಿನಲ್ಲೇ ಕಾನ್ಸನ್‌ಸ್ಟ್ರೇಟ್ ಮಾಡುವಂತಹ ಸ್ಥಿತಿ ಬರುತ್ತಿತ್ತು? ಹಾಗಾಗಿ ಬೇರೆ ಬೇರೆ ಕೇಂದ್ರಗಳನ್ನು ಆಯ್ಕೆ ಮಡಿ, ಅಲ್ಲಿ ನಾವು ರೈತರನ್ನೂ ಸಹ ಪ್ರೋತ್ಸಾಹಿಸಿದ ಹಾಗೆ ಆಗುತ್ತದೆ. ಆ ಭಾಗದ ಯುವಕರಿಗೂ ಉದ್ಯೋಗವನ್ನು ಸೃಷ್ಟಿ ಮಾಡಿದ ಹಾಗೆ ಆಗುತ್ತದೆ. ಇದು ಬೆಂಗಳೂರಿಗೆ ಕೇಂದ್ರೀಕೃತವಾಗುವಂಥಾದ್ದನ್ನು ತಪ್ಪಿಸಿದ ಹಾಗೆ ಆಗುತ್ತದೆ. ಆದುದರಿಂದ ಈ ಜವಳಿ ಕ್ಷೇತ್ರದಲ್ಲಿ ಸಾಕಷ್ಟು ಸಂವೃದ್ಧಿಯಾದಂತಹದ್ದು ಇದೆಯೆಂಬ ಬಗ್ಗೆ ಎಲ್ಲಾ

ರೀತಿಯ ಅಂಕಿಸಂಖ್ಯೆಗಳ ಮಾಹಿತಿಗಳು ನಮ್ಮ ಹತ್ತಿರ ಇದೆ. ನಾವು ವಿಶೇಷವಾಗಿ ಈ ಜವಳಿ ಕ್ಷೇತ್ರದಲ್ಲಿ ಎಲ್ಲೆಲ್ಲಿ ಆ ರೀತಿಯ ಪೊಟೆನ್ಸಿಯಾಲಿಟಿ ಇದೆ; ಅಂತಹ ನಾಲ್ಕೈದು ಕೇಂದ್ರಗಳನ್ನು ಗುರುತು ಮಾಡಬೇಕಾಗಿದೆ. ನಾನು ನನ್ನ ವಿದ್ಯಾರ್ಥಿ ಜೀವನದಲ್ಲಿ ಗುಳೇದಗುಡ್ಡಕ್ಕೆ ಹೋದಾಗ, ಅಲ್ಲಿನ ಬಟ್ಟೆ ಪ್ರಸಿದ್ಧವಾಗಿರುವಂಥಾದ್ದು, ನೋಡಿದ್ದೇನೆ. ಆದರೆ ಇವತ್ತು ಈ ಗುಳೇದಗುಡ್ಡದವರ ಪರಿಸ್ಥಿತಿಯನ್ನು ಕೇಳಿದರೆ ಇವರು ನಾವು ಏಕಾದರೂ ಈ ಜವಳಿ ಉದ್ಯಮವನ್ನು ನಮ್ಮ ಅಪ್ಪ, ಅಮ್ಮ ಅವಲಂಬಿಸಿಕೊಂಡಿದ್ದರು ಎಂದು ಹೇಳುವ ಮಾತು ಇದೆ. ಇಲ್ಲಿ ಕುಪ್ಪಸದ ಕಣ ಎಂಬುದು ಪ್ರಸಿದ್ಧವಾಗಿದೆ. ಇವತ್ತು ಗುಳೇದಗುಡ್ಡದ ಕುಪ್ಪಸದ ಕಣ ಇರಬಹುದು, ಅಲ್ಲಿ ಉತ್ತರ ಕರ್ನಾಟಕದ ಇಳಕಲ್ ಸೀರೆ ಇರಬಹುದು, ನಮ್ಮ ಮೈಸೂರು ರೇಷ್ಮೆ ಸೀರೆ ಇರಬಹುದು, ಮೊಳಕಾಲ್ಮೂರು ಸೀರೆ ಇರಬಹುದು, ಈ ರೀತಿಯಲ್ಲಿ ಎಲ್ಲವೂ, ಇದು ಏಕೆ, ನಮ್ಮ ಕಂಬಳಿ ಬಗ್ಗೆ ಮೊಳಕಾಲ್ಮೂರು, ಚಿತ್ರದುರ್ಗ, ಅಥವಾ ಬೆಳಗಾಂ ಭಾಗದಲ್ಲಿ ಇರಬಹುದು, ಧಾರವಾಡ, ಹಾವೇರಿ ಭಾಗದಲ್ಲಿ ಇರಬಹುದು. ಈ ಕಂಬಳಿ ನೇಯ್ಗೆ ಮತ್ತು ಆ ಕಂಬಳಿಗೆ ಇರುವಂತಹ ಪ್ರಸಿದ್ಧಿ ಇದು ಎಷ್ಟು ಚೆನ್ನಾಗಿ ಇತ್ತು. ಆದರೆ ಇವತ್ತು ನಾವು ಅದಕ್ಕೆ ಕೊಡಬೇಕಾದಂತಹ ಮಹತ್ವವನ್ನು ಕೊಟ್ಟಿಲ್ಲದೇ ಇರುವುದರಿಂದ, ಇವತ್ತು ಗ್ರಾಮೀಣ ಭಾಗದಲ್ಲಿ ಈ ಬಗ್ಗೆ ಏನು ಕೌಶಲ್ಯತೆ ಇತ್ತು, ಆ ಕೌಶಲ್ಯತೆಯನ್ನು ಇವತ್ತು ಕಳೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಮಹಾತ್ಮ ಗಾಂಧೀಜಿಯವರ ಕನಸು ಏನು ಇತ್ತು? ಅವರ ರಾಮರಾಜ್ಯದ ಕನಸು, ಸ್ವರಾಜ್ಯದ ಕನಸು, ಅಂದರೆ ಆಯಾ ಭಾಗಗಳಲ್ಲಿ ನಮ್ಮ ನಮ್ಮ ಹಳ್ಳಿಗಳಲ್ಲಿ ನಮ್ಮ ನಮ್ಮ ಅಗತ್ಯತೆಗಳನ್ನು ನಾವೇ ಪೂರೈಸಿಕೊಳ್ಳುವಂಥಾದ್ದೆ ಆ ರಾಮ ರಾಜ್ಯದ ಕನಸು ಆಗಿತ್ತು. ಆದರೆ ಇವತ್ತು ಆ ನಮ್ಮ ಅಗತ್ಯತೆಗಳನ್ನು ಪೂರೈಸಿಕೊಳ್ಳುವಂಥಾದ್ದಕ್ಕೆ, ಇವತ್ತು ನಾವು ಶಹರವನ್ನು ಕೇಂದ್ರೀಕರಿಸಿ ಕೊಳ್ಳುತ್ತಿದ್ದೇವೆ, ಅದನ್ನು ಅವಲಂಬಿಸಿಕೊಳ್ಳುತ್ತಿದ್ದೇವೆ. ಅದು ಆ ರೀತಿಯಾಗದೇ, ನಮ್ಮ ನಮ್ಮ ಗ್ರಾಮಗಳ ಅಗತ್ಯತೆಗಳು ಏನು ಇವೆಯೋ, ಅದನ್ನು ನಾವು ಪೂರೈಸಿಕೊಳ್ಳುವಂತಹ ವ್ಯವಸ್ಥೆ ಬರಬೇಕು. ಅದು ಹಾಗೆ ಆದಾಗಲೇ, ಅದು ಒಂದು ಸಂಪೃದ್ಧವಾದ ಗ್ರಾಮವಾಗಿ ನಿರ್ಮಾಣವಾಗುವುದು. ಅದು ಆಗುವುದಕ್ಕೆ ನಾವು ಅನೇಕ ರೀತಿಯಲ್ಲಿ ಪ್ರೋತ್ಸಾಹಗಳನ್ನು ಕೊಡಬೇಕಾಗುತ್ತದೆ. ಅದನ್ನು ಕೊಡಬೇಕಾದಂತಹ ಅಗತ್ಯತೆ ಇದೆ. ನಾವು ಈ ರೀತಿಯಲ್ಲಿ ನಮ್ಮ ಪಾರಂಪರಿಕವಾಗಿ, ಈ ನೇಕಾರರು ಅನೇಕ ಕಡೆಗಳಲ್ಲಿ ತಮ್ಮ ತಮ್ಮ ವಿಶೇಷತೆಗಳನ್ನು ತೋರಿಸಿಕೊಂಡು, ಈ ಪ್ರಸಿದ್ಧಿಯನ್ನು ಪಡೆದಿರುವಂಥಾದ್ದು

ಏನು ಇದೆ, ಇದು ಇಳಕಲ್ ಇರಬಹುದು, ಗುಳೇದಗುಡ್ಡ ಇರಬಹುದು, ನಾವು ಹೇಳಿದಂತೆ ಮೊಳಕಾಲ್ಮೂರು ಇರಬಹುದು, ಮೈಸೂರು ಇರಬಹುದು, ಈ ರೀತಿ ಅನೇಕ ಊರುಗಳು ದಾವಣಗೆರೆ ಇರಬಹುದು ಬೇರೆ ಬೇರೆ ಊರುಗಳಿದ್ದು ಇರಬಹುದು. ಈ ನೇಕಾರರನ್ನು ನಾವು ಪ್ರೋತ್ಸಾಹಿಸುವ ದೃಷ್ಟಿಯಿಂದ ಈ ಉದ್ಯಮಕ್ಕೆ ವಿಶೇಷವಾದಂತಹ ಮಹತ್ವವನ್ನು ಕೊಡಬೇಕಾಗಿದೆ. ಇವತ್ತು ಈ ನೇಕಾರರ ಸಮಸ್ಯೆ ಏನೆಂಬುದು ಗೊತ್ತಿದೆ. ಈ ಸದನದಲ್ಲಿ ವಿಷಯ ಅನೇಕ ಸಂದರ್ಭದಲ್ಲಿ ಎಷ್ಟು ಗಂಭೀರವಾಗಿ ಚರ್ಚೆ ಆಗಿದೆ ಅಂತ. ಅವರು ಇವತ್ತು ಆತ್ಮಹತ್ಯೆಯನ್ನು ಮಾಡಿಕೊಳ್ಳುವಂತಹ ದುಸ್ಥಿತಿಗೆ ತಲುಪಿದೆ. ನಾವು ಅವರಿಗೆ ಕೊಡಬೇಕಾದಂತಹ ಕರೆಂಟ್ ಅನ್ನು ಕೊಡದೇ, ನಾವು ಅವರಿಗೆ ಕೊಡ ಬೇಕಾದಂತಹ ಉಳಿದ ಯಾವ ಸೌಲಭ್ಯಗಳನ್ನು ಕೊಡದೇ, ಅವರು ಇವತ್ತು ಎಷ್ಟು ಕಷ್ಟವನ್ನು ಅನುಭವಿಸುತ್ತಿದ್ದಾರೆಂಬುದನ್ನು ನಾವು ನೋಡುತ್ತಿದ್ದೇವೆ. ಆದುದರಿಂದ ಈ ಜವಳಿ ಉದ್ಯಮಕ್ಕೆ ಸಾಕಷ್ಟು ಸಂವೃದ್ಧತೆ ಇರುವಂತಹ ಸಂದರ್ಭದಲ್ಲಿ ನಾವು ಅದರ ಲಾಭವನ್ನು ತೆಗೆದುಕೊಳ್ಳಬೇಕೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ವಿದ್ಯುತ್ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಇವತ್ತು ಅತ್ಯಂತ ಅಗತ್ಯವಾಗಿ ತಕ್ಷಣದಲ್ಲಿ ಸ್ಪಂದಿಸ ಬೇಕಾದಂತಹ ಕ್ಷೇತ್ರವಾಗಿದೆ. ನಾನು ಅನೇಕ ವಿಷಯಗಳ ಬಗ್ಗೆ ಮಾತನಾಡಿದರೆ ಅದು ಕಾಂಗ್ರೇಸಿರ ಕಳೆದ ಐವತ್ತು ವರ್ಷಗಳ ಆಡಳಿತದ ವೈಫಲ್ಯದ ಫಲವಾಗಿ ನಾವು ಏನೇನು ಕಹಿಯನ್ನು ಅನುಭವಿಸುತ್ತಿದ್ದೇವೆ ಎನ್ನುವಂಥ ವಿಷಯವನ್ನು ಪ್ರಸ್ತಾಪಿಸಿದರೆ ಹೇಗೆ ದಿಕ್ಕೆಟ್ಟು ನಾವು ನಮ್ಮ ಆಡಳಿತ ವ್ಯವಸ್ಥೆಯನ್ನು ಕಳೆದ ಐವತ್ತು ವರ್ಷದಲ್ಲಿ ರೂಪಿಸಿಕೊಂಡಿದ್ದೇವೆಂಬ ಬಗ್ಗೆ ಯೋಚನೆ ಮಾಡಿದರೆ ನಾನು ಮತ್ತೆ ಅದನ್ನು ರಾಜಕೀಯಕ್ಕೆ ಈ ಭಾಷಣವನ್ನು ತಿರುಚಿದಂತೆ ಆಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಆಡಳಿತದ ವೈಫಲ್ಯತೆ ಯೆಂದು ಅವರು ಹೇಳಿದ್ದಾರೆ. ಅದೇನು ವೈಫಲ್ಯಗಳು ಅದನ್ನೂ ಹೇಳಲಿ. ವೈಫಲ್ಯತೆಗಳ ಬಗ್ಗೆ ಹೇಳಬೇಕಾದರೆ ಏಕರೂಪವಾಗಿ ಯಾವುದೋ ಒಂದು ಹರಿಕಥೆದಾಸರು ಹೇಳಿದಂತೆ ಹೇಳುವುದಲ್ಲ. ಏನು ವೈಫಲ್ಯ? ಆರು ರೂಪಾಯಿ ದರದ ಬಡ್ಡಿಯಲ್ಲಿ ಸಾಲ ಕೊಟ್ಟಿದ್ದೇವೆ, ಮೂರು ರೂಪಾಯಿಗೆ ಅಕ್ಕಿಯನ್ನು ಕೊಟ್ಟಿದ್ದೇವೆ, ಹೇಳಬೇಕಾದರೆ ನಮ್ಮದು ಸಾವಿರ ವಿಷಯಗಳು ಇವೆ.

ಅಧ್ಯಕ್ಷರು: ಆಡಳಿತ ವೈಫಲ್ಯ, ಯಾರು ಆಡಳಿತ ಮಾಡಿದ್ದಾರೆ, ಅವರ ವೈಫಲ್ಯ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: ನಿಮ್ಮ ಆಡಳಿತ ಒಂದೂವರೆ ತಿಂಗಳಲ್ಲಿ ಏನಾಗಿದೆ, ಏನಾಗುತ್ತಿದೆ ಎಂಬುದೂ ಬರುತ್ತದೆ, ಇಪ್ಪತ್ತನೆ ತಾರೀಖು ಆದಮೇಲೆ ಅದನ್ನು ಹೇಳುತ್ತೇವೆ.

(ಗೊಂದಲ)

ಅಧ್ಯಕ್ಷರು: ಆಡಳಿತ ವೈಫಲ್ಯವೆಂದರೆ, ನಮ್ಮ ಸಿವಿಲ್ ಸರ್ವೀಸ್‌ನಲ್ಲಿರುವವರು 30–35 ವರ್ಷ ಇರುತ್ತಾರೆ. ಅವರ ಮೇಲೆ ಒಂದು ನಿಯಂತ್ರಣ ತರುವುದಕ್ಕೆ ರಾಜಕೀಯ ನಾಯಕತ್ವ ಫೇಲ್ ಆಗಿಬಿಟ್ಟಿದೆ. ಎಲ್ಲಾ ರಾಜಕೀಯ ಪಕ್ಷಗಳು ಆ ಜವಾಬ್ದಾರಿಯಲ್ಲಿ ವಿಫಲರಾಗಿದ್ದಾರೆ; ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬಹುದು ಎಂಬುದು ನನ್ನ ಭಾವನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಕಾಂಗ್ರೆಸನ್ನು ಏಕೆ ಉಲ್ಲೇಖ ಮಾಡಿದೆ ಎಂದರೆ, ಯಾರು ಇದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಬೇಕಾದಂತಹ ಅಗತ್ಯತೆ ಇಲ್ಲ. ಸತ್ಯ ಸಂಗತಿಗಳು ಎಲ್ಲಾ ಕಡೆ ಚರ್ಚಿತವಾಗಿರುವಂಥದ್ದು, xxx

(ಗೊಂದಲ)

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ತಾವು ಇದನ್ನು ಕನ್‌ಕ್ಲೂಡ್ ಮಾಡಿ, ದಯಮಾಡಿ ವಿಚಾರದ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಆರ್. ರೋಷನ್‌ಬೇಗ್: xx ಬಗ್ಗೆ ನಿಮಗೇನು ಗೊತ್ತಿದೆ? xx ಬಗ್ಗೆ ಮಾತನಾಡಲು ನಿಮಗೆ xx ಇಲ್ಲ, ಕುಳಿತುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ xxx ಹಗರಣಗಳೆಲ್ಲಾ ಈಗಾಗಲೇ ಅರ್ಧ ಮುಗಿದಿದೆ.

(ಗೊಂದಲ)

ಶ್ರೀ ಸಿ.ಟಿ. ರವಿ: ಇದ್ದುದ್ದನ್ನು ಇದ್ದ ಹಾಗೆ ಹೇಳುವ ಹಾಗಿಲ್ಲ.

(ಗೊಂದಲ)

ಶ್ರೀ ಎ. ಕೃಷ್ಣಪ್ಪ: ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯ ಜನಸಂಘ ಏನು ಮಾಡಿತು.

ಅಧ್ಯಕ್ಷರು: ಮಾನ್ಯ ಕಾಗೇರಿಯವರೇ, ವಿಷಯಕ್ಕೆ ಕನ್‌ಫೈನ್ ಆಗಿ ಮಾತನಾಡಿ.

(ಗೊಂದಲ)

ಶ್ರೀ ಎ. ಕೃಷ್ಣಪ್ಪ: ಇವರ ಇತಿಹಾಸವನ್ನು ತೆಗೆಯೋಣವೇ?

(ಗೊಂದಲ)

XXX) ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು: ಚರ್ಚೆ ಯಾವ್ಯಾವುದೋ ದಿಕ್ಕಿಗೆ ಹೋಗುತ್ತಿದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ನೀವು ಏನು ಮಾತನಾಡುತ್ತಿದ್ದೀರಿ ಎಂದು ಯೋಚನೆ ಮಾಡಿ ರಾಷ್ಟ್ರಪತಿಯವರ ಭಾಷಣದ ಮೇಲೆ ಏನು ಮಾತನಾಡಬೇಕೋ ಅದನ್ನು ಮಾತನಾಡಿ. ನಿಮ್ಮ ಭಾಷಣಕ್ಕೆ ನಾವು ಅಡ್ಡ ಬರುವುದಿಲ್ಲ. ಆದರೆ ಏನು ಮಾತನಾಡಬೇಕೋ ಅದನ್ನು ಮಾತನಾಡಬೇಕೇ ಹೊರತು ಅನಾವಶ್ಯಕವಾಗಿ ನೀವು ಬೇರೆ ಬೇರೆ ವಿಷಯಗಳನ್ನು ಈ ಸಭೆಗೆ ತರಬೇಡಿ. ನಿಮ್ಮ ಭಾಷಣ ಚೆನ್ನಾಗಿದೆ. ನೀವು ಮಾತನಾಡಿ. ನೆಹರೂರವರ ಬಗ್ಗೆ ಏಕೆ ಮಾತನಾಡುತ್ತೀರಿ? ನಾವು ನಮ್ಮ ಭಾಷಣದಲ್ಲಿ ವಾಜಪೇಯಿಯವರ ಬಗ್ಗೆ ಮಾತನಾಡೋಣವೇ? ನಮ್ಮ ಭಾಷಣದಲ್ಲಿ ನಿಮ್ಮ ಬಗ್ಗೆ ಮಾತನಾಡೋಣವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸತ್ಯ ಏನಿದೆ ಎನ್ನುವುದು ಇತಿಹಾಸದ ಪುಟಗಳಲ್ಲಿದೆ. ನಾನೂ ಅದನ್ನು ಮಾತನಾಡಬಲ್ಲೆ.

ಶ್ರೀ ದಿನೇಶ್ ಗುಂಡೂರಾವ್: ಬೇಕಾಗಿಲ್ಲ ಅದು.

(ಗೊಂದಲ)

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, It should not go on record.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದನ್ನೆಲ್ಲಾ ಮಾತನಾಡಬೇಕು ಎಂದಾದರೆ ನಾನು ಹೇಳುತ್ತೇನೆ, ಆದರೆ ನಮಗೆ ಇದನ್ನು ಹೇಳುವುದಕ್ಕೆ ನೈತಿಕವಾದಂಥ ಅಧಿಕಾರವಿದೆ, ಶಕ್ತಿ ಇದೆ. ಎನ್.ಡಿ.ಎ. ಸರ್ಕಾರದಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಅಭಿವೃದ್ಧಿ ಬಗ್ಗೆ ಏನು ಹೇಳಿದರೋ, ಅದನ್ನು ಅವರು ಮಾಡಿ ತೋರಿಸಿದರು. ನಿಮ್ಮ ಹಾಗೆ ಅವರು ಭಾಷಣ ನಡೆಸಲಿಲ್ಲ. ನಾನು ಹೇಳುತ್ತೇನೆ, ವಾಜಪೇಯಿಯವರು.......

(ಗೊಂದಲ)

ಅಧ್ಯಕ್ಷರು: ಬೇರೆ ಸಮಯದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುವಿರಂತೆ, ಈಗ ಅಷ್ಟಕ್ಕೆ ಕನ್‌ಫೈನ್ ಆಗಿ ಮಾತನಾಡಿ.

(ಗೊಂದಲ)

ಶ್ರೀ ಎ. ಕೃಷ್ಣಪ್ಪ: ಅದಕ್ಕೇ ವಾಜಪೇಯಿಯವರನ್ನು ಮನೆಗೆ ಕಳುಹಿಸಿದ್ದು ಸ್ವಾಮಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಬ್ದುಲ್ ಕಲಾಂರವರು ಯಾವ ರೀತಿಯ ಕನಸನ್ನು....

(ಗೊಂದಲ)

ಅಧ್ಯಕ್ಷರು: ವಿಷಯಕ್ಕೆ ಕನ್‌ಫೈನ್ ಆಗಿ ಮಾತನಾಡಿ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಈಲ್ಡ್ ಆಗಿಲ್ಲ. ನಾನು ನಮ್ಮ ಎನ್.ಡಿ.ಎ. ಸರ್ಕಾರದಲ್ಲಿ ವಾಜಪೇಯಿಯವರು ಈ ದೇಶದ ಪ್ರಧಾನ ಮಂತ್ರಿಯಾಗಿದ್ದಾಗ ಈ ದೇಶ ಹೇಗಿರಬೇಕು ಎನ್ನುವಂಥ ಕನಸನ್ನು ಕಂಡರು. ಆ ಕನಸನ್ನು ನನಸು ಮಾಡುವ ಯೋಜನೆಯನ್ನು ಹಾಕಿಕೊಂಡರು. ಸುಮ್ಮನೆ ಒಣ ಭಾಷಣವನ್ನು 50 ವರ್ಷ ಮಾಡಲಿಲ್ಲ. ಅವರು, ಕನಸನ್ನು ನನಸು ಮಾಡಲು ಬೇಕಾಗಿರುವಂಥ ಯೋಜನೆಯನ್ನು ಹಾಕಿಕೊಂಡರು.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ಒಂದು ನಿಮಿಷ ಈಲ್ಡ್ ಆಗಿ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: ಒಂದು ನಿಮಿಷ ಈಲ್ಡ್ ಆದರೆ ನಾನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ, ಏಕೆ ಹೀಗೆ ಸುಮ್ಮನೆ ಕಾಂಟ್ರೊವರ್ಸಿ ಕ್ರಿಯೇಟ್ ಮಾಡಿಕೊಳ್ಳುತ್ತೀರಿ? ಕಾಂಟ್ರೊವರ್ಸಿ ಕ್ರಿಯೆಟ್ ಮಾಡಿಕೊಂಡರೆ ನೀವು ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ನಿಮ್ಮ ಕಾಲ ಮುಗಿಯುತ್ತಾ ಬಂದಿದೆ. ನೀವು ಮಾತನಾಡಿ, ಅದು ಬಿಟ್ಟು ಸುಮ್ಮನೆ ಏಕೆ ಕಾಂಟ್ರೊವರ್ಸಿ ಕ್ರಿಯೇಟ್ ಮಾಡುತ್ತೀರಿ?

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ವಾಜಪೇಯಿಯವರಿಗೆ ಮೊದಲು ವಿ.ಪಿ.ಸಿಂಗ್‌ರವರು ಇದ್ದರಲ್ಲಾ, ಆಗ ಮಂಡಲ್ ರಿಪೋರ್ಟ್ ಬಂದಾಗ ಇವರು ಏನು ತೀರ್ಮಾನ ತೆಗೆದುಕೊಂಡಿದ್ದರು? ಆವತ್ತು ಆ ರೀತಿ ಮಾತನಾಡಿದರು ಇವತ್ತು ಏಕೆ ಹೀಗೆ ಮಾತನಾಡುತ್ತಾರೆ? ಆವತ್ತು ವಿ.ಪಿ.ಸಿಂಗ್‌ರವರು ಅಧಿಕಾರ ಸರಿಯಾಗಿ ನಡೆಸಲಿಲ್ಲವೇ?

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರೇ, ಕುಳಿತುಕೊಳ್ಳಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾತನಾಡುವುದಕ್ಕೆ ಕೂಡ ಇತಿಮಿತಿ ಇದೆ. ಆ ಇತಿಮಿತಿಯಲ್ಲಿ ಮಾತನಾಡಲಿ. ನೀವು ಕಾಂಗ್ರೆಸ್ ಪಕ್ಷದ ಬಗ್ಗೆ ಮಾತನಾಡುವುದಾದರೆ, ನೀವು ಏನು ಮಾಡಿದ್ದೀರಿ ಅನ್ನುವುದನ್ನೂ ನಾವು ಹೇಳುತ್ತೇವೆ.

ಅಧ್ಯಕ್ಷರು: ಆಯಿತು, ಆಯಿತು, ಗೌಡರೇ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: xx

(ಗೊಂದಲ)

ಅಧ್ಯಕ್ಷರು: ಮಾನ್ಯ ಕಾಗೇರಿಯವರೇ, ಸುಮ್ಮನೆ ಏಕೆ ಕಾಂಟ್ರೊವರ್ಸಿ ಕ್ರಿಯೇಟ್ ಮಾಡಿಕೊಳ್ಳುತ್ತೀರಿ?

(ಗೊಂದಲ)

ಅಧ್ಯಕ್ಷರು: ಭ್ರಷ್ಟಾಚಾರ ಮುಕ್ತ ಆಡಳಿತವನ್ನು ಕೊಡುವುದಕ್ಕೆ ಎಲ್ಲಾ ರಾಷ್ಟ್ರೀಯ ಪಕ್ಷಗಳು ವಿಫಲವಾಗಿವೆ. ಅವರೆಲ್ಲಾ ಇದ್ದಾರೆ, ಇವರೆಲ್ಲಾ ಇದ್ದಾರೆ. ಇದೆಲ್ಲಾ ಏಕೆ ಸುಮ್ಮನೆ? ನಿಮ್ಮ ನಿಮ್ಮ ಬೆನ್ನು ತಟ್ಟಿಕೊಂಡರೆ ಏನೂ ಪ್ರಯೋಜನವಾಗುವುದಿಲ್ಲ. ದಯವಿಟ್ಟು, ಇದಕ್ಕೆ ಕನ್‌ಫೈನ್ ಆಗಿ ಮಾತನಾಡಿ. ಏಕೆ ನೀವು ಬೆನ್ನು ತಟ್ಟಿಕೊಳ್ಳುತ್ತೀರಿ? ಜನ ನಿಮ್ಮ ಬೆನ್ನು ತಟ್ಟಬೇಕು.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು ಅದರ ಬಗ್ಗೆ ಮಾತನಾಡುತ್ತಾರೆ.

(ಗೊಂದಲ)

ಅಧ್ಯಕ್ಷರು: ಆಯಿತಲ್ಲಾ ದಯಮಾಡಿ ಕಾಂಟ್ರೊವರ್ಸಿ ಕ್ರಿಯೇಟ್ ಮಾಡುವುದು ಬೇಡ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಸ್ಪಷ್ಟವಾಗಿ ಹೇಳುವುದು ಎಂದರೆ, ಕಳೆದ 50 ವರ್ಷ.....

ಶ್ರೀ ಸಿ.ಟಿ.ರವಿ: ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ಒಂದು ನಿಮಿಷ ಮಾನ್ಯ ಶ್ರೀನಿವಾಸಗೌಡರು......

XX ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ

ಅಧ್ಯಕ್ಷರು: ಬೇಡ, ಅವರು ಮಾತನಾಡುತ್ತಿದ್ದಾರೆ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ.

ಅಧ್ಯಕ್ಷರು: ಅವರು ಮಾತನಾಡುತ್ತಿದ್ದಾರೆ. ನೀವು ಎದ್ದರೆ, ಅವರೂ ಹೇಳುತ್ತಾರೆ.

(**ಗೊಂದಲ**)

ಶ್ರೀ ಎ. ಕೃಷ್ಣಪ್ಪ: ಅವರು ಹಳೆಯ ದಾಖಲೆಗಳನ್ನು ಹೇಳಿದರೆ ಸಾಕು. ಇಂದಿರಾ ಗಾಂಧಿಯವರ ಬಗ್ಗೆ ಅವರು ಏನು ಹೇಳಿದರು, ದಯವಿಟ್ಟು ಅದನ್ನು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು: ಆಯಿತು.

ಶ್ರೀ ಎ. ಕೃಷ್ಣಪ್ಪ: ದಯಮಾಡಿ ತೆಗೆಸುವುದಕ್ಕೆ ಆರ್ಡರ್ ಮಾಡಿ.

ಅಧ್ಯಕ್ಷರು: ಆಯಿತು.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, xx

(**ಗೊಂದಲ**)

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಸದಸ್ಯರು ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇದು ಬಹಳ ಆಯಿತು. ಇದು ಅತಿಯಾಯಿತು. xx ಈ ಸದನದಲ್ಲಿ ಆಡುವ ಮಾತೇ ಅದು. ಈ ರೀತಿಯೇ ಮಾತನಾಡುವುದು? ಇಲ್ಲಿ ನಿಂತುಕೊಂಡು ಬಾಯಿಗೆ ಬಂದಹಾಗೆ ಮಾತನಾಡುವುದೇ? ಮೊದಲು, ಸದಸ್ಯರಿಗೆ ಗೌರವ ಕೊಡುವುದು ಮರೆಯಬೇಡಿ.

(**ಗೊಂದಲ**)

ಶ್ರೀ ಹೆಚ್.ಡಿ.ಬಸವರಾಜು: xx ಏನು ಇರ್‌ಸ್ಪಾನ್ಸಿಬಲ್ ಮಾನ್ಯ ಅಧ್ಯಕ್ಷರೇ, ಇದನ್ನು ಕಡತದಿಂದ ತೆಗೆಯಬೇಕು. ಇಲ್ಲಿ ನಮ್ಮ ಅಭಿಪ್ರಾಯ ಹೇಳುವುದಕ್ಕೆ ಅವಕಾಶವಿಲ್ಲವೇ?

(**ಗೊಂದಲ**)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಭ್ರಷ್ಟಾಚಾರವನ್ನು ಪ್ರೋತ್ಸಾಹಿಸಿದವರೇ ಕಾಂಗ್ರೆಸ್‌ನವರು.

(**ಗೊಂದಲ**)

---

xx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಹೆಚ್.ಡಿ. ಬಸವರಾಜು: ನಮ್ಮ ಅಭಿಪ್ರಾಯವನ್ನು ನಾವು ಹೇಳುವುದೇ ಇರ್‌ಸ್ಪಾನ್ಸಿಬಲ್ ಎಂದರೆ ಹೇಗೆ? ಏನು ವರ್ಡ್ ಅದು? ಅದು ಕಡತದಿಂದ ಹೋಗಬೇಕು.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ರಾಷ್ಟ್ರಪತಿಗಳ ಭಾಷಣ ಬಗ್ಗೆ ಮಾತನಾಡಿ ಅಂದರೆ ರಾಜಕೀಯ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: 50 ವರ್ಷ ಈ ದೇಶವನ್ನು ಆಳಿ, ಈ ದೇಶದ ಆಡಳಿತದ ದಿಕ್ಕನ್ನು ಹಾಳು ಮಾಡಿಟ್ಟು, ಭ್ರಷ್ಟಾಚಾರವನ್ನು ಪ್ರೋತ್ಸಾಹಿಸಿ, ಇವತ್ತು ಈ ದೇಶ ಹೀಗಿರಲು ಕಾರಣ ಕಾಂಗ್ರೆಸ್ಸಿನವರು ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಆರ್. ದಿನೇಶ್ ಗುಂಡೂರಾವ್: ನೀವೇನೂ ಸತ್ಯಹರಿಶ್ಚಂದ್ರರಲ್ಲ ಬಿಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ನಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ನಮ್ಮ ಎನ್.ಡಿ.ಎ. ಸರ್ಕಾರದಲ್ಲಿ ನಾವು ಒಳ್ಳೆಯ ಕೆಲಸ ಮಾಡಿ ತೋರಿಸಿದ್ದೇವೆ. ಆರು ವರ್ಷಗಳ ಕಾಲ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ.. ...

(ಗೊಂದಲ)

ಅಧ್ಯಕ್ಷರು: ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ಕನ್‌ಫೈನ್ ಆಗಿ ಮಾತನಾಡಿ. ಏಕೆ ಸುಮ್ಮನೆ ಮಾತನಾಡಿ ನೀವು ಕಾಂಟ್ರೊವರ್ಸಿ ಕ್ರಿಯೇಟ್ ಮಾಡುತ್ತೀರಿ?

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: ಪ್ರವಾಸೋದ್ಯಮದ ನೆಪದಲ್ಲಿ ಅಶೋಕ ಹೋಟೆಲ್ ಅನ್ನು ಮಾರಿದ್ದು ಯಾರು?

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಕಾಂಟ್ರೊವರ್ಸಿ ಏಕೆ ಕ್ರಿಯೇಟ್ ಮಾಡಿಕೊಳ್ಳುತ್ತೀರಿ. ದಯಮಾಡಿ ಇದಕ್ಕೆ ಕನ್‌ಫೈನ್ ಆಗಿ ಮಾತನಾಡಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸರ್, ಈಗ.......

ಶ್ರೀ ಆರ್. ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ xx

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ನನ್ನ ಮಾತಿನಲ್ಲಿ ಕಾಂಗ್ರೆಸ್ಸನ್ನು ಪ್ರಸ್ತಾಪಿಸಿರುವುದರಿಂದ ಇಲ್ಲಿ ಅನೇಕ ರೀತಿಯ ವಿಷಯಾಂತರವಾಗುತ್ತದೆ ಎನ್ನುವ ಭಾವನೆಗಳಿದ್ದರೆ, ನಾನು ಅದನ್ನು ಮತ್ತೆ ಪ್ರಸ್ತಾಪಿಸುವುದಕ್ಕೆ ಬಯಸುವುದಿಲ್ಲ. ಏನಾಗಿದೆ, ಅದೆಲ್ಲವೂ ಇತಿಹಾಸದ ಪುಟಗಳಲ್ಲಿದೆ. ಘನತೆವೆತ್ತ ರಾಷ್ಟ್ರಪತಿಗಳು ಈ ವಿಷಯದ ಬಗ್ಗೆ.......

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇಂದು ಬೆಳಗ್ಗೆ....

(ಗೊಂದಲ)

ಅಧ್ಯಕ್ಷರು: ಆಯಿತು, ಕುಳಿತುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಘನತೆವೆತ್ತ ರಾಷ್ಟ್ರಪತಿಗಳು ನಮ್ಮ ಈ ಸದನದಲ್ಲಿ ಈ ದೇಶಕ್ಕೆ.....

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ಒಂದು ನಿಮಿಷ ಈಲ್ಡ್ ಆಗಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮತ್ತೆ ಆ ವಿಷಯ ಬೇಡ ಸರ್. ಅದೇನೂ ಅಗತ್ಯವಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಒಂದು ನಿಮಿಷ ಈಲ್ಡ್ ಆಗಿ. I am appealing to you.

ಶ್ರೀ ನೆ.ಲ. ನರೇಂದ್ರ ಬಾಬು: ಇವತ್ತು ಎಸ್.ಟಿ.ಡಿ. ಏನಾದರೂ ದೇಶಾದ್ಯಂತ ಬಂದಿದ್ದರೆ ಅದಕ್ಕೆ ಕಾರಣ ರಾಜೀವ್ ಗಾಂಧಿಯವರು ಎನ್ನುವುದನ್ನು ಮರೆಯಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಹೇಳುವುದು...

XX **ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.**

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, Sir, I am on a Point of Order.

ಅಧ್ಯಕ್ಷರು: ಪಾಯಿಂಟ್ ಆಫ್ ಆರ್ಡರ್ ಅಂತೆ. ಏನೆಂದು ಕೇಳೋಣ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ತಮ್ಮ ಮುಂದೆ ಏನು ಅಜೆಂಡಾ ಇದೆ. ರಾಷ್ಟ್ರಪತಿಯವರು ಜಂಟಿ ಸದನವನ್ನು ಉದ್ದೇಶಿಸಿ ನಮಗೆ ಮಾಡಿರತಕ್ಕಂಥ ಹಿತೋಪದೇಶದ ಬಗ್ಗೆ ನಾವು ಜವಾಬ್ದಾರಿಯುತವಾಗಿ, ಯಾವುದನ್ನು ಸ್ವೀಕಾರ ಮಾಡಿ ಈ ರಾಜ್ಯದ ಅಭಿವೃದ್ಧಿಯನ್ನು ನಡೆಸಿಕೊಂಡು ಹೋಗಬೇಕು ಎನ್ನುವ ಬಗ್ಗೆ ಚರ್ಚೆ ಮಾಡಬೇಕು ಎನ್ನುವುದಾಗಿದೆ. ಬೆಳಗ್ಗೆ ತಾವು ಮತ್ತು ಸಭಾಪತಿಗಳು ಕರೆದಂಥ ಸಭೆಯಲ್ಲಿ ಪಕ್ಷದ ಕನ್ಸಿಡರೇಷನ್ನೇ ಬರಲಿಲ್ಲ. ಏಕೆ ಇವರು ಈ ರೀತಿ ಮಾಡುತ್ತಾರೆ? ಭ್ರಷ್ಟಾಚಾರದ ಬಗ್ಗೆ ಮಾತನಾಡಬೇಕೆಂದರೆ, ನಾನೇನು ಹೇಳುತ್ತೇನೆ ಎಂದರೆ, ಬಿ.ಎ.ಸಿ.ಯಲ್ಲಿ ತೀರ್ಮಾನ ಮಾಡಿ ಎರಡು ದಿವಸ ಕುಳಿತು ಚರ್ಚೆ ಮಾಡೋಣ, ಭ್ರಷ್ಟಾಚಾರದ ಬಗ್ಗೆಯೇ ಚರ್ಚೆ ಮಾಡಬೇಕೇ, ನಾನು ರೆಡಿಯಾಗಿದ್ದೇವೆ; ಈ ದೇಶದಲ್ಲಿ ಭ್ರಷ್ಟಾಚಾರ ಎಲ್ಲಿ ಪ್ರಾರಂಭವಾಯಿತು, ಭ್ರಷ್ಟಾಚಾರ ಎಂದರೆ ಏನು? ಅದರ ಪರಿಕಲ್ಪನೆ ಏನು ಯಾರ್‍ಯಾರು ಯಾವ್ಯಾವ ಪ್ರಮಾಣದಲ್ಲಿ ಮಾಡಿದ್ದಾರೆ? ಮಾಡಿದವರಿಗೆ ಏನು ಶಿಕ್ಷೆಯಾಗಬೇಕು? ಅದು ಎಲ್ಲಿ ಉದ್ಭವವಾಗುತ್ತದೆ, ಹೇಗೆ ಆಗುತ್ತದೆ, ಈ ವ್ಯವಸ್ಥೆ ಇವುಗಳ ಬಗ್ಗೆ ಎರಡು ದಿವಸ ಚರ್ಚೆ ಮಾಡೋಣ. ನಾವು ಅದರಿಂದ ಹಿಂದೆಗೆಯಲು ಅಥವಾ ಓಡಿಹೋಗಲೇನೂ ತಯಾರಾಗಿಲ್ಲ. ಆದರೆ, ಇವತ್ತು ಅದನ್ನು ಚರ್ಚೆ ಮಾಡುತ್ತಿದ್ದೀರಾ ಅಥವಾ ನಮ್ಮ ಮುಂದೆ ನೀವು ಇಟ್ಟಿರತಕ್ಕಂಥ ಅಜೆಂಡಾ ಬಗ್ಗೆ ಚರ್ಚೆ ಮಾಡುತ್ತಿದ್ದೀರಾ? ತಾವು ಹೇಳಿದಂತೆ, we found a way. ಮಾನ್ಯ ಸಭಾನಾಯಕರು ಬಂದಿದ್ದಾರೆ, ರೆಸುಲೂಷನ್ ಮೂವ್ ಮಾಡಿದ್ದಾರೆ, ಚರ್ಚೆ ಮಾಡುತ್ತಿದ್ದೇವೆ. ಕಾಂಗ್ರೆಸ್ಸಿನ ಭ್ರಷ್ಟಾಚಾರ ಎಂದರೆ, ಆಲ್‌ರೈಟ್ ಕಾಂಗ್ರೆಸ್ ಕರಪ್ಷನ್ ಎಂದೇ ತೆಗೆದುಕೊಳ್ಳಿ, We are ready for that also. We have the moral courage to withstand the allegation. ನಮಗೆ ಯೋಗ್ಯತೆ ಇದ್ದರೆ, ನಮ್ಮನ್ನು ನಾವು ನಿಭಾಯಿಸಿ ಕೊಳ್ಳುತ್ತೇವೆ, ಸಮರ್ಥಿಸಿಕೊಳ್ಳುತ್ತೇವೆ, ಯೋಗ್ಯತೆ ಇಲ್ಲದಿದ್ದರೆ ಸರೆಂಡರ್ ಆಗಿ ಹೋಗುತ್ತೇವೆ. We are prepared to that challenge also. But, is that the issue now before the House? I appeal to you Sir, with folded hands, whatever has gone into records, ನಾವು ಏನೋ ಒಂದು ಕೆಲಸದ ಮೇಲೆ

ಎಲ್ಲರೂ ಹೊರಕ್ಕೆ ಹೋಗಿದ್ದೆವು. We have requested our senior colleague Sri Srinivasa Gowda to look, after the party's interest. If something has gone into records and if that comes out in the dailies tomorrow that will be a bad reflection on our party.

ಅಧ್ಯಕ್ಷರು: ಅದನ್ನು ತೆಗೆಸಿ ಹಾಕುತ್ತೇನೆ ಎಂದು ಹೇಳಿದ್ದೇನೆ.

Sri K.R. Ramesh Kumar: It is your responsible go through the records.

Mr. Speaker: That I will do.

Sri K.R. Ramesh Kumar: And kindly admonish the Members. Let them be within their Limits.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು: ಆಯಿತು, ಮಾನ್ಯ ಕೃಷ್ಣಪ್ಪನವರೇ, ವಿಷಯ ಮುಗಿದಿದೆ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ನಾನು ಇಂಟರ್‌ಫಿಯರ್ ಆಗುವುದಿಲ್ಲ. You have seen my conduct. x ಬಗ್ಗೆ ಮಾತನಾಡುವಂಥ ಈ ವ್ಯಕ್ತಿ, ಎಷ್ಟು ಬೇಜವಾಬ್ದಾರಿಯಾಗಿ ಮಾತನಾಡಿದರು. ನಾನು ಇವರಿಗೆ ವಾಪಸ್ಸು ಏನು ಹೇಳಬೇಕೆಂದರೆ, x ರವರು ಮಾಡಿದಂಥ the beautiful temples of India have been sold by these irresponsible people. Modern temples, ಎಂದು * ಅವರು ಏನು ವ್ಯಾಖ್ಯಾನ ಮಾಡಿದ್ದರು, Which has generated economic strength to millions of people in this country; he does not have moral right to use name to-day. No. 1. His government, the so-called x Government sold all such institutions.

ಅಧ್ಯಕ್ಷರು: ಆಯಿತು ಬಿಡಿ. ಮತ್ತೆ ಅದಕ್ಕೆ ಹೋಗುವುದು ಬೇಡ.

ಶ್ರೀ ಎ. ಕೃಷ್ಣಪ್ಪ: ಮಾರಾಟ ಮಾಡಿ ತಿಂದವರು ಇವರು. x ಬಗ್ಗೆ ಮಾತನಾಡುತ್ತಾರೇನು ಇವರು?

ಅಧ್ಯಕ್ಷರು: ಆಯಿತು, That is not the issue here.

XX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎ. ಕೃಷ್ಣಪ್ಪ: ತಿಂದು ಜೀರ್ಣ ಮಾಡಿಕೊಂಡವರು ಇವರು, including tourism and hotels.

ಅಧ್ಯಕ್ಷರು: ಮಾನ್ಯ ಕೃಷ್ಣಪ್ಪನವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಕಾಗೇರಿಯವರೇ, ಅದಕ್ಕೆ ಸೀಮಿತವಾಗಿ ದಯಮಾಡಿ ಮಾತನಾಡಿ. ಎಲ್ಲೆಲ್ಲಿಗೋ ಹೋದರೆ ಸುಮ್ಮನೆ ಅದೊಂದು ಬೇರೆ ರೀತಿಯಾಗಿ ಕ್ರಿಯೇಟ್ ಆಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಒಂದೇ ಒಂದು incident ಅನ್ನು ನಿಮ್ಮ ಗಮನಕ್ಕೆ ನಾನು ತರುತ್ತೇನೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರೇ ಬೇಡ. ಆಯಿತು, ನೀವು ಹೇಳಿದಿರಿ.

(ಗೊಂದಲ)

ಶ್ರೀ ಕೆ.ಆರ್.ರಮೇಶ್‌ಕುಮಾರ್: ನಿಮ್ಮ ಪಕ್ಷದ ವತಿಯಿಂದ ಒಬ್ಬರು ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿದ್ದರು.

ಅಧ್ಯಕ್ಷರು: ಆಯಿತು. ವಿಷಯಾಂತರ ಏಕೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, Youth Services ನಿಂದ HUD portfolio ಕೊಟ್ಟಿದ್ದಕ್ಕೆ procession ತೆಗೆದಿರಿ. How does it make any difference for a Cabinet Minister? In Central Government Youth Services ಆದರೆ ಏನು? ಕೃಷಿ ಆದರೆ ಏನು? Textile ಆದರೆ ಏನು? HUD ಆದರೆ ಏನು?

ಅಧ್ಯಕ್ಷರು: ಎಲ್ಲಾ ಒಂದೇ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, Just because there was a change in portfolio the Minister was taken in procession by all your party people. ಅದು ಏನು indicate ಮಾಡುತ್ತದೆ? Between Youth Services and HUD, what does it indicate? That was an useless portfolio. This is a plum portfolio

(interruptions)

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರೇ, ಎಲ್ಲೆಲ್ಲಿಗೋ ಹೋಗುವುದು ಏಕೆ? ಅವರು ಮಾತನಾಡಲಿ. ಮಾನ್ಯ ಕಾಗೇರಿಯವರೇ, ನೀವು

ವಿಷಯಕ್ಕೆ ಸೀಮಿತವಾಗಿ ಮಾತನಾಡಿ. ಯಾರ್‍ಯಾರೋ ಬಗ್ಗೆ ಎಲ್ಲೆಲ್ಲಿಗೋ ಹೋಗುವುದು ಬೇಡ.

(ಗೊಂದಲ)

ಶ್ರೀ ಸಿ.ಟಿ. ರವಿ: ಈಗ ಆಡುವುದೊಂದು ಮಾಡುವುದೊಂದು. ಹೇಳುವುದು ಒಂದು ರೀತಿ, ಆಣೆ ಮಾಡುವುದು ಅನಾಚಾರ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಎಲ್ಲರೂ ಈ ತರಹ ಮಾಡಿದರೆ ಹೇಗೆ? ಮಾನ್ಯ ದಿನೇಶ್‌ರವರೇ, ದಯಮಾಡಿ ಕುಳಿತುಕೊಳ್ಳಬೇಕು. ಈಗ ಚರ್ಚೆ ಗಂಭೀರವಾಗಿ ನಡೆಯಬೇಕು. ಅದಕ್ಕೆ ದಯಮಾಡಿ ಯಾರೂ ಸಹ ಚರ್ಚೆಯಲ್ಲಿ ಭಾಗವಹಿಸತಕ್ಕಂಥವರು ವಿಷಯಾಂತರ ಮಾಡಬಾರದು. ಮಧ್ಯೆ ಮಧ್ಯೆ ಬೇರೆ ರೀತಿಯಲ್ಲಿ interfere ಆಗಬಾರದು. ದಯಮಾಡಿ ಎಲ್ಲರೂ ಸಹಕರಿಸಬೇಕು. ಈಗ ಮಾನ್ಯ ಕಾಗೇರಿಯವರೆ ಮುಂದುವರಿಸಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಕಡತದಿಂದ ಸಹ ತೆಗೆಸಬೇಕು.

ಅಧ್ಯಕ್ಷರು: ಆಯಿತು, ತೆಗೆಸುತ್ತೇನೆಂದು ಒಪ್ಪಿದ್ದೇನಲ್ಲಪ್ಪಾ. ಈಗ ಮಾತನಾಡಿ. ದಯಮಾಡಿ ವಿಷಯಾಂತರ ಆಗುವುದು ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಪ್ರೊಸೀಡಿಂಗ್ಸ್‌ನಿಂದ ಯಾವುದು ತೆಗೆಯಬೇಕು ಯಾವುದನ್ನು ತೆಗೆಯಬಾರದು ಎಂಬುದು ತಮಗೆ ಗೊತ್ತಿದೆ.

ಅಧ್ಯಕ್ಷರು: ಅದನ್ನು ನಾನು ನೋಡುತ್ತೇನೆ. ದಯವಿಟ್ಟು ನೀವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನೀವು ನಿರ್ಣಯ ತೆಗೆದುಕೊಳ್ಳಿ. ತಾವು ಯೋಗ್ಯವಾದ ನಿರ್ಣಯ ತೆಗೆದುಕೊಳ್ಳುತ್ತೀರಿ ಎನ್ನುವಂಥ ನಂಬಿಕೆ ನಮಗೆ ಇದೆ. ಏಕೆಂದರೆ ತಮ್ಮ ಸ್ಥಾನದ ಬಗ್ಗೆ ಗೌರವ ಇಟ್ಟುಕೊಂಡವರು. ಬಾಯಿಗೆ ಬಂದಂತೆ ಮಾತನಾಡುವವರಂತೂ ನಾವು ಅಲ್ಲ. ಹಾಗಾಗಿ ತಮ್ಮ ಸ್ಥಾನದ ಬಗ್ಗೆ ಗೌರವ ಇದೆ. ತಮ್ಮ ಸ್ಥಾನದ ಬಗ್ಗೆ ಹೇಗೇಗೆ ಮಾತನಾಡಿದ್ದಾರೆ ಎಂಬುದು ತಮಗೆ ಗೊತ್ತಿದೆ.

ಅಧ್ಯಕ್ಷರು: ಮಾನ್ಯ ಕಾಗೇರಿಯವರೇ, ಅದನ್ನು ನಾನು ನೋಡುತ್ತೇನೆಂದು ಹೇಳಿದ್ದೇನೆ. ನಾನು ನೋಡಿಬಿಟ್ಟು ಏನು ಮಾಡಬೇಕೋ ಅದನ್ನು ಮಾಡುತ್ತೇನೆ. ನೀವು ಈಗ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನೀವು ಯೋಗ್ಯವಾದ ನಿರ್ಣಯವನ್ನು ತೆಗೆದುಕೊಳ್ಳಿ ಎನ್ನುವಂಥ ಮಾತನ್ನು ಹೇಳುತ್ತಾ, ನಾನು ಉಲ್ಲೇಖ ಮಾಡುವಾಗ ಈ ದೇಶದಲ್ಲಿ ನಾವು ಯಾವ್ಯಾವ ಕ್ಷೇತ್ರಕ್ಕೆ ಮೊದಲಿನಿಂದಲೂ ಸ್ವಾತಂತ್ರದ ನಂತರದಿಂದಲೂ ಪ್ರಾಮುಖ್ಯತೆಯನ್ನು ಕೊಡದಿರುವ ಕಾರಣದಿಂದಾಗಿ ಇವತ್ತು ಇಡೀ ಆಡಳಿತ ವ್ಯವಸ್ಥೆ ಅನೇಕ ಕ್ಷೇತ್ರಗಳು ಹೇಗೆ ಅದು ನಿರ್ಲಕ್ಷ್ಯಕ್ಕೊಳಪಟ್ಟು ಇವತ್ತು ನಮ್ಮ ಗ್ರಾಮೀಣ ಭಾಗದ ಜನ ಕಷ್ಟ ಅನುಭವಿಸುತ್ತಿದ್ದಾರೆನ್ನುವಂಥ ಮಾತನ್ನು ನಾನು ಉಲ್ಲೇಖಿಸಿರು ವಂಥದ್ದು. ಅದಕ್ಕಾಗಿ ಮೈ ಪರಚಿಕೊಂಡರೆ ನಾನೇನೂ ಮಾಡುವುದ ಕ್ಕಾಗುವುದಿಲ್ಲ. ಅದಕ್ಕೆ ಉಲ್ಲೇಖ ಆಗಲಿ. ಆದರೆ ನಮ್ಮ ಹಿಂದಿನ 58 ವರ್ಷಗಳ ಇತಿಹಾಸವನ್ನು ತಿಳಿದುಕೊಳ್ಳೋಣ. ಸ್ವಾತಂತ್ರ್ಯ ಸಿಗುವುದಕ್ಕಿಂತ ಪೂರ್ವದ ಚರ್ಚೆಯನ್ನು ನಾನು ಮಾಡುವುದಿಲ್ಲ. ನಾವು ಹೀಗೆ ಆಗುವುದಕ್ಕೆ ಸ್ವಾತಂತ್ರ್ಯ ಪೂರ್ವದ ಅನೇಕ ಸಂಗತಿಗಳು ಇವೆ. ಏಕೆಂದರೆ ಸ್ವಾತಂತ್ರ್ಯ ಗಳಿಸುವುದು ಮಾತ್ರ ಒಂದು ಸಂದರ್ಭದಲ್ಲಿ ನಮ್ಮ ಉದ್ದೇಶ ಆಗೋಯ್ತು. ಆನಂತರದ ಭಾರತ ಹೇಗಿರಬೇಕೆನ್ನುವ ಬಗ್ಗೆ ಚಿಂತನೆ ಮಾಡುವುದಕ್ಕೆ ಅದು ನಮಗೆ ಆವತ್ತಿನ ದಿವಸದಲ್ಲಿ ಕೊರತೆ ಆಯಿತು. ಯಾವ್ಯಾವ ಸರ್ಕಾರ ಎಷ್ಟೆಷ್ಟು ವರ್ಷ ಆಡಳಿತ ಮಾಡಿತು ಇದೆಲ್ಲಾ ಜನತೆಗೆ ಗೊತ್ತಿರುವಂಥದ್ದು. ಜಗತ್ತಿಗೆ ಗೊತ್ತಿರುವಂಥದ್ದು. ನಾನು ಮತ್ತೆ ಪ್ರಸ್ತಾಪ ಮಾಡುವುದಿಲ್ಲ. ಹಾಗಾಗಿ ಸ್ವಾತಂತ್ರ್ಯ ನಂತರದ ಭಾರತದಲ್ಲಿ, ಸ್ವಾತಂತ್ರ್ಯ ನಂತರದ ನಮ್ಮ ಸರ್ಕಾರಗಳಲ್ಲಿ ಗ್ರಾಮೀಣ ಭಾಗದ ಜನತೆಯ ಆಧ್ಯತೆಗಳು ಯಾವುದು? ಅದರ ಪ್ರಾಮುಖ್ಯತೆಗಳು ಯಾವುವು?ಅದಕ್ಕೆ ಮಹತ್ವವನ್ನು ಕೊಡದಿರುವ ಕಾರಣದಿಂದಾಗಿ ನಾವು ಇವತ್ತೆಲ್ಲಾ ಕಷ್ಟವನ್ನು ಅನುಭವಿಸಬೇಕಾಗಿದೆ. ವಿದ್ಯುಚ್ಛಕ್ತಿ ಕೊರತೆ ಇದೆಯೆಂದು ನಾನು ಮಾತನಾಡುತ್ತಿದ್ದೆ. ಸ್ವಾತಂತ್ರ್ಯ ಬಂದು 58 ವರ್ಷಗಳ ನಂತರವೂ ವಿದ್ಯುಚ್ಛಕ್ತಿ ಕೊರತೆಯನ್ನು ನಾವು ಅನುಭವಿಸುವಂತೆ ಏಕೆ ಆಗಿದೆ ಎಂದರೆ, ಹಿಂದಿನ ಸರ್ಕಾರಗಳು ಅದಕ್ಕೆ ಕೊಡಬೇಕಾದಂಥ ಮಹತ್ವವನ್ನು ಕೊಟ್ಟಿಲ್ಲ. ಅದಕ್ಕೆ ಬೇಕಾದಂಥ ಯೋಜನೆಯನ್ನು ರೂಪಿಸಿಲ್ಲ. ಹಾಗಾಗಿ ಇವತ್ತು ದೇಶ ಇರಬಹುದು, ರಾಜ್ಯ ಇರಬಹುದು, ಇವತ್ತು ಕಷ್ಟ ಅನುಭವಿಸುತ್ತಿದೆ. ಜವಳಿ ಕ್ಷೇತ್ರದ ಬಗ್ಗೆ ಆಯಿತು.

ಅಧ್ಯಕ್ಷರು: ಮಾನ್ಯ ಹೆಗಡೆಯವರೇ, ಅದಕ್ಕೆ ಏನು ಮಾಡಬೇಕೆಂಬ ಸಲಹೆಗಳನ್ನು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅದಕ್ಕೆ ನಾನು ಹೇಳುವುದೇನೆಂದರೆ, ಸರ್ಕಾರದಲ್ಲಿ ಈ ರೀತಿಯ ನೀಲಿ ನಕ್ಷೆಗಳು ಸಿದ್ಧವಾಗಬೇಕು. ಅನುಷ್ಠಾನ ಗೊಳಿಸುವುದಕ್ಕೆ ಬೇಕಾದಂಥ ಪ್ರಯತ್ನಗಳು ಆಗಬೇಕು. ಆ ಪ್ರಯತ್ನಗಳು ಸರ್ಕಾರ ಬದಲಾದಂತೆ ಆಧ್ಯತೆಗಳು ಬದಲಾಗಿ ಹೋಗದೆ, ನಾವು ಅದರಲ್ಲಿ ಮುಂದುವರಿಯುವಂತಾಗಬೇಕು. ಕನಸನ್ನು ಕಂಡು ಅದನ್ನು ನನಸು ಮಾಡುವುದಕ್ಕೆ ಶಕ್ತಿ ಇರಬೇಕು. ಕನಸನ್ನು ಕೇವಲ 'ಈ ಕತ್ತೆ ಮುಂದೆ ಕುದುರೆ ಮುಂದೆ ಹುಲ್ಲು ಇಡುತ್ತಾರಲ್ಲಾ' ಆ ರೀತಿ ಹುಲ್ಲು ಇಟ್ಟು ಮತ ಗಳಿಕೆಗೆ ರಾಜಕಾರಣವನ್ನು ಮಾಡಿದನ್ನು ಇಷ್ಟು ವರ್ಷಗಳಿಂದ ನಾವು ನೋಡಿದ್ದೇವೆ. ಹಾಗೆ ಆಗಬಾರದು. ಅಭಿವೃದ್ಧಿಯನ್ನು ಮಾಡುವುದಕ್ಕೆ ನಾವು ಬದ್ಧರಾಗಿರಬೇಕು. ಅಭಿವೃದ್ಧಿ ಎನ್ನುವುದು ನಮ್ಮ ಕನಸನ್ನು ಹಗಲುಗನಸನ್ನು ಕಟ್ಟುವುದು, ತಿರುಕನ ಕನಸನ್ನು ಕುಟ್ಟುವುದಲ್ಲ. ಆ ಕನಸು ಯಾವುದು ಇದೆಯೋ ಅದನ್ನು ಅನುಷ್ಠಾನಗೊಳಿಸುವಂಥ ಕನಸನ್ನು ಕಾಣಬೇಕು. ಅದಕ್ಕೆ ನಾನು ಮಾನ್ಯ ವಾಜಪೇಯಿರವರ ಎನ್.ಡಿ.ಎ. ಸರ್ಕಾರವನ್ನು ನೆನೆಪಿಸಿದೆ. ಆ ರೀತಿಯಲ್ಲಿ ಮಾನ್ಯ ಅಬ್ದುಲ್ ಕಲಾಂರವರು ನಮ್ಮಲ್ಲಿಗೆ ಬಂದು ಕನಸನ್ನು ಏನು ಇಟ್ಟಿದ್ದಾರೆ, ಆ ನಮ್ಮ ಕನಸನ್ನು ನನಸು ಮಾಡುವ ಜವಾಬ್ದಾರಿ ನಮ್ಮದಾಗಬೇಕು. ಈಗ ನಾವು ಆ ರೀತಿ ಸವಾಲನ್ನು ಸ್ವೀಕರಿಸಿಕೊಳ್ಳಬೇಕಾದಂಥ ಅವಶ್ಯಕತೆಯಿದೆ. ನಮ್ಮ ಮೇಲಿರುವಂಥ ಜವಾಬ್ದಾರಿಯನ್ನು ಅರಿತುಕೊಳ್ಳಬೇಕಾದಂಥ ಅಗತ್ಯತೆ ಇದೆ. ನಾವು ಈ ಹೊಸ ಸರ್ಕಾರದಲ್ಲಿ ಇದಕ್ಕೆ ಕಾರ್ಯಯೋಜನೆ ಹೇಗಿರಬೇಕು ಎಂಬುದನ್ನು ನಾವು ಅದಕ್ಕೆ ಸಲಹೆ ಸೂಚನೆಯನ್ನು ಕೊಟ್ಟು ಹೊಸ ಸರ್ಕಾರದಲ್ಲಿ ನಮ್ಮ ಬಿ.ಜೆ.ಪಿ. ಜೆ.ಡಿ.(ಎಸ್) ಸರ್ಕಾರದಲ್ಲಿ ಈ ಯೋಜನೆಗಳನ್ನು ಹೇಗೆ ಅನುಷ್ಠಾನಗೊಳಿಸಬೇಕು ಎನ್ನುವುದಕ್ಕೆ ಸಲಹೆ ಸೂಚನೆಯನ್ನು ಕೊಟ್ಟು ಆ ಜವಾಬ್ದಾರಿಯಿಂದ ಮುನ್ನಡೆಯಬೇಕಾದಂಥ ಸಂದರ್ಭ ಇದೆ. ಹಾಗಾಗಿ ವಿದ್ಯುತ್ ಕ್ಷೇತ್ರ ಇರಬಹುದು. ಉಳಿದೆಲ್ಲ ಕ್ಷೇತ್ರ ಇರಬಹುದು, ಅದಕ್ಕೆ ಕೊಡಬೇಕಾದಂಥ ಪ್ರಾಮುಖ್ಯತೆಯನ್ನು ಹಿಂದಿನಿಂದಲೂ ಕೊಡದಿರುವುದರಿಂದ ಕಷ್ಟ ಅನುಭವಿಸುತ್ತಿದ್ದೇವೆ. ಹಾಗಾಗದಿರಲಿ. ಈಗ ನಾವು ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ. ಅದಕ್ಕಾಗಿ ಮಹತ್ವವನ್ನು ಕೊಡಬೇಕು. ವಿದ್ಯುತ್ ಉತ್ಪಾದನೆ ಮಾಡುವ ಸಂದರ್ಭದಲ್ಲಿ ವಿದ್ಯುತ್ ಎಲ್ಲಿ ಖರ್ಚಾಗುತ್ತದೋ ಅಲ್ಲಿಯೇ ವಿದ್ಯುತ್ ಉತ್ಪಾದನೆ ಮಾಡುವ ರೀತಿಯಲ್ಲಿ ವಿದ್ಯುತ್ ಅನ್ನು ನಾವು ಇನ್ನೂ ಅನೇಕ ರೀತಿಯಿಂದ ಪ್ರಮುಖವಾದ ವಿಷಯಗಳನ್ನು ಈ ಕ್ಷೇತ್ರಕ್ಕೆ ಸಂಬಂಧಪಟ್ಟಿರುವಂಥ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಮಗೆ ಇಲ್ಲಿ ಬಂಜರು ಭೂಮಿ

ಎಷ್ಟಿದೆ? ಅದನ್ನು ಅಭಿವೃದ್ಧಿಪಡಿಸುವುದಕ್ಕೆ ಇವತ್ತು ಜಟ್ರೋಪ ಸಸ್ಯ ಇರಬಹುದು, ಹೊಂಗೆ ಇರಬಹುದು, ಈ ರೀತಿಯ ಇಂಧನ ಮೂಲಗಳನ್ನು ನಾವು ಕಂಡುಹಿಡಿಯುವುದು ಹೇಗೆ? ಬೆಂಗಳೂರಿನ ತ್ಯಾಜ್ಯ ವಸ್ತುಗಳಿಂದ ಎಷ್ಟು ವಿದ್ಯುತ್ ಅನ್ನು ಉತ್ಪಾದಿಸಬಹುದೆಂಬುದಕ್ಕೆ ಅವರು ಸಲಹೆಗಳನ್ನು ಕೊಟ್ಟಿದ್ದಾರೆ. ನಾವು ಈ ಕಾರ್ಯಯೋಜನೆಯನ್ನು ಮಾಡಿ ಅದನ್ನು ಅನುಷ್ಠಾನ ಗೊಳಿಸಬೇಕಲ್ಲವೇ? ನಮ್ಮ ವಿದ್ಯುತ್ ಅಭಾವವನ್ನು ನಾವು ನೀಗಿಸಿಕೊಳ್ಳ ಬೇಕಲ್ಲವೇ? ಹಾಗಾಗಿ ಈ ರೀತಿಯಲ್ಲಿ ಸಲಹೆಗಳನ್ನು ಅವರೇನು ಕೊಟ್ಟಿದ್ದಾರೆ, ಆ ಕನಸನ್ನು ನನಸು ಮಾಡುವಂಥ ಜವಾಬ್ದಾರಿ ಸ್ವೀಕಾರ ಮಾಡಬೇಕಾದಂಥ ಅಗತ್ಯತೆ ಇದೆ. ಆ ರೀತಿಯಲ್ಲಿ ಯೋಚನೆ ಮಾಡಬೇಕೆನ್ನುವ ಮಾತನ್ನು ಹೇಳಿ, ತೋಟಗಾರಿಕಾ ಕ್ಷೇತ್ರದ ಬಗ್ಗೆ, ನಮ್ಮ ಕೋಲಾರ ಇರಬಹುದು, ಬಿಜಾಪುರ ಇರಬಹುದು, ಬೆಳಗಾಂ ಇರಬಹುದು, ಉತ್ತರ ಕನ್ನಡ ಇರಬಹುದು, ಹೀಗೆ ಅನೇಕ ಜಿಲ್ಲೆಗಳು ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದಕ್ಕೆ ಅತ್ಯಂತ ಪ್ರಸಿದ್ಧವಾದಂಥ ಒಂದು ಫಲವತ್ತತೆಯನ್ನು ಹೊಂದಿರುವಂಥ ಭೌಗೋಳಿಕ ವಾದಂಥ ಕ್ಷೇತ್ರಗಳು. ಆದರೆ ಇವತ್ತು ನಮ್ಮ ತರಕಾರಿ ಬೆಳೆಗಳು ಏನಾಗಿವೆ ಎಂಬುದನ್ನು ನೋಡಿದ್ದೇವೆ. tomato ಹಣ್ಣಿನಲ್ಲಿ ನೀರಿನ ಅಂಶ ಕಡಿಮೆ ಮಾಡಿದರೆ ಉತ್ತಮವಾದಂಥ sauce ಮಾಡುವುದಕ್ಕೆ ಅವಕಾಶವಿದ್ದು, ಆ ರೀತಿಯ ತಳಿ ಅಭಿವೃದ್ಧಿಯಾಗಬೇಕೆಂದು ಅವರು ಹೇಳಿದರು. ನಮ್ಮ ಸಂಶೋಧನಾ ಕೇಂದ್ರಗಳು ಏನು ಮಾಡುತ್ತಿವೆ? ನಮ್ಮಲ್ಲಿ ಬೆಳೆದಂಥ tomato ಹಣ್ಣನ್ನು ಕಿಲೋ ಒಂದಕ್ಕೆ 50 ಪೈಸೆಯಂತೆ ಸಹ ಕೇಳುವವರು ಇವತ್ತು ಇಲ್ಲ. ಈಗ ಅದಕ್ಕೆ 2 ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಟ್ಟು ತೆಗೆದು ಕೊಳ್ಳುವಂಥ ಸ್ಥಿತಿಯುಂಟಾಗಿದೆ. ಬದನೆಕಾಯಿ ಇರಬಹುದು, ಅಥವಾ ಬೇರೆ ತರಕಾರಿಗಳು ಇರಬಹುದು. ರೈತರು ಬೆಳೆದಂಥ ಬೆಳೆ, ತೋಟಗಾರಿಕಾ ಬೆಳೆ ಇವತ್ತು ಎಷ್ಟು ಕಷ್ಟದಲ್ಲಿದೆ ಎಂಬುದನ್ನು ನೋಡಿದ್ದೇವೆ. ದ್ರಾಕ್ಷಿ ಬೆಳೆದಂಥವರ ತೊಂದರೆ ಇನ್ನೊಂದು ಕಡೆ ಇದೆ. ಅದನ್ನು ಒಣಗಿಸುವುದಕ್ಕೆ ಬೇಕಾದಂಥ ವ್ಯವಸ್ಥೆ ಇಲ್ಲದೆ ಬಿಜಾಪುರದಲ್ಲಿ ಏನು ಕಷ್ಟವಾಗಿದೆ ಎಂಬುದನ್ನು ನೋಡುತ್ತಿದ್ದೇವೆ. ಬಿಜಾಪುರದಿಂದ ಇವತ್ತು ದ್ರಾಕ್ಷಿ ವಿದೇಶಕ್ಕೆ ರಫ್ತು ಆಗುತ್ತಿರುವುದನ್ನು ನೋಡುತ್ತಿದ್ದೇವೆ. ಆದರೆ ಅಲ್ಲಿ ಮಾರಾಟ ಮಾಡುವುದಕ್ಕೆ ಬೇಕಾದಂಥ ಯೋಗ್ಯ ವ್ಯವಸ್ಥೆಯನ್ನು ನಾವು ಅಲ್ಲಿ ಕಲ್ಪಿಸಿಕೊಡದಿರುವುದರಿಂದ ಆಡಳಿತ ಮಾಡಿದವರು ಅವರ ಬಗ್ಗೆ ಮೊಸಳೆ ಕಣ್ಣೀರಿನ ಭಾಷಣಗಳನ್ನೇ ಇಷ್ಟು ವರ್ಷ

ಮಾಡಿರುವುದರಿಂದಾಗಿ, ಅಲ್ಲಿ ಯಾವುದೇ ಮೂಲಭೂತ ಸೌಕರ್ಯಗಳು ಆಗಿಲ್ಲ. ಹಾಗಾಗಿ ಇವತ್ತು ನಾವು ಕಷ್ಟ ಅನುಭವಿಸುತ್ತಿದ್ದೇವೆ. ಹಾಗಾಗಿ ಘನತೆವೆತ್ತ ರಾಷ್ಟ್ರಪತಿಗಳಾದ ಸನ್ಮಾನ್ಯ ಅಬ್ದುಲ್ ಕಲಾಂರವರು ಹೇಳಿದ ನಂತರವಾದರೂ ನಾವು ಈ ದಿಕ್ಕಿನಲ್ಲಿ ಜವಾಬ್ದಾರಿ ಸ್ವೀಕರಿಸಿಕೊಂಡು ಮುಂದೆ ಹೋಗಬೇಕಾದಂಥ ಅಗತ್ಯತೆ ಇದೆ. ಆ ರೀತಿ ಬಂಜರು ಭೂಮಿಯಲ್ಲಿ ಯಾವ ರೀತಿಯಾದಂಥ ಪರ್ಯಾಯ ಇಂಧನ ಮೂಲಗಳನ್ನು ಬೆಳೆಯಬಹುದು, ಅಥವಾ ತೋಟಗಾರಿಕಾ ಕ್ಷೇತ್ರಗಳನ್ನು ಹೇಗೆ ನಾವು ಅಭಿವೃದ್ಧಿಪಡಿಸಬಹುದು, ಅದಕ್ಕೆ ಬೇಕಾದಂಥ ಮಾರುಕಟ್ಟೆ ವ್ಯವಸ್ಥೆಗಳನ್ನು ಹೇಗೆ ರೂಪಿಸಬಹುದು ಇತ್ಯಾದಿಗಳ ಬಗ್ಗೆ ಯೋಜನೆ ಆಗಬೇಕಾಗಿದೆ. ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ವಾರ್ಷಿಕ ವರದಿ, ನಮ್ಮ ಕಮಿಟಿಗಳ ವರದಿಗಳು ಇತ್ಯಾದಿಗಳನ್ನು ನಾವು ನೋಡುತ್ತಿದ್ದೇವೆ. ಆ ತೋಟಗಾರಿಕಾ ಇಲಾಖೆಯಲ್ಲಿ ಒಂದು ಸಾವಿರ ಹುದ್ದೆಗಳ ಖಾಲಿ ಇವೆ. ಇದರಿಂದ ನಾವು ತೋಟಗಾರಿಕೆಯನ್ನು ಹೇಗೆ ಅಭಿವೃದ್ಧಿಪಡಿಸುವುದಕ್ಕೆ ಆಗುತ್ತದೆ? ಇದು ಹಿಂದಿನ ಸರ್ಕಾರಗಳಿಂದ ಬಳುವಳಿಯಾಗಿ ಬಂದಿದೆ. ತೋಟಗಾರಿಕೆಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂದಾದರೆ, ನಾವು ಅಲ್ಲಿರುವಂಥ ಖಾಲಿ ಹುದ್ದೆಗಳನ್ನು ತುಂಬುವುದಾಗಲೀ, ಅಲ್ಲಿರುವಂಥವರಿಗೆ ಇವತ್ತಿನ ದಿನಕ್ಕನುಗುಣವಾದ ಉತ್ತಮ, ಗುಣಮಟ್ಟದ ಮತ್ತು ಅಗತ್ಯತೆಗಳ ಬೆಳೆಯನ್ನು ಬೆಳೆಯುವುದಕ್ಕೆ ಆಗಲೀ ಪ್ರೋತ್ಸಾಹ ಕೊಡಬೇಕಾದಂಥ ಅಗತ್ಯತೆಗಳು ಇವೆ. ಹಾಗಾಗಿ, ತೋಟಗಾರಿಕಾ ಕ್ಷೇತ್ರಕ್ಕೆ ನಮ್ಮ ರಾಜ್ಯದ ಅನೇಕ ಜಿಲ್ಲೆಗಳು ಬಹಳ ಸಮೃದ್ಧವಾಗಿವೆ. ಅದರಿಂದ ಲಾಭವನ್ನು ತೆಗೆದುಕೊಳ್ಳುವುದಕ್ಕೆ ಬೇಕಾಗಿರುವಂಥ ಯೋಜನೆ ಮಾಡಬೇಕು. ನಮ್ಮ ರಾಷ್ಟ್ರೀಯ ತೋಟಗಾರಿಕಾ ನೀತಿಯು ಸಹ ಬಹಳ ಅತ್ಯುತ್ತಮವಾಗಿ ಇವತ್ತು ರೂಪಿತವಾಗುತ್ತಿರುವುದನ್ನು ಕಂಡಿದ್ದೇವೆ. ಅದು ಕರ್ನಾಟಕದ ಕೆಲವು ಜಿಲ್ಲೆಗಳಿಗೂ ಅನುಷ್ಠಾನಕ್ಕೆ ಬರುತ್ತಿರುವುದನ್ನು ಕಂಡಿದ್ದೇವೆ. ಹಾಗಾಗಿ ಹೆಚ್ಚೆಚ್ಚು ಕೇಂದ್ರ ಸರ್ಕಾರದ ಯೋಜನೆಯ ಲಾಭಗಳನ್ನೂ ತೆಗೆದುಕೊಂಡು ನಮ್ಮ ರಾಜ್ಯದಲ್ಲಿರುವಂಥ ತೋಟಗಾರಿಕಾ ಕ್ಷೇತ್ರವನ್ನು ಹೆಚ್ಚು ಅಭಿವೃದ್ಧಿಪಡಿಸುವುದಕ್ಕೆ ಬೇಕಾಗಿರುವಂಥ ಪ್ರಯತ್ನಗಳು ಆಗಬೇಕು. ತೋಟಗಾರಿಕೆ ಬಗ್ಗೆ ಒಂದು ಅಂಶವನ್ನು ಹೇಳುತ್ತೇನೆ. ತೋಟಗಾರಿಕಾ farms ಇದೆ. ಇವತ್ತು ನಾವು ನಮ್ಮ ಹಿಂದಿನವರನ್ನು ನೆನೆಸಿಕೊಳ್ಳಬೇಕಾಗುತ್ತದೆ. ತೋಟಗಾರಿಕಾ ಇಲಾಖೆ ಪ್ರಾರಂಭವಾದಾಗ ಮಾನ್ಯ ಮರೀಗೌಡರು ಅವರು farms ಅನ್ನು ಮಾಡಿದರು. ಇವತ್ತು ಇಡೀ ರಾಜ್ಯದಲ್ಲಿರುವಂಥ ತೋಟಗಾರಿಕಾ

farm ಗಳನ್ನು ನೋಡಲಿ. ಇವತ್ತು ಹಾಳಾಗಿ ಹೋಗುತ್ತಿವೆ. ಅಲ್ಲಿಂದ ಉತ್ಪನ್ನಗಳು ನಮಗೆ ಬರುತ್ತಿಲ್ಲ. ಲಾಭದಾಯಕವಾಗಿ ನಮಗೆ ಸಿಗುತ್ತಿಲ್ಲ. ನಾನು ಕಳೆದ 12 ವರ್ಷಗಳಿಂದ ಶಾಸಕನಾಗಿ ನೋಡುತ್ತಿದ್ದೇನೆ. ಸರ್ಕಾರದ ತೋಟಗಾರಿಕಾ ಮಂತ್ರಿಗಳು ಆ ತೋಟಗಾರಿಕಾ farmಗಳನ್ನು ಹೇಗೆ ನವೀಕರಿಸಲಾಗುತ್ತದೆ ಎನ್ನುವುದರ ಬಗ್ಗೆ ಮಾತನಾಡುತ್ತಾರೆ. ನನ್ನ ಕ್ಷೇತ್ರದಲ್ಲಿ ಇರುವಂಥ ಯಲ್ಲಾಪುರ ತಾಲ್ಲೂಕಿನಲ್ಲಿ 70 ಎಕರೆ ಇದೆ. ಅದೇ ರೀತಿ ಬೇರೆ ಬೇರೆ ಕಡೆ ಬೇರೆ ಬೇರೆ ಇದೆ. ಆ 70 ಎಕರೆಯಲ್ಲಿ ಕಳೆದ 12 ವರ್ಷಗಳಿಂದ ನಾನು ಬೊಬ್ಬೆ ಹೊಡೆದುಕೊಂಡರೂ ಸಹ ಒಂದು ಎಕರೆ ಸಹ ಹೆಚ್ಚಿಗೆ ಅಭಿವೃದ್ಧಿ ಮಾಡಲಿಕ್ಕೆ ಇವರಿಂದ ಆಗಲಿಲ್ಲ. ಈ ರೀತಿ ನಮ್ಮ ನೀತಿಗಳು ಆದರೆ ಕೇವಲ ಭಾಷಣಕ್ಕೆ ಅಷ್ಟೇ ಸೀಮಿತವಾಗಿ ಮತಗಳಿಕೆಗೆ ಅಷ್ಟೇ ಸೀಮಿತವಾಗಿ ಯೋಜನೆಗಳನ್ನು ಘೋಷಣೆಗಳನ್ನು ನಾವು ಹಾಕುವಂಥದ್ದು ಆದರೆ ಮಾನ್ಯ ಅಬ್ದುಲ್ ಕಲಾಂರವರ ಈ ಕನಸು ಮಾತ್ರ ಅಲ್ಲ, ಯಾವ ಕನಸ್ಸು ಇದ್ದರೂ ಅದನ್ನು ನನಸು ಮಾಡುವುದಕ್ಕೆ ಆಗದಿರುವಂಥ ಸ್ಥಿತಿ ಇರುತ್ತದೆ. ಹಾಗಾಗಿ ನಮ್ಮ ರಾಜಕೀಯ ಇಚ್ಛಾಶಕ್ತಿಯ ಮೂಲಕ ನಮ್ಮ ಆಡಳಿತ ವ್ಯವಸ್ಥೆಯನ್ನು ನಾವು ಬಿಗುವಾಗಿ ಈ ರೀತಿಯ ಸಂಗತಿಗಳಿಗೆ ಅವರನ್ನು ಕಮಿಟ್ ಮಾಡಿಸಿ ಮುನ್ನಡೆಯುವಂಥ ಪ್ರಯತ್ನವನ್ನು ಮಾಡಬೇಕಾಂಥ ಅಗತ್ಯತೆ ಇದೆ.

ಅಧ್ಯಕ್ಷರು: ನಿಮ್ಮ ಸರ್ಕಾರಕ್ಕೆ ಏನು ಸಲಹೆ ಕೊಡುತ್ತೀರಿ ಅದನ್ನು ಹೇಳಿ. ಅದು ಬಹಳ ಮುಖ್ಯ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗತಾನೇ ಬಂದಂಥ ಸರ್ಕಾರಕ್ಕೆ.

ಅಧ್ಯಕ್ಷರು: ಯಾವಾಗ ಬಂದರೇನು ಬಂದಿದ್ದೀರಲ್ಲಾ? ನೀವು ಬಂದಿದ್ದೀರಲ್ಲಾ ಸ್ಪಷ್ಟವಾದ ಒಂದು ಸಲಹೆಗಳನ್ನು ಕೊಟ್ಟು ಒಂದು ನಿಗದಿತ ಅವಧಿಯಲ್ಲಿ ಏನು ಮಾಡಬೇಕು ಎಂಬುದನ್ನು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಹಿಂದಿನ ಸರ್ಕಾರಗಳು ಜನಪರವಾದಂಥ ಗ್ರಾಮೀಣ ಜನರ ಪರವಾಗಿ ಕೆಲಸ ಮಾಡಿದ್ದರೆ..

(ಗೊಂದಲ)

ಅಧ್ಯಕ್ಷರು: ದಯಮಾಡಿ ನೀವೇಕೆ ಇಂಟರ್‌ಫಿಯರ್ ಆಗುತ್ತೀರಿ? ಅವರು ಮಾತನಾಡಲಿ. ಅವರು ಮಾತನಾಡಲು ಅವಕಾಶ ಕೊಡಿ. ಏಕೆ ಹೀಗೆ ಮಾಡುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಹೊಸ ಸರ್ಕಾರದಲ್ಲಿ ನಿಶ್ಚಿತವಾಗಿ ಈ ಎಲ್ಲಾ ವಿಷಯಗಳ ಬಗ್ಗೆ ಒಂದು ಬದ್ದತೆ ಇದೆ. ಮಾನ್ಯ ರಾಷ್ಟ್ರಪತಿಯವರ ಬಾಷಣದಲ್ಲಿ ಉಲ್ಲೇಖವಾಗಿರುವ ವಿಷಯಗಳ ಬಗ್ಗೆ ಬದ್ದತೆ ಇದೆ.

ಅಧ್ಯಕ್ಷರು: ನಾನು ಬದ್ದತೆಯ ಬಗ್ಗೆ ಹೇಳುತ್ತಿಲ್ಲ. ನಿರ್ದಿಷ್ಟವಾಗಿ ಒಂದು ನಿಗದಿಯಾದ ಅವಧಿಯಲ್ಲಿ ಏನಾದರೂ ಇದಕ್ಕೆ ಮಾಡಲು ಸಾಧ್ಯತೆ ಇದೆಯೇ ಎಂಬ ಬಗ್ಗೆ ನಿಮ್ಮಲ್ಲಿ ಏನಾದರೂ ಮಾಹಿತಿಗಳು ಇದ್ದರೆ ಸಲಹೆ ಕೊಡಿ ಎಂದೆ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್: ಮಾನ್ಯ ಅಧ್ಯಕ್ಷರೆ, ಪಾಪ ಇದು ಮಾನ್ಯ ಕಾಗೇರಿಯವರದ್ದು ತಪ್ಪಲ್ಲ. ಅವರು ಗೆದ್ದಾಗಿನಿಂದ ಯಾವಾಗಲೂ ವಿರೋಧ ಪಕ್ಷದಲ್ಲೇ ಕುಳಿತು ಅದೇ ಧಾಟಿಯಲ್ಲಿ ಮಾತನಾಡತಕ್ಕ ಅಭ್ಯಾಸ ಅವರಿಗೆ! ಹಾಗಾಗಿ ಪಾಪ ಅಭ್ಯಾಸ ಬಲದಿಂದ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು: ಇಲ್ಲ. ಅವರು ಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಹೊಸ ಸರ್ಕಾರ ನಿಶ್ಚಿತವಾಗಿ ನಾವು ಈ ಎಲ್ಲಾ ವಿಷಯಗಳ ಬಗ್ಗೆ ಬದ್ಧತೆಯನ್ನು ಹೊಂದಿದ್ದೇವೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಪ್ರತಿಯೊಬ್ಬರೂ ಸಹ ಆ ಬದ್ದತೆಯನ್ನು ಆಗಾಗ್ಗೆ ಪ್ರಕಟೀಕರಿಸುತ್ತಿದ್ದಾರೆ. ಅದಕ್ಕೆ ಬೇಕಾಗಿರುವಂಥ ಅಗತ್ಯ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಈ ಅಧಿವೇಶನವನ್ನು ತಾವು ಸೂಚಿಸಿದಂತೆ ಕರೆದು ಇಲ್ಲಿ ಚರ್ಚೆ ಮಾಡುತ್ತಿರುವುದೇ ಅದರ ಬದ್ದತೆಯ ಪ್ರಮುಖವಾದ ಅಂಶವಿದೆ. ನಿಶ್ಚಿತವಾಗಿ ಬೇರೆ ಬೇರೆ ಯೋಜನೆಗಳ ಬಗ್ಗೆ, ಬೇರೆ ಬೇರೆ ಇಲಾಖೆಗಳ ಬಗ್ಗೆ ಸುಧಾರಣೆಯಾಗುವುದರ ಬಗ್ಗೆ, ನಾನು ಆಗಲೇ ಹೇಳಿದಂತೆ ಪ್ರತಿಯೊಂದು ವಿಷಯದ ಬಗ್ಗೆ ನೀಲಿನಕ್ಷೆಯನ್ನು ದೃಢಪಡಿಸುವುದಕ್ಕೆ ಡೆವಲಪ್‌ಮೆಂಟ್ ಕಮಿಷನರ್ ಇರಬಹುದು, ಯೋಜನಾ ಆಯೋಗದವರು ಇರಬಹುದು ಎಲ್ಲಾ ಇಲಾಖೆಯವರು ಇರಬಹುದು, ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯೆಂದು ಇದೆ, ಇದಲ್ಲಿ ನಾನು ನೋಡುತ್ತಿದ್ದೆ, ಜನಶಕ್ತಿ ಮತ್ತು ಉದ್ಯೋಗ ವಿಭಾಗ, ರಾಜ್ಯ ಯೋಜನಾ ಮಂಡಳಿ, ಜಿಲ್ಲಾ ಯೋಜನಾ ವಿಭಾಗ, ಸಂಪೂರ್ಣ ಯೋಜನಾ ವಿಭಾಗ, ಮೌಲ್ಯಮಾಪನಾ ವಿಭಾಗ, ಮಾನವ ಅಭಿವೃದ್ಧಿ ವಿಭಾಗ ಈ ರೀತಿಯಾಗಿ ಇದೆ. ಇವೆಲ್ಲಾ ಏನೇನು ಮಾಡುತ್ತಿವೆ ಎಂಬ ಬಗ್ಗೆ ಇಂಥ ಸಂದರ್ಭದಲ್ಲಾದರೂ ಸ್ವಲ್ಪ ಬೆಳಕಿಗೆ ಬಂದರೆ ನಾವು ಹೀಗೀಗೇ ಮಾಡಿದ್ದೇವೆ ಮಾನವ ಶಕ್ತಿಯ ಬಗ್ಗೆ ನಮ್ಮ ಉದ್ಯೋಗದ ಅವಕಾಶಗಳ ಬಗ್ಗೆ, ಆ ಇಲಾಖೆಯವರು ಇಂಥ ಸಂದರ್ಭದಲ್ಲಾದರೂ ನಾವು ಸ್ವಲ್ಪ ಹೀಗೆ, ಮಾಡುತ್ತಿದ್ದೇವೆಂದು ಬೆಳಕಿಗೆ ಬಂದರೆ ಬಹಳ ಅನುಕೂಲವಾಗುತ್ತದೆ. ಆ ಎಲ್ಲಾ

ಇಲಾಖೆಗಳು ನಿಶ್ಚಿತವಾಗಿ ಜವಾಬ್ದಾರಿಯಿಂದ ಈ ಎಲ್ಲಾ ಅಂಶಗಳನ್ನು ಅನುಷ್ಠಾನಗೊಳಿಸುವುದಕ್ಕೆ ಬೇಕಾಗಿರುವಂಥ ಪ್ರಯತ್ನವನ್ನು ಮಾಡುತ್ತೇವೆ. ಈ ರೀತಿಯ ಕನಸನ್ನು ಡಾ: ಅಬ್ದುಲ್ ಕಲಾಂರವರೇನು ಕಂಡಿದ್ದಾರೆ ಈ ರೀತಿಯ ಕನಸುಗಳು ಕರ್ನಾಟಕದ ದೃಷ್ಟಿಯಿಂದ ಇಡೀ ದೇಶದ ದೃಷ್ಟಿಯಿಂದ ಕಂಡಿರುವುದನ್ನು ನಾವು ನೋಡಿದ್ದೇವೆ. ನಾವೂ ಸಹ ಈ ರೀತಿ ಕನಸನ್ನು ಕಾಣಬೇಕು. ಒಳ್ಳೆಯ ಅಭಿವೃದ್ಧಿಯಲ್ಲಿ ಮುನ್ನಡೆಯುವುದಕ್ಕೆ ದೇಶದಲ್ಲಿ ಸಂವೃದ್ಧವಾಗಿ ನಾವು ನಮ್ಮ ಜನರನ್ನು ಮುನ್ನಡೆಸುವುದಕ್ಕೆ ಬೇಕಾಗಿರುವಂಥ ರಚನಾತ್ಮಕವಾದಂಥ ಧನಾತ್ಮಕವಾದಂಥ ಕನಸನ್ನು ಪ್ರತಿಯೊಬ್ಬರೂ ಕಾಣಲೇ ಬೇಕು. ಅದನ್ನು ಅನುಷ್ಟಾನಗೊಳಿಸುವುದಕ್ಕೆ ಬಲಿಷ್ಟವಾದಂಥ ಆತ್ಮ ವಿಶ್ವಾಸದಿಂದ ನಮ್ಮ ರಾಜಕೀಯ ಮತ್ತು ಸಾಮಾಜಿಕ ಜವಾಬ್ದಾರಿಗಳಿಂದ ನಾವು ಮುನ್ನೆಡೆಯುವಂಥ ಪ್ರಯತ್ನವನ್ನು ಮಾಡಲೇ ಬೇಕಾಗಿದೆ. ಆಹಾರ ಸಂಸ್ಕರಣೆ ವಿಷಯವಿರಬಹುದು, ಬೇರೆ ಬೇರೆ ವೈದ್ಯಕೀಯ ಕ್ಷೇತ್ರದ್ದು ಇರಬಹುದು, ಕೈಗಾರಿಕಾ ಕ್ಷೇತ್ರ, ಗ್ರಿಡ್ ಸಂಪರ್ಕ, ಗ್ರಾಮೀಣಾಭಿವೃದ್ಧಿ, ನೀರು ನಿರ್ವಹಣೆ, ಅಭಿವೃದ್ಧಿ ವಾಹಕಗಳು ಇತ್ಯಾದಿ ಎಲ್ಲಾ ವಿಭಾಗಗಳು ಇದೆ. ನಾನು ಅದೆಲ್ಲದರ ಬಗ್ಗೆ ಮಾತನಾಡಿದರೆ ಸಾಕಷ್ಟು ಸಮಯವಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಆ ವಿಷಯಗಳ ಬಗ್ಗೆ ವಿಸ್ತಾರವಾಗಿ ಮಾತನಾಡುವುದಕ್ಕೆ ಹೋಗದೆ ಈ ಕನಸನ್ನು ನನಸು ಮಾಡುವ ಜವಾಬ್ದಾರಿಯನ್ನು ಸ್ವೀಕಾರ ಮಾಡೋಣ. ನಾನು ಆಗಲೇ ಹೇಳಿದೆ ಕನಸನ್ನು ಕಾಣೋದು ತಪ್ಪಿಲ್ಲ. ಮಾನ್ಯ ಅಟಲ್‌ಬಿಹಾರಿ ವಾಜಪೇಯಿಯವರು ಕನಸು ಕಂಡರು, ಈ ದೇಶದಲ್ಲಿ ಚತುಷ್ಪತ ರಸ್ತೆಯಾಗಬೇಕೆಂದು, ಅದು ನನಸು ಮಾಡುವುದಕ್ಕೆ ಬದ್ಧವಾಗಿ ಹಣವನ್ನು ತೆಗೆದಿಟ್ಟು ಕೆಲಸ ಮಾಡಿದರು. ಎನ್.ಡಿ.ಎ. ಸರ್ಕಾರದಲ್ಲಿ ಸರ್ವ ಶಿಕ್ಷಣ ಅಭಿಯಾನದ ಕನಸನ್ನು ಕಂಡರು. ಹೊಸ ರೂಪ ಇವತ್ತು ಪ್ರತಿ ಪ್ರಾಥಮಿಕ ಶಾಲೆಗಳಿಗೆ ಬಂದಿರುವುದನ್ನು ಕಾಣುತ್ತಿದ್ದೇವೆ. ಈ ರೀತಿ ಅಭಿವೃದ್ಧಿ ಪರವಾದ ಕನಸನ್ನು ಕಾಣಬೇಕು, ಜನರಿಗೆ ಹಿತವಾದಂಥ ರೀತಿಯಲ್ಲಿ ಸಂವೃದ್ಧವಾಗುವಂಥ ರೀತಿಯಲ್ಲಿ ಆಡಳಿತ ವ್ಯವಸ್ಥೆ ರೂಪಿಸುವಂಥ ಪ್ರಯತ್ನಗಳು ಆಗಬೇಕು. ಹಾಗಾದಾಗ ನಿಶ್ಚಿತವಾಗಿ ನಾವು ನಮ್ಮ ದೇಶವನ್ನಿರಲಿ ರಾಜ್ಯವನ್ನಿರಲಿ ಮುನ್ನಡೆಸಲು ಸಾಧ್ಯವಿದೆ. ದೇಶ ಮುನ್ನಡೆಯಬೇಕೆಂದರೆ ರಾಜ್ಯ ಮುನ್ನಡೆಯಲೇ ಬೇಕು. ಇಲ್ಲಿ ಮುಖ್ಯವಾಗಿರುವುದೇನು, ಈ 11 ಸೂತ್ರಗಳಲ್ಲಿ ಹೇಳಿರುವುದೇನು, ಇವತ್ತು ಕರ್ನಾಟಕ ಪ್ರತಿಯೊಬ್ಬ ಪ್ರಜೆಯ ವಾರ್ಷಿಕ ಆದಾಯ 26 ಸಾವಿರ ರೂಪಾಯಿಗಳು ಇದೆ, ಅದು 75 ಸಾವಿರ ರೂಪಾಯಿಗೆ ಹೆಚ್ಚಬೇಕು. ಈ 11

ಸೂತ್ರಗಳ, 11 ಧ್ಯೇಯವಾಕ್ಯಗಳ 11 ವಿಭಾಗಕ್ಕೆ ಕೊಡಬೇಕಾದಂಥ ಪ್ರಾಮುಖ್ಯತೆ ಯೇನೆಂದರೆ ಇವತ್ತು ಕರ್ನಾಟಕದ ಪ್ರತಿಯೊಬ್ಬ ವ್ಯಕ್ತಿಯ ವಾರ್ಷಿಕ ವರಮಾನ 26 ಸಾವಿರ ರೂಪಾಯಿಗಳಿದೆ. ಇದು 75 ಸಾವಿರಕ್ಕೆ ಮುಂದಿನ ಹತ್ತು ವರ್ಷದಲ್ಲಿ ಹೋಗಬೇಕು. ಮುಂದಿನ ಹತ್ತು ವರ್ಷದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ವಾರ್ಷಿಕ ವರಮಾನ 75 ಸಾವಿರ ರೂಪಾಯಿಗಳಾಗಬೇಕಾದರೆ ನಾವು ಇದಕ್ಕೆ ಆ ರೀತಿಯ ಆಧ್ಯತೆಯನ್ನು ಕೊಟ್ಟು ಮುನ್ನಡೆಯಬೇಕು. ಆ ರೀತಿಯಲ್ಲಿ ನಮ್ಮದು ಆಗಬೇಕೆಂಬ ಒಂದು ಇಚ್ಛೆ ಏನಿದೆ ಅದನ್ನು ಮತ್ತೆ ಮತ್ತೆ ನಾವು ಪ್ರಕಟಿಕರಿಸಬೇಕು ಮತ್ತು ಅದಕ್ಕೆ ಬದ್ಧತೆಯನ್ನು ತೋರಿಸಬೇಕು. ಇವತ್ತು ಈ ಸದನ ಬೇಕಿತ್ತೋ ಬೇಡವಾಗಿತ್ತೋ ಈ ವಿಷಯ ಚರ್ಚೆಯಾಗಬೇಕಿತ್ತೋ ಬೇಡವಾಗಿತ್ತೋ ಎಂಬ ವಿಷಯಗಳು ಪ್ರಸ್ತಾಪವಾಗಿರುವುದು ಬಹಳ ದುರ್ದೈವವೆಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ ಇದು ಆಗಲೇ ಬೇಕು, ನಮ್ಮ ಮೇಲಿರುವ ಜವಾಬ್ದಾರಿಯನ್ನು ನಾವು ಮತ್ತೆಮತ್ತೆ ನೆನಪಿಸಿಕೊಳ್ಳಬೇಕು. ನಾವು ಈ ದಿಕ್ಕಿನಲ್ಲಿ ಮುನ್ನಡೆಯುವಂಥ ಸಂಕಲ್ಪವನ್ನು ಮತ್ತೆ ಮತ್ತೆ ತೊಡಲೇಬೇಕು. ಹಾಗಾಗಿ ಈ ರೀತಿಯ ಅವಕಾಶಗಳನ್ನು ನಿಶ್ಚಿತವಾಗಿ ಹೆಚ್ಚು ಹೆಚ್ಚು ಬಳಸಿಕೊಳ್ಳಬೇಕು ಮತ್ತು ಅದಕ್ಕೆ ನಾವು ಕಮಿಟ್ ಆಗಬೇಕು. ನಾವು ನಮ್ಮನ್ನು ಇಂಥ ವಿಷಯಗಳಿಗೆ ಕಮಿಟ್ ಮಾಡಿಕೊಳ್ಳದಿದ್ದರೆ ನಾವು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ ಎನ್ನುವುದೇ ಅದರ ಅರ್ಥವಾಗುತ್ತದೆ. ಆದ್ದರಿಂದ ಇದನ್ನು ಗಂಭೀರವಾಗಿ ತೆಗೆದುಕೊಂಡು ನಮ್ಮ ಕರ್ನಾಟಕದಲ್ಲಿ ರಾಷ್ಟ್ರಪತಿಗಳು ಬಂದು ಭಾಷಣ ಮಾಡಿ ಹೋದ ನಂತರ ಈ ಕ್ಷೇತ್ರದಲ್ಲಿ ಹೀಗೆ ಅಭಿವೃದ್ಧಿಯನ್ನು ಮಾಡಿದ್ದೇವೆ ಎಂಬುದನ್ನು ಇಡೀ ರಾಷ್ಟ್ರದ ಜನತೆಗೆ ತೋರಿಸಿ ಕೊಡುವುದಕ್ಕೆ ಕರ್ನಾಟಕದವರು ನಾವು ಮಾದರಿಯಾಗಬೇಕು. ಈ ಸದನದ ಮೂಲಕ ಆ ರೀತಿ ಒಂದು ಸತ್‌ಸಂಕಲ್ಪ ನಿರ್ಮಾಣವಾಗಬೇಕು. ಹಾಗೆ ಆದಾಗ ಮಾತ್ರ ನಮ್ಮ ಕನಸುಗಳು ನನಸಾಗಲು ಸಾಧ್ಯ. ಭಾರತ 2020ರ ಹೊತ್ತಿಗೆ ಅಭಿವೃದ್ಧಿ ಹೊಂದಿದ ದೇಶದ ಸಾಲಿನಲ್ಲಿರಲು ಸಾಧ್ಯ. ಜಪಾನ್ ಎರಡನೆಯ ಮಹಾಯುದ್ಧದಲ್ಲಿ ಇರಲೇ ಇಲ್ಲವಂತೆ, ಆದರೆ ಇವತ್ತು ಜಪಾನ್ ಜಗತ್ತಿನ ಸರ್ವಶಕ್ತದೇಶವಾಗಿದೆ. ಇಸ್ರೇಲ್ ಎಂಬುದೇ ಇರಲಿಲ್ಲ. ಆದರೆ ಇವತ್ತು ಇಸ್ರೇಲ್ ಜಗತ್ತನ್ನು ನಿಯಂತ್ರಿಸುವ ಒಂದು ಶಕ್ತಿಯುತವಾದ ದೇಶವಾಗಿದೆ. ಜರ್ಮನ್ ಇದೆ, ಕೊರಿಯಾ ಇದೆ, ಆ ದೇಶಗಳೇ ಇವತ್ತು ಜಗತ್ತಿನ ಸೂಪರ್ ಪವರ್ ಆಗಲು ಸಾಧ್ಯವಿದ್ದರೆ ಭಾರತ ಏಕಾಗುವುದಿಲ್ಲ? ಭಾರತ ಆಗುತ್ತದೆ, ಆದರೆ ಭಾರತ ಆ ರೀತಿ ಆಗಲು

ಬೇಕಾಗಿರುವಂಥ ರಾಜಕೀಯ ಸಂಕಲ್ಪಗಳು ಹಿಂದಿನ ಸರ್ಕಾರಗಳಲ್ಲಿ ಸ್ವಾತಂತ್ರ್ಯದ ನಂತರದಲ್ಲಿ ಆಗಿಲ್ಲ. ಆದರೆ ರಾಷ್ಟ್ರಪತಿಗಳು ಅಥವಾ ಹಿಂದಿನ ಕೇಂದ್ರದಲ್ಲಿ ಇದ್ದ ಎನ್.ಡಿ.ಎ ಸರ್ಕಾರಗಳು ಆ ರೀತಿ ಆಗಬಹುದು ಎಂಬ ಆಶಾಕಿರಣವನ್ನು ತೋರಿಸಿಕೊಟ್ಟಿದ್ದಾರೆ. ಎನ್.ಡಿ.ಎ. ಸರ್ಕಾರ ಬಾರದೆ ಹೋಗಿದ್ದರೆ ಇಂಥ ರಾಷ್ಟ್ರಪತಿಗಳು ಸಿಗದೆ ಹೋಗಿದ್ದರೆ ನಮಗೆ ಆಶಾಕಿರಣವೇ ಹೊರಟು ಹೋಗಿತ್ತು. ಹಾಗಾಗಿ ಒಳ್ಳೆಯದನ್ನು ಮಾಡಿ ತೋರಿಸಬಹುದು ಎಂಬುದನ್ನು....

ಶ್ರೀ ಕೆ.ಆರ್. ರಮೇಶ್‌ಕುಮಾರ್: ಅವರು ಎನ್.ಡಿ.ಎ. ಸಾಧನೆಗಳನ್ನೆಲ್ಲಾ ಹೇಳುತ್ತಿದ್ದಾರೆ.

ಅಧ್ಯಕ್ಷರು: ತಾವು ಮುಗಿಸಿಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾಳೆಗೆ ಮುಂದುವರೆಸಬೇಕೆಂದರೆ ಬೆಳಿಗ್ಗೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು: ತಾವು ಈಗ ಮುಗಿಸಿ, ನಾಳೆಗೆ ಬಹಳ ಜನರು ಮಾತನಾಡುವವರಿದ್ದಾರೆ. ಇನ್ನು ಎರಡು ನಿಮಿಷದಲ್ಲಿ ಮುಗಿಸಿ. ತಾವು ಸಾಕಷ್ಟು ಮಾತನಾಡಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಯವರು): ಮಾನ್ಯ ಸದಸ್ಯರು ರಾಷ್ಟ್ರಪತಿ ಗೌರವಾನ್ವಿತ ಅಬ್ದುಲ್‌ಕಲಾಂರವರು ಯಾವ ವಿಚಾರಗಳನ್ನು ಮುಂದಿಟ್ಟಿದ್ದಾರೆ ಅದನ್ನು ಅನುಷ್ಠಾನ ತರುವಂಥ ಪ್ರಾಮಾಣಿಕ ಪ್ರಯತ್ನ ಎನ್.ಡಿ.ಎ ಸರ್ಕಾರ ಇದ್ದಾಗ ಆ ದಿಕ್ಕಿನಲ್ಲಿ ದಾಪುಗಾಲು ಹಾಕಿದ್ದೇವೆ ಎನ್ನುವಂಥ ಮಾತನ್ನು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು: ತಾವು ಮುಗಿಸಿ. ಬಹಳ ಜನರು ಮಾತನಾಡುವವರಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಎನ್.ಡಿ.ಎ. ಸರ್ಕಾರ ಬರುವುದಕ್ಕೆ ಮೊದಲು ನಮಗೆ ಒಂದು ರೀತಿಯ ಕರಾಳಛಾಯೆ ಬಂದಿತ್ತು ಎಂದು ನಾನು ಹೇಳುತ್ತೇನೆ, ಅದನ್ನು ಕಾಂಗ್ರೆಸ್‌ನವರು ಒಪ್ಪುತ್ತಾರೊ ಬಿಡುತ್ತಾರೊ ಬೇರೆ ವಿಷಯ. ನಾನು ಹೇಳಬೇಕಾದನ್ನು ನಾನು ಸ್ಪಷ್ಟವಾಗಿಯೇ ಹೇಳುತ್ತೇನೆ.

ಅಧ್ಯಕ್ಷರು: ತಾವು ಕಾಂಟ್ರವರ್ಸಿಯನ್ನು ಮತ್ತೆ ಕ್ರಿಯೇಟ್ ಮಾಡಬೇಡಿ. ತಾವು ಮಾತನಾಡುವುದನ್ನು ದಯಮಾಡಿ ಸಮ್‌ಅಪ್ ಮಾಡಿ. ತಾವು ಇದಕ್ಕೆ ಕನ್‌ಫೈನ್ ಆಗಿ ಮಾತನಾಡಿದರೆ ಒಳ್ಳೆಯದು. ತಾವು ದಯಮಾಡಿ ಸಮ್‌ಅಪ್ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಕೊನೆಯಲ್ಲಿ ಹೆಚ್ಚು ಸಮಯ ತೆಗೆದುಕೊಳ್ಳಲು ಬಯಸುವುದಿಲ್ಲ. ಮುಗಿಸಲು ಬಯಸುತ್ತಿದ್ದೇನೆ. ನನ್ನ ವಿಶ್ವಾಸಕ್ಕೆ ತಕ್ಕಂತೆ ಹೇಳುತ್ತಿದ್ದೇನೆ. ನಾನು ಯಾವ ಸಮೂಹದ ಮಧ್ಯ ಇದ್ದು ನೋಡಿದವನಾಗಿ ಹೇಳುತ್ತಿದ್ದೇನೆ, ಎನ್.ಡಿ.ಎ. ಸರ್ಕಾರ ಬರುವುದಕ್ಕಿಂತ ಮೊದಲು ಈ ದೇಶದ ಆಡಳಿತ ವ್ಯವಸ್ಥೆಯ ಬಗ್ಗೆ ಒಂದು ಕರಾಳಛಾಯೆ ಮೂಡಿತ್ತು. ನಮಗೆ ಒಂದು ಆಶಾಕಿರಣವೇ ಇಲ್ಲದೆ ಇರುವಂಥ ಸ್ಥಿತಿ ನಿರ್ಮಾಣವಾಗಿತ್ತು. ಆದರೆ ವಾಜಪೇಯಿಯವರು 24 ಪಕ್ಷಗಳ ಜೊತೆಯಲ್ಲಿ ಎನ್.ಡಿ.ಎ. ಸರ್ಕಾರವನ್ನು ಆರು ವರ್ಷ ಮಾಡಿ ತೋರಿಸಿದ ಮೇಲೆ ಈ ದೇಶದಲ್ಲಿ ಒಳ್ಳೆಯದನ್ನು ಮಾಡಿ ತೋರಿಸಬಹುದು ಆ ರೀತಿ ರಾಜಕೀಯ. ಇಚ್ಛಾಶಕ್ತಿ ಇರುವಂಥ ನೇತೃತ್ವ ನಮಗೆ ಸಿಕ್ಕಿದೆ ಎನ್ನುವ ಸಂತೋಷ ಲಭ್ಯವಾಗಿದ್ದನ್ನು ನಾವು ನೋಡಿದ್ದೇವೆ. ಹಾಗಾಗಿ ನಾನು ಹೇಳುವುದು ಇವತ್ತು ಇಂಥ ರಾಷ್ಟ್ರಪತಿಗಳನ್ನು ಮಾಡಿದ್ದೇ ನಮ್ಮ ಎನ್.ಡಿ.ಎ ಸರ್ಕಾರದ ಸಾಧನೆ. ಒಳ್ಳೆಯ ಸಾಧನೆಯನ್ನು ಒಳ್ಳೆಯ ಕೆಲಸವನ್ನು ನಾವು ಮಾಡಿದ್ದೇವೆ.

(ಗೊಂದಲ)

ಈ ರೀತಿ ಕನಸನ್ನು ಕಂಡು ನನಸು ಮಾಡುವ ದಿಕ್ಕಿನಲ್ಲಿ ನಾವು ಸಂಕಲ್ಪಿತರಾಗಬೇಕಾದ ಅಗತ್ಯತೆ ಇದೆ. ಆ ದಿಕ್ಕಿನಲ್ಲಿ ಮುನ್ನಡೆಯಬೇಕಾಗಿದೆ, ನಾವು ಈ ಎಲ್ಲಾ ವಿಷಯಗಳ ಬಗ್ಗೆ ನಾನು ಆಗಲೇ ಹೇಳಿದಂತೆ ಖಾಸಗಿಯವರ ಸಹಭಾಗಿತ್ವ ತೆಗೆದುಕೊಳ್ಳುವ ಪ್ರಾಮುಖ್ಯತೆ ಇದೆ. ನಮ್ಮ ಯೋಜನಾ ಆಯೋಗದವರು, ಡೆವಲಪ್‌ಮೆಂಟ್ ಕಮಿಷನ್‌ರವರು ನಮ್ಮ ಎಲ್ಲಾ ಇಲಾಖೆಗಳು ಇದಕ್ಕೊಂದು ನೀಲಿನಕ್ಷೆಯನ್ನು ಸಿದ್ದಪಡಿಸಬೇಕಾಗಿದೆ. ಸದನದಲ್ಲಿ ಚರ್ಚೆಯಾಗಿ ನಾವು ಆ ದಿಕ್ಕಿನಲ್ಲಿ ಎಲ್ಲರೂ ಬದ್ದರಾಗಿ ಮುಂದೆ ಅದನ್ನು ಅನುಷ್ಠಾನಗೊಳಿಸುವುದಕ್ಕೆ ನಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಬೇಕಾಗಿದೆ ಎಂಬ ಮಾತನ್ನು ಹೇಳುತ್ತಾ ಸುವರ್ಣ ಕರ್ನಾಟಕದ ವರ್ಷದಲ್ಲಿ ರಾಷ್ಟ್ರಪತಿಗಳು ಈ 11 ವಿಷಯಗಳನ್ನು ನಮ್ಮ ಕಣ್ಣುಮುಂದಿಟ್ಟು ನಮಗೆ ಮುನ್ನಡೆಯಲು ಬೇಕಾಗಿರುವಂಥ ದಾರಿಯನ್ನು ಸ್ಪಷ್ಟಪಡಿಸಿ ತೋರಿಸಿದ್ದಾರೆ. ಇದು ನಾವ್ಯಾರೂ ನಮ್ಮ ಕೀಳರಿಮೆ ಎಂದು ಭಾವಿಸಿಕೊಳ್ಳುವುದು ಬೇಡ. ಈ ರೀತಿ ಸ್ಪಷ್ಟವಾದ ದಿಕ್ಕನ್ನು ತೋರಿಸಿಕೊಟ್ಟಿದ್ದಾರೆ. ಆ ದಿಕ್ಕಿನಲ್ಲೇ ಮುನ್ನಡೆಯುವಂಥ ರಾಜಕೀಯ ಸಂಕಲ್ಪವನ್ನು ಇಂತಹ ಘನ ವೇದಿಕೆಯಿಂದ ನಾವು ಮಾಡೋಣ ಮತ್ತು ಆ ದಿಸೆಯಲ್ಲಿ ಮುನ್ನಡೆದು ತೋರಿಸುವುದಕ್ಕೆ ನಮ್ಮ ಸಮ್ಮಿಶ್ರ ಸರ್ಕಾರ ಬಿ.ಜೆ.ಪಿ. ಜೆ.ಡಿ.(ಎಸ್) ಸರ್ಕಾರ

ಸಿದ್ಧವಿದೆ. ಆ ದಿಕ್ಕಿನಲ್ಲಿ ತಾವುಗಳು ಕೊಡುತ್ತಿರುವ ಸಲಹೆಗಳನ್ನು ಸ್ವೀಕರಿಸಿಕೊಳ್ಳುತ್ತೇವೆ. ಆ ರೀತಿಯಲ್ಲಿ ಮುಂದೆ ಹೋಗುತ್ತೇವೆ ಎನ್ನುವ ಮಾತನ್ನು ಹೇಳಿ ನಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ಈ ರೀತಿಯಲ್ಲಿ ನಾವು ತೋರಿಸಿ ಕರ್ನಾಟಕವನ್ನು ಒಂದು ಮಾದರಿ ರಾಜ್ಯವನ್ನಾಗಿ ಕರ್ನಾಟಕದ ಪ್ರಗತಿಯನ್ನು ಉಳಿದವರಿಗೂ ಮಾದರಿಯಾಗಿ ಮಾಡಿ ತೋರಿಸಿಕೊಡಲು ನಾವೆಲ್ಲರೂ ಸಂಕಲ್ಪಿತರಾಗೋಣ. ಪಕ್ಷಾತೀತವಾಗಿ ನಾವೆಲ್ಲಾ ಒಂದಾಗಿ ತೋರಿಸೋಣ. ನಮ್ಮ ರಾಜಕೀಯ ಭಿನ್ನಾಭಿಪ್ರಾಯಗಳು ಚುನಾವಣೆಯ ಕಾಲದಲ್ಲಿ ನಾವು ವ್ಯಕ್ತಪಡಿಸೋಣ. ಅಭಿವೃದ್ಧಿಯ ಸಂದರ್ಭದಲ್ಲಿ ನಾವೆಲ್ಲರೂ ಒಂದಾಗಿದ್ದು ಕರ್ನಾಟಕವನ್ನು ಮಾದರಿ ಕರ್ನಾಟಕವನ್ನಾಗಿ ರೂಪಿಸಲು ಬದ್ಧರಾಗೋಣ. ಆ ರೀತಿ ರಾಜಕೀಯ ಇಚ್ಛಾಶಕ್ತಿ ತೋರಿಸುವಂಥವರಾಗೋಣ ಎನ್ನುವ ಮಾತನ್ನು ಹೇಳಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದವನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 17ನೇ ಮಾರ್ಚ್ ಮಾಹೆ 2006ರ ಶುಕ್ರವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಃಶ್ಚಯಿಸಿತು)